# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಸೋಮವಾರ, ೦೧, ಸೆಪ್ಟೆಂಬರ್, ೨೦೨೫ (ಭಾದ್ರಪದ ,೧೦, ಶಕವರ್ಷ, ೧೯೪೭)<br>BENGALURU, MONDAY, 01, SEPTEMBER, 2025 (BHADRAPADA ,10, SHAKAVARSHA, 1947) | ನಂ. ೫೨೧<br>No. 521 |
|---|---|---|

## ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 188 ಬಿಬಿಎಸ್ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 01-09-2025.

## ಅಧಿಸೂಚನೆ

ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36)ರ 68ನೇ ಪ್ರಕರಣದೊಂದಿಗೆ ಓದಿಕೊಂಡು 314ನೇ ಪ್ರಕರಣದ ಮೂಲಕ ಅಗತ್ಯಪಡಿಸಿದಂತೆ, ಗ್ರೇಟರ್ ಬೆಂಗಳೂರು ಆಡಳಿತ (ಚುನಾವಣೆ) ನಿಯಮಗಳು, 2025 ಅನ್ನು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅದರಿಂದ ಭಾದಿತರಾಗುವ ಸಂಭವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಆಹ್ವಾನಿಸಿ, ಅಧಿಸೂಚನೆ ಸಂಖ್ಯೆ:ಯುಡಿಡಿ 188 ಬಿಬಿಎಸ್ 2025, ದಿನಾಂಕ: 08.08.2025 ಅನ್ನು ಕರ್ನಾಟಕ ವಿಶೇಷ ರಾಜ್ಯಪತ್ರದ ದಿನಾಂಕ: 08.08.2025ರ ಭಾಗ-IVಎ ನಲ್ಲಿ ಪ್ರಕಟಿಸಿರುವುದರಿಂದ;

ಮತ್ತು ಸದರಿ ರಾಜ್ಯಪತ್ರವನ್ನು ದಿನಾಂಕ: 08.08.2025 ರಿಂದ ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ;

ಮತ್ತು ಸರ್ಕಾರವು, ಈ ಸಂಬಂಧದಲ್ಲಿ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸ್ವೀಕರಿಸದಿರುವುದರಿಂದ;

ಈಗ, ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ, 36)ರ 68ನೇ ಪ್ರಕರಣದೊಂದಿಗೆ ಓದಿಕೊಂಡು 314ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸರ್ಕಾರವು ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## ನಿಯಮಗಳು
## ಅಧ್ಯಾಯ-I

**1. ಶೀರ್ಷಿಕೆ ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಗ್ರೇಟರ್ ಬೆಂಗಳೂರು ಆಡಳಿತ (ಚುನಾವಣೆ) ನಿಯಮಗಳು, 2025 ಎಂದು ಕರೆಯತಕ್ಕದ್ದು.

(2) ಇವುಗಳು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-** (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಅಧಿನಿಯಮ" ಎಂದರೆ, ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ, 36);

(ಬಿ) "ಬ್ಯಾಲೆಟ್ ಬಾಕ್ಸ್ ಅಥವಾ ಬ್ಯಾಲೆಟ್ ಪೇಪರ್" ಎಂದರೆ ಈ ನಿಯಮಗಳಲ್ಲಿ ಬ್ಯಾಲೆಟ್ ಬಾಕ್ಸ್ ಅಥವಾ ಬ್ಯಾಲೆಟ್ ಪೇಪರ್ ಎಂದು ಬಳಸಿರುವ ಕಡೆಗಳಲ್ಲಿ ಅನ್ವಯವಾಗುವ ಕಡೆಗಳಲ್ಲೆಲ್ಲಾ ವಿದ್ಯುನ್ಮಾನ ಮತಯಂತ್ರವೆಂದು ಅರ್ಥೈಸತಕ್ಕದ್ದು;

(ಸಿ) "ಜಾತಿ ಪ್ರಮಾಣ ಪತ್ರ" ಎಂದರೆ, ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿಯ ಮೀಸಲಾತಿ ಇತ್ಯಾದಿ) ಅಧಿನಿಯಮ, 1990ರ ಅಡಿಯಲ್ಲಿ ಕಂದಾಯ ತಾಲ್ಲೂಕಿನ ತಹಶಿಲ್ದಾರ್ ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣಪತ್ರ;

(ಡಿ) "ಕೌನ್ಸಿಲರ್" ಎಂದರೆ, ಈ ಅಧಿನಿಯಮದ 33ನೇ ಪ್ರಕರಣದ ಮೇರೆಗೆ ಚುನಾಯಿತರಾದ ಕೌನ್ಸಿಲರ್ ಮತ್ತು ಅಧಿನಿಯಮದ 39ನೇ ಪ್ರಕರಣದ ಮೇರೆಗೆ ಕೌನ್ಸಿಲರಾಗಿ ಕಾರ್ಯನಿರ್ವಹಿಸಲು ನೇಮಕಗೊಂಡ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಇ) "ನಗರ ಪಾಲಿಕೆ" ಎಂದರೆ, ಅಧಿನಿಯಮದ 5 ಮತ್ತು 7 ನೇ ಪ್ರಕರಣಗಳ ಮೇರೆಗೆ ಸ್ಥಾಪಿಸಲಾದ ಯಾವುದೇ ನಗರ ಪಾಲಿಕೆಗಳು;

(ಎಫ್) "ಆಯುಕ್ತರು" ಎಂದರೆ, ಅಧಿನಿಯಮದ 84ನೇ ಪ್ರಕರಣದ ಮೇರೆಗೆ ನೇಮಕಗೊಂಡ ಆಯುಕ್ತರು ಮತ್ತು ಅಧಿನಿಯಮದ 85ನೇ ಪ್ರಕರಣದ ಮೇರೆಗೆ ಆಯುಕ್ತರಾಗಿ ಕಾರ್ಯ ನಿರ್ವಹಿಸಲು ನೇಮಕಗೊಂಡ ವ್ಯಕ್ತಿಯನ್ನು ಒಳಗೊಳ್ಳುತ್ತದೆ;

(ಜಿ) "ಇವಿಎಂ" ಎಂದರೆ, ವಿದ್ಯುನ್ಮಾನ ಮತಯಂತ್ರ. ಇದು ಚುನಾವಣೆಗಳಲ್ಲಿ ವಿದ್ಯುನ್ಮಾನವಾಗಿ ಮತಗಳನ್ನು ದಾಖಲಿಸಲು ಮತ್ತು ಎಣಿಕೆ ಮಾಡಲು ಬಳಸುವ ಸಾಧನ;

(ಹೆಚ್) "ನಮೂನೆ" ಎಂದರೆ, ಈ ನಿಯಮಗಳಿಗೆ ಸೇರಿಸಲಾದ ನಮೂನೆ;

(ಐ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಜೆ) "ಪ್ರಿಸೈಡಿಂಗ್ ಅಧಿಕಾರಿ" ಎಂದರೆ, ಪ್ರಿಸೈಡಿಂಗ್ ಅಧಿಕಾರಿಯಾಗಿ 38ನೇ ಪ್ರಕರಣದ ಮೇರೆಗೆ ನೇಮಕಗೊಂಡ ಯಾರೇ ವ್ಯಕ್ತಿ ಮತ್ತು 8ನೇ ನಿಯಮದ ಮೇರೆಗೆ ಪ್ರಿಸೈಡಿಂಗ್ ಅಧಿಕಾರಿಯ ಯಾರೇ ಪ್ರಕಾರ್ಯಗಳನ್ನು ನಿರ್ವಹಿಸುವ ಯಾರೇ ಪೋಲಿಂಗ್ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಕೆ) "ಸಾರ್ವಜನಿಕ ರಜಾದಿನ" ಎಂದರೆ, ವರ್ಗಾವಣೀಯ ಲಿಖಿತ ಪತ್ರಗಳ ಅಧಿನಿಯಮ, 1881ರ (1881ರ ಕೇಂದ್ರ ಅಧಿನಿಯಮ 26) 25ನೇ ಪ್ರಕರಣದ ಉದ್ದೇಶಗಳಿಗಾಗಿ ಸಾರ್ವಜನಿಕ ರಜಾ ದಿನವಾಗಿರುವ ಯಾವುದೇ ದಿನ;

(ಎಲ್) "ಅರ್ಹ ಅಭ್ಯರ್ಥಿ" ಅಥವಾ `ಚುನಾಯಿಸಬೇಕಾದ ಅರ್ಹ ಅಭ್ಯರ್ಥಿ" ಎಂದರೆ, ಅಧಿನಿಯಮದ ಉಪಬಂಧಗಳು ಮತ್ತು ಅದರಡಿಯಲ್ಲಿ ಮಾಡಲಾದ ನಿಯಮಗಳ ಮೇರೆಗೆ ನಡೆಯುವ ಚುನಾವಣೆಗಳಲ್ಲಿ ಚುನಾಯಿಸಲು ಅರ್ಹತೆ ಹೊಂದಿರುವ ಅಭ್ಯರ್ಥಿ;

(ಎಂ) "ಮೀಸಲಿಟ್ಟ ಸ್ಥಾನ" ಎಂದರೆ ಅಧಿನಿಯಮದ 29ನೇ ಪ್ರಕರಣದ ಮೇರೆಗೆ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು, ಹಿಂದುಳಿದ ವರ್ಗಗಳು ಮತ್ತು ಮಹಿಳೆಗಾಗಿ ಮೀಸಲಿಟ್ಟ ಸ್ಥಾನ;

(ಎನ್) "ರಿಟರ್ನಿಂಗ್ ಅಧಿಕಾರಿ" ಎಂದರೆ, ರಿಟರ್ನಿಂಗ್ ಅಧಿಕಾರಿಯಾಗಿ 5ನೇ ನಿಯಮದ ಮೇರೆಗೆ ನೇಮಕಗೊಂಡ ಯಾರೇ ವ್ಯಕ್ತಿ ಮತ್ತು ರಿಟರ್ನಿಂಗ್ ಅಧಿಕಾರಿಯ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವ ಸಹಾಯಕ ರಿಟರ್ನಿಂಗ್ ಅಧಿಕಾರಿಯನ್ನು ಒಳಗೊಳ್ಳುತ್ತದೆ; ಮತ್ತು

(ಒ) "ಪ್ರಕರಣ" ಎಂದರೆ, ಈ ಅಧಿನಿಯಮದ ಪ್ರಕರಣ;

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ಪರಿಭಾಷಿಸಿಲ್ಲದ ಪದಗಳು ಮತ್ತು ಪದಾವಳಿಗಳು ಈ ಅಧಿನಿಯಮದಲ್ಲಿ ಅವುಗಳಿಗೆ ಗೊತ್ತುಪಡಿಸಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು.

## ಅಧ್ಯಾಯ-II

**3. ಚುನಾವಣೆಯನ್ನು ನಡೆಸುವುದು.-** (1) ರಾಜ್ಯ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣದ ಮೇರೆಗೆ ನಗರ ಪಾಲಿಕೆಗಳಿಗೆ ಚುನಾವಣೆಯನ್ನು ನಡೆಸತಕ್ಕದ್ದು.

(2) ರಾಜ್ಯ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಆಯುಕ್ತರು ನಗರ ಪಾಲಿಕೆಗಳಿಗೆ ಚುನಾವಣೆ ನಡೆಸುವ ಸಂಬಂಧದಲ್ಲಿ ಎಲ್ಲಾ ಕೆಲಸಗಳನ್ನು ಸಮನ್ವಯಗೊಳಿಸತಕ್ಕದ್ದು ಮತ್ತು ಮೇಲ್ವಿಚಾರಣೆ ಮಾಡತಕ್ಕದ್ದು. ಆಯ್ಕುಕರು ರಾಜ್ಯ ಚುನಾವಣಾ ಆಯೋಗದ ಮೂಲಕ ಆತನಿಗೆ ವಹಿಸಿಕೊಡಬಹುದಾದಂತಹ ಚುನಾವಣೆಗೆ ಸಂಬಂಧಿಸಿದ ಅಂಥ ಇತರ ಪ್ರಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

**4. ಮತದಾರರ ಪಟ್ಟಿ.-** (1) ನಗರದ ಪ್ರತಿಯೊಂದು ವಾರ್ಡಿಗೆ 35ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಮತದಾರರ ಪಟ್ಟಿಯನ್ನು ಪ್ರತಿಯೊಂದು ಭಾಗದಲ್ಲಿ ಸೇರಿಸಬೇಕಾದ ಮತದಾರರು ವಾಸ ಮಾಡುತ್ತಿರುವ ವಾರ್ಡಿನೊಳಗಿನ ಪ್ರದೇಶವನ್ನು ಗಣನೆಗೆ ತೆಗೆದುಕೊಂಡು ಒಂದು ಅಥವಾ ಹೆಚ್ಚು / ಭಾಗಗಳಾಗಿ ವಿಭಜಿಸತಕ್ಕದು ಹಾಗೆ ಮಾಡುವುದರಿಂದ ವಾರ್ಡಿನೊಳಗಿನ ಹೆಸರಿಸಲಾದ ಪ್ರದೇಶ, ಬೀದಿ ಅಥವಾ ರಸ್ತೆಗೆ ಸೇರಿದ ಪ್ರತಿಯೊಂದು ಭಾಗದಲ್ಲಿ ಸೇರಿಸಬೇಕಾದ ಮತದಾರರನ್ನು ಮತ್ತು ವಾರ್ಡಿನ ಹಲವಾರು ಭಾಗಗಳಿಗೆ ಸಂಬಂಧಿಸಿದಂತೆ ಹಾಗೆ ವಿಭಜಿಸಲಾದ ಮತದಾರರ ಪಟ್ಟಿಯನ್ನು ಒಟ್ಟಾಗಿ ಅಂಥ ವಾರ್ಡಿನ ಮತದಾರರ ಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ಪ್ರತಿಯೊಂದು ವಾರ್ಡಿಗೆ ಸಂಬಂಧಿಸಿದ ಅಂಥ ಮತದಾರರ ಪಟ್ಟಿಯ ಒಂದು ಪ್ರತಿಯನ್ನು ಪರಿಶೀಲನೆಗಾಗಿ ನಗರ ಪಾಲಿಕೆಗಳ ಕಛೇರಿಯಲ್ಲಿಯೂ ಸಹ ಮುಕ್ತವಾಗಿ ಇಡತಕ್ಕದ್ದು.

**5. ರಿಟರ್ನಿಂಗ್ ಅಧಿಕಾರಿ**.- (1) ಕೌನ್ಸಿಲರುಗಳ ಪ್ರತಿಯೊಂದು ಸಾರ್ವತ್ರಿಕ ಚುನಾವಣೆಗೆ ಅಥವಾ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿಮಾಡುವುದಕ್ಕಾಗಿ ನಡೆಸುವ ಚುನಾವಣೆಗೆ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಗಳಾಗಿರುವ ಒಬ್ಬ ಅಥವಾ ಹೆಚ್ಚಿನ ರಿಟರ್ನಿಂಗ್ ಅಧಿಕಾರಿಗಳನ್ನು ಆಯ್ಕುಕರು ನೇಮಕ ಮಾಡತಕ್ಕದು ಅಥವಾ ನಾಮನಿರ್ದೇಶನ ಮಾಡತಕ್ಕದ್ದು:

ಪರಂತು, ಒಬ್ಬರಿಗಿಂತ ಹೆಚ್ಚು ರಿಟರ್ನಿಂಗ್ ಅಧಿಕಾರಿಗಳನ್ನು ನಾಮನಿರ್ದೇಶಿಸಿದ್ದರೆ ಅಥವಾ ಹೆಸರಿಸಿದ್ದರೆ, ಆಯುಕ್ತರು, ಅಂಥ ಪ್ರತಿಯೊಬ್ಬ ಅಧಿಕಾರಿಯನ್ನು ಯಾವ ವಾರ್ಡಿಗೆ ಅಥವಾ ವಾರ್ಡುಗಳಿಗೆ ನಾಮನಿರ್ದೇಶನ ಮಾಡಲಾಗಿದೆ ಅಥವಾ ಹೆಸರಿಸಲಾಗಿದೆ ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು.

(2) ಆಯುಕ್ತರು ಅದೇ ರೀತಿಯಲ್ಲಿ ರಾಜ್ಯ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಅಧಿಕಾರಿಗಳಾಗಿರುವ ಒಬ್ಬರು ಅಥವಾ ಹೆಚ್ಚಿನ ಸಹಾಯಕ ರಿಟರ್ನಿಂಗ್ ಅಧಿಕಾರಿಗಳು, ರಿಟರ್ನಿಂಗ್ ಅಧಿಕಾರಿಗೆ ಆತನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಸಹಾಯ ಮಾಡುವುದಕ್ಕಾಗಿ ಹೆಸರಿಸಬಹುದು ಅಥವಾ ನಾಮ ನಿರ್ದೇಶನ ಮಾಡಬಹುದು.

(3) ಪ್ರತಿಯೊಬ್ಬ ಸಹಾಯಕ ರಿಟರ್ನಿಂಗ್ ಅಧಿಕಾರಿಯು, ರಿಟರ್ನಿಂಗ್ ಅಧಿಕಾರಿಯು ನಿರ್ದೇಶಿಸಿದ ಹಾಗೆ ರಿಟರ್ನಿಂಗ್ ಅಧಿಕಾರಿಯ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಸಕ್ಷಮನಾಗಿರತಕ್ಕದ್ದು.

**6. ರಿಟರ್ನಿಂಗ್ ಅಧಿಕಾರಿಯ ಸಾಮಾನ್ಯ ಕರ್ತವ್ಯ.-** ಈ ಅಧಿನಿಯಮ ಮತ್ತು ನಿಯಮಗಳ ಮೂಲಕ ಉಪಬಂಧಿಸಿದ ರೀತಿಯಲ್ಲಿ ಚುನಾವಣೆಯನ್ನು ಪರಿಣಾಮಕಾರಿಯಾಗಿ ನಡೆಸಲು ಆಗತ್ಯವಾದಂಥ ಎಲ್ಲಾ ಕಾರ್ಯಗಳನ್ನು ಮತ್ತು ವ್ಯವಸ್ಥೆಗಳನ್ನು ಮಾಡುವುದು ಯಾವುದೇ ಚುನಾವಣೆಯಲ್ಲಿ ರಿಟರ್ನಿಂಗ್ ಅಧಿಕಾರಿಯು ನಿರ್ವಹಿಸಬೇಕಾದ ಸಾಮಾನ್ಯ ಕರ್ತವ್ಯವಾಗಿರತಕ್ಕದ್ದು.

**7. ಮತಗಟ್ಟೆ ಕೇಂದ್ರಗಳು.-** ರಿಟರ್ನಿಂಗ್ ಅಧಿಕಾರಿಯು, ಆಯುಕ್ತರೊಂದಿಗೆ ಸಮಾಲೋಚಿಸಿ ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥಹ ರೀತಿಯಲ್ಲಿ ಪ್ರತಿಯೊಂದು ವಾರ್ಡಿಗೂ ಸಾಕಷ್ಟು ಸಂಖ್ಯೆಯ ಮತಗಟ್ಟೆ ಕೇಂದ್ರಗಳನ್ನು ಒದಗಿಸತಕ್ಕದ್ದು ಮತ್ತು ಹಾಗೆ ಒದಗಿಸಿದ ಮತಗಟ್ಟೆ ಕೇಂದ್ರಗಳನ್ನು ಮತ್ತು ಅವುಗಳನ್ನು ಯಾವ ಮತದಾನದ ಪ್ರದೇಶಗಳಿಗೆ ಅಥವಾ ಮತದಾರರ ಗುಂಪುಗಳಿಗೆ ಸಂಬಂಧಿಸಿದಂತೆ ಒದಗಿಸಲಾಗಿದೆ ಎಂಬುದನ್ನು ತೋರಿಸುವ ಪಟ್ಟಿಯನ್ನು ಪ್ರಕಟಿಸತಕ್ಕದ್ದು.

**8. ಪ್ರಿಸೈಡಿಂಗ್ ಅಧಿಕಾರಿಯ ಕರ್ತವ್ಯಗಳು.-** ಮತದಾನ ಕೇಂದ್ರದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದು ಮತ್ತು ಮತದಾನವು ಶಾಂತಿಯುತವಾಗಿ ನಡೆಯುವಂತೆ ನೋಡಿಕೊಳ್ಳುವುದು ಮತದಾನ ಕೇಂದ್ರಲ್ಲಿನ ಪ್ರಿಸೈಡಿಂಗ್ ಅಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರತಕ್ಕದ್ದು.

**9. ಪೋಲಿಂಗ್ ಅಧಿಕಾರಿಯ ಕರ್ತವ್ಯಗಳು.-** ಪ್ರಿಸೈಡಿಂಗ್ ಅಧಿಕಾರಿಯ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಅಂಥ ಮತದಾನದ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಗೆ ಸಹಾಯ ಮಾಡುವುದು ಮತದಾನ ಕೇಂದ್ರದಲ್ಲಿನ ಪೋಲಿಂಗ್ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

**10. ಚುನಾವಣೆಗಾಗಿ ಅಧಿಸೂಚನೆ.-** (1) ಈ ಅಧಿನಿಯಮದ 13ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಉದ್ದೇಶಿತ ಚುನಾವಣೆಗೆ ಸಂಬಂಧಿಸಿದಂತೆ ಆಯುಕ್ತರು, ರಾಜ್ಯ ಚುನಾವಣಾ ಆಯೋಗದ ಅನುಮತಿಯೊಂದಿಗೆ ನಮೂನೆ-1ರಲ್ಲಿ ಅಧಿಸೂಚಿಸತಕ್ಕದ್ದು.

(2) ರಾಜ್ಯ ಚುನಾವಣಾ ಆಯೋಗ, ಅಂಥ ಅಧಿಸೂಚನೆಯಲ್ಲಿ ಈ ಕೆಳಕಂಡಂತೆ:-

(i) ಅಧಿಸೂಚನೆಯು ಪ್ರಕಟಣೆಯಾದ ದಿನಾಂಕದ ತರುವಾಯ ಏಳನೇ ದಿನವು ಅಥವಾ ಆ ದಿನ ಸಾರ್ವತ್ರಿಕ ರಜಾ ದಿನವಾಗಿದ್ದರೆ ಆ ತರುವಾಯದ ಸಾರ್ವತ್ರಿಕ ರಜಾ ದಿನವಾಗಿಲ್ಲದಿರುವ ಮುಂದಿನ ದಿನದಂದು ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿರತಕ್ಕದ್ದು;

(ii) ನಾಮಪತ್ರಗಳನ್ನು ಸಲ್ಲಿಸುವುದಕ್ಕಾಗಿನ ಕೊನೆಯ ದಿನಾಂಕದ ಮರು ದಿನವು ನಾಮಪತ್ರಗಳ ಪರಿಶೀಲನೆ ದಿನಾಂಕವಾಗಿರತಕ್ಕದ್ದು ಅಥವಾ ಆ ದಿನವು ಸಾರ್ವತ್ರಿಕ ರಜಾ ದಿನವಾಗಿದ್ದರೆ. ಸಾರ್ವತ್ರಿಕ ರಜಾ ದಿನವಾಗಿಲ್ಲದಿರುವ ಮುಂಬರುವ ದಿನವನ್ನು ನಾಮಪತ್ರಗಳ ಪರಿಶೀಲನೆ ದಿನಾಂಕವಾಗಿರತಕ್ಕದ್ದು;

(iii) ನಾಮಪತ್ರಗಳ ಪರಿಶೀಲನೆಗಾಗಿನ ದಿನಾಂಕದ ತರುವಾಯ ಎರಡನೇ ದಿನವು ಅಥವಾ ಆ ದಿನವು ಸಾರ್ವತ್ರಿಕ ರಜಾ ದಿನವಾಗಿದ್ದರೆ ಸಾರ್ವತ್ರಿಕ ರಜಾ ದಿನವಾಗಿಲ್ಲದಿರುವ ಮುಂದಿನ ದಿನವನ್ನು ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳುವುದಕ್ಕಾಗಿ ಕೊನೆಯ ದಿನಾಂಕವಾಗಿರತಕ್ಕದ್ದು;

(iv) ಉಮೇದುವಾರಿಕೆಗಳನ್ನು ಹಿಂತೆಗೆದುಕೊಳ್ಳುವ ಕೊನೆಯ ದಿನಾಂಕದ ತರುವಾಯ ಏಳನೇ ದಿನಕ್ಕಿಂತ ಮುಂಚಿತವಲ್ಲದ ಅವಶ್ಯವಾದರೆ ಮತದಾನವನ್ನು ನಡೆಸುವ ದಿನಾಂಕವೆಂದೂ ಮತ್ತು ಮತದಾನ ಯಾವ ವೇಳೆಯಲ್ಲಿ ನಡೆಸಬೇಕೆಂದೂ ಮತ್ತು ಯಾವುದೇ ಗೊತ್ತುಮಾಡಿದ ದಿನದಂದು ಮತದಾನ ನಡೆಸುವ ವೇಳೆಯ ಒಟ್ಟು ಅವಧಿಯು ಎಂಟು ಗಂಟೆಗಳಿಗಿಂತ ಕಡಿಮೆಯಾಗಿರತಕ್ಕದ್ದಲ್ಲ; ಮತ್ತು

(v) ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಪೂರ್ಣಗೊಳಿಸತಕ್ಕದ್ದೋ ಆ ದಿನಾಂಕ - ನಿರ್ದಿಷ್ಟಪಡಿಸತಕ್ಕದ್ದು.

(3) ರಿಟರ್ನಿಂಗ್ ಅಧಿಕಾರಿಯು (1)ನೇ ಉಪ-ನಿಯಮದ ಮೇರೆಗೆ ಅಧಿಸೂಚನೆಯನ್ನು ಹೊರಡಿಸಿದ ಮೇಲೆ ನಮೂನೆ-1ಎ ನಲ್ಲಿ ಅದನ್ನು ತನ್ನ ಕಛೇರಿಯಲ್ಲಿರುವ ಮತ್ತು ನಗರ ಪಾಲಿಕೆಗಳ ಕಛೇರಿಯಲ್ಲಿರುವ ಸೂಚನಾ ಫಲಕದ ಮೇಲೆ ಮತ್ತು ತನಗೆ ಅವಶ್ಯವೆಂದು ಭಾವಿಸುವಂಥ ಇತರ ಸ್ಥಳಗಳಲ್ಲಿ ಪ್ರದರ್ಶಿಸುವ ಮೂಲಕ ಉದ್ದೇಶಿತ ಚುನಾವಣೆಯ ಬಗ್ಗೆ ಅಂಥ ಚುನಾವಣೆಗಾಗಿ ನಾಮಪತ್ರಗಳನ್ನು ಆಹ್ವಾನಿಸಿ ಸಾರ್ವಜನಿಕ ನೋಟೀಸನ್ನು ನೀಡತಕ್ಕದ್ದು.

(4) ರಿಟರ್ನಿಂಗ್ ಅಧಿಕಾರಿಯು ಸಾರ್ವಜನಿಕ ನೋಟೀಸಿನಲ್ಲಿ ಇತರೆ ವಿಷಯಗಳೊಂದಿಗೆ ನಾಮಪತ್ರಗಳನ್ನು ಸ್ವೀಕರಿಸುವುದಕ್ಕಾಗಿ ಇರುವ ಕೊನೆಯ ದಿನಾಂಕ, ನಾಮಪತ್ರಗಳನ್ನು ಸಲ್ಲಿಸುವ ಸ್ಥಳ, ನಾಮಪತ್ರಗಳ ಪರಿಶೀಲನೆಯ ದಿನಾಂಕ, ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ, ಅವಶ್ಯವಾದರೆ ಮತದಾನವನ್ನು ನಡೆಸುವ ದಿನಾಂಕ ಅಥವಾ ದಿನಾಂಕಗಳು ಮತ್ತು ಮತದಾನದ ವೇಳೆ ಮತ್ತು ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಪೂರ್ಣಗೊಳಿಸಬೇಕೋ ಆ ದಿನಾಂಕ ಇವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು ಇವು ಆಯುಕ್ತರು, ಆ ಬಗ್ಗೆ, (2)ನೇ ಉಪ-ನಿಯಮದ ಅಡಿಯಲ್ಲಿ ಅಧಿಸೂಚಿಸಿದ ದಿನಾಂಕಗಳಿಗೆ ಅನುಗುಣವಾಗಿರತಕ್ಕದ್ದು.

**11. ಚುನಾವಣೆಗಾಗಿ ಅಭ್ಯರ್ಥಿಗಳ ನಾಮನಿರ್ದೇಶನ.-** ಯಾರೇ ವ್ಯಕ್ತಿಯನ್ನು ಅಧಿನಿಯಮದ ಉಪಬಂಧಗಳ ಮೇರೆಗೆ ಆ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಯಾಗಲು ಅವನು ಅರ್ಹನಾಗಿದ್ದರೆ, ನಗರದ ಯಾವುದೇ ವಾರ್ಡುಗಳಲ್ಲಿನ ಸ್ಥಾನವನ್ನು ಭರ್ತಿಮಾಡಲು ಅಭ್ಯರ್ಥಿಯನ್ನಾಗಿ ನಾಮನಿರ್ದೇಶನ ಮಾಡಬಹುದು.

**12. ನಾಮಪತ್ರ ಸಲ್ಲಿಕೆ.-** (1) ನಾಮಪತ್ರಗಳನ್ನು ಸಲ್ಲಿಸುವುದಕ್ಕಾಗಿ 10ನೇ ನಿಯಮದ ಮೇರೆಗೆ ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕೂ ಮುಂಚೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ಅಥವಾ ಆತನ ಸೂಚಕನ ಮೂಲಕವಾಗಲಿ, ಬೆಳಗ್ಗೆ, 11:00 ಗಂಟೆ ಮತ್ತು ಮಧ್ಯಾಹ್ನ 3:00 ಗಂಟೆಯ ನಡುವೆ ರಿಟರ್ನಿಂಗ್ ಅಧಿಕಾರಿಗೆ 9ನೇ ನಿಯಮದ ಅಡಿಯಲ್ಲಿ ಉಲ್ಲೇಖಿಸಿದ ಸಾರ್ವಜನಿಕ ನೋಟೀಸಿನಲ್ಲಿ ಆ ಬಗ್ಗೆ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ನಮೂನೆ-2ರಲ್ಲಿ, ಯುಕ್ತವಾಗಿ ಪೂರ್ಣಗೊಳಿಸಿದ ನಾಮಪತ್ರವನ್ನು ಉಮೇದುದಾರನು ತನ್ನನ್ನು ಬೆಂಬಲಿಸುವ ಸೂಚಕರುಗಳಾಗಿ

ಅದೇ ವಾರ್ಡಿನ 6 ಜನ ಮತದಾರರುಗಳ ಸಹಿಗಳೊಂದಿಗೆ ತನ್ನ ಇತ್ತೀಚಿನ ಪಾಸ್‌ಪೋರ್ಟ್ ಆಳತೆಯ ಭಾವಚಿತ್ರದ ಸಹಿತವಾಗಿ ಸಹಿ ಮಾಡಿದ ನಾಮಪತ್ರವನ್ನು ಸಲ್ಲಿಸತಕ್ಕದ್ದು:

ಪರಂತು, ಮಾನ್ಯತೆ ಪಡೆದ ರಾಜಕೀಯ ಪಕ್ಷದಿಂದ ಸ್ಪರ್ಧಿಸುವ ಅಭ್ಯರ್ಥಿಯು ನಾಮಪತ್ರವನ್ನು ಅದೇ ವಾರ್ಡಿನ ಒಬ್ಬನೇ ಸೂಚಕನಿಂದಲೂ ರುಜು ಮಾಡಿದ್ದರೂ ಸಹ ಆ ವಾರ್ಡಿನಿಂದ ಚುನಾವಣೆಗೆ ಕ್ರಮಬದ್ಧವಾಗಿ ನಾಮನಿರ್ದೇಶಿತನಾಗಿರುತ್ತಾನೆಂದು ಭಾವಿಸತಕ್ಕದ್ದು;

ಮತ್ತು ಪರಂತು, ಸಾರ್ವತ್ರಿಕ ರಜಾ ದಿನದಂದು ರಿಟರ್ನಿಂಗ್ ಅಧಿಕಾರಿಗೆ ಯಾವುದೇ ನಾಮಪತ್ರವನ್ನು ಸಲ್ಲಿಸತಕ್ಕದ್ದಲ್ಲ.

(2) ಒಂದು ವಾರ್ಡಿನಲ್ಲಿ,-

(ಎ) ಯಾವುದೇ ಸ್ಥಾನವನ್ನು ಹಿಂದುಳಿದ ವರ್ಗಗಳು, ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಮೀಸಲಾಗಿಡಲಾಗಿದೆಯೋ ಆ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಅಭ್ಯರ್ಥಿಯ ನಾಮಪತ್ರವು ಅವನು ಸದಸ್ಯನಾಗಿರುವಂತಹ ನಿರ್ದಿಷ್ಟ ವರ್ಗ, ಜಾತಿ ಅಥವಾ ಪಂಗಡವನ್ನು ನಿರ್ದಿಷ್ಟಪಡಿಸುವ ಮತ್ತು ಸದರಿ ವರ್ಗ, ಜಾತಿ ಅಥವಾ ಪಂಗಡ, ಹಿಂದುಳಿದ ವರ್ಗ, ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡ ಆಗಿದೆಯಂದು ನಿರ್ದಿಷ್ಟಪಡಿಸುವ ಅವನ ಘೋಷಣೆಯನ್ನು ಒಳಗೊಂಡಿರುವ ಆತನ ನಾಮನಿರ್ದೇಶನದ ಪತ್ರದ ಹೊರತು ಆ ಸ್ಥಾನವನ್ನು ಭರ್ತಿ ಮಾಡುವುದಕ್ಕೆ ಆಯ್ಕೆಗೊಳ್ಳಲು ಅರ್ಹನಾಗಿರುವುದಾಗಿ ಭಾವಿಸತಕ್ಕದ್ದಲ್ಲ.

(ಬಿ) ಮಹಿಳೆಯರಿಗಾಗಿ ಮೀಸಲಿರಿಸಿದ್ದ ಸ್ಥಾನಕ್ಕಾಗಿನ ನಾಮಪತ್ರವು ಅಭ್ಯರ್ಥಿಯು ಮಹಿಳಾ ಅಭ್ಯರ್ಥಿಯಾಗಿರುವ ಬಗ್ಗೆ ಘೋಷಣೆಯನ್ನು ಒಳಗೊಂಡಿರತಕ್ಕದ್ದು.

(3) ನಾಮಪತ್ರವನ್ನು ಸಲ್ಲಿಸಿದ ಮೇಲೆ, ರಿಟರ್ನಿಂಗ್ ಅಧಿಕಾರಿಯು ನಾಮಪತ್ರದಲ್ಲಿ ನಮೂದಿಸಿದ ಅಭ್ಯರ್ಥಿಯ ಮತ್ತು ಅವನ ಸೂಚಕನ ಹೆಸರುಗಳು ಮತ್ತು ಮತದಾರರ ಪಟ್ಟಿಯ ಸಂಖ್ಯೆಗಳು ಮತದಾರರ ಪಟ್ಟಿಯಲ್ಲಿ ನಮೂದಿಸಿದಂತೆಯೇ ಇದೆ ಎಂಬುದನ್ನು ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

ಪರಂತು, ಅಭ್ಯರ್ಥಿಯ ಅಥವಾ ಅವನ ಸೂಚಕನ ಅಥವಾ ಯಾವುದೇ ಇತರೆ ವ್ಯಕ್ತಿಯ ಹೆಸರಿನ ಬಗ್ಗೆ ಯಾವುದೇ ತಪ್ಪು ಹೆಸರು ಅಥವಾ ನಿಖರವಾಗಿರದ ವಿವರಣೆ ಅಥವಾ ಲಿಪಿಕ, ತಾಂತ್ರಿಕ ಅಥವಾ ಮುದ್ರಣದೋಷ ಮತದಾರರ ಪಟ್ಟಿಯಲ್ಲಿ ಅಥವಾ ನಾಮಪತ್ರದಲ್ಲಿ ನಮೂದಿಸಿದ ಯಾವುದೇ ಸ್ಥಳದ ಬಗ್ಗೆ, ಯಾವುದೇ ತಪ್ಪು ಹೆಸರು, ಅಥವಾ ನಿಖರವಾಗಿರದ ವಿವರಣೆ ಅಥವಾ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷಗಳು ಮತ್ತು ಮತದಾರರ ಪಟ್ಟಿಯಲ್ಲಿ ಅಥವಾ ನಾಮಪತ್ರದಲ್ಲಿರುವ ಅಂಥ ಯಾವುದೇ ವ್ಯಕ್ತಿಯ ಮತದಾರರ ಪಟ್ಟಿಯ ಸಂಖ್ಯೆಯ ಬಗೆಗಿನ ಯಾವುದೇ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷವು ವ್ಯಕ್ತಿ ಅಥವಾ ಸ್ಥಳದ ಹಸರಿಗೆ ಸಂಬಂಧಿಸಿದ ವಿವರಣೆಯು ಸಾಮಾನ್ಯವಾಗಿ ತಿಳಿದಿರುವಂಥದ್ದಾಗಿರುವಲ್ಲಿನ ಯಾವುದೇ ಸಂದರ್ಭದಲ್ಲಿ ಅಂಥ ವ್ಯಕ್ತಿ ಅಥವಾ ಸ್ಥಳಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿ ಅಥವಾ ನಾಮಪತ್ರದ ಸಂಪೂರ್ಣ ಕಾರ್ಯಚರಣೆಗೆ ಬಾಧಕವಾಗತಕ್ಕದ್ದಲ್ಲ ಮತ್ತು ರಿಟರ್ನಿಂಗ್ ಅಧಿಕಾರಿಯು ಸರಿಪಡಿಸಬೇಕಾಗಿರುವ ಅಂಥ ಯಾವುದೇ ತಪ್ಪು ಹೆಸರು ಅಥವಾ ನಿಖರವಾಗಿರದ ವಿವರಣೆ ಅಥವಾ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷಗಳಿಗೆ ಅನುಮತಿ ನೀಡತಕ್ಕದ್ದು ಮತ್ತು ಅಗತ್ಯವಿರುವಲ್ಲಿ ಮತದಾರರ ಪಟ್ಟಿಯಲ್ಲಿರುವ ಅಥವಾ ನಾಮಪತ್ರಗಳಲ್ಲಿರುವ ಯಾವುದೇ ಅಂಥ ತಪ್ಪು ಹೆಸರು, ನಿಖರವಾಗಿರದ ವಿವರಣೆ ಲಿಪಿಕ, ತಾಂತ್ರಿಕ ಅಥವಾ ಮುದ್ರಣ ದೋಷಗಳನ್ನು ಗಮನಕ್ಕೆ ತೆಗೆದುಕೊಳ್ಳದಿರುವಂತೆ ನಿರ್ದೇಶಿಸತಕ್ಕದ್ದು.

(4) ಈ ನಿಯಮದಲ್ಲಿರುವುದಾವುದೂ ಯಾವುದೇ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ನಾಮಪತ್ರಗಳನ್ನು ಸಲ್ಲಿಸಲು ಅಡ್ಡಿಪಡಿಸತಕ್ಕದಲ್ಲ:

ಪರಂತು ಅಂಥ ನಾಮಪತ್ರಗಳ ಸಂಖ್ಯೆ ನಾಲ್ಕಕ್ಕಿಂತ ಹೆಚ್ಚಿರತಕ್ಕದ್ದಲ್ಲ.

(5) ಯಾವುದೇ ಅಭ್ಯರ್ಥಿಯು ರಿಟರ್ನಿಂಗ್ ಅಧಿಕಾರಿಗೆ ನಾಮಪತ್ರವನ್ನು ಸಲ್ಲಿಸುವುದಕ್ಕೆ ಮುಂಚೆ ಅವನು ಐದು ಸಾವಿರ ರೂಪಾಯಿಗಳ ಮೊತ್ತ ಅಥವಾ ಅಭ್ಯರ್ಥಿಯು ಹಿಂದುಳಿದ ವರ್ಗಗಳು ಅಥವಾ ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡ ಅಥವಾ ಮಹಿಳಾ ಸದಸ್ಯರಿಗೆ ಎರಡು ಸಾವಿರದ ಐದುನೂರು ರೂಪಾಯಿಗಳ ಮೊತ್ತವನ್ನು ಠೇವಣಿ ಇಟ್ಟು ಅಥವಾ ಠೇವಣಿ ಇಡುವಂತೆ ಮಾಡಿದ ಹೊರತು ಯಾವುದೇ ವಾರ್ಡಿನಿಂದ ಚುನಾವಣೆಗೆ ಕ್ರಮಬದ್ಧವಾಗಿ ನಾಮನಿರ್ದೇಶನಗೊಂಡಿರುವುದಾಗಿ ಭಾವಿಸತಕ್ಕದ್ದಲ್ಲ:

ಪರಂತು, ಒಂದೇ ವಾರ್ಡಿನಲ್ಲಿನ ಚುನಾವಣೆಗೆ ಒಂದಕ್ಕಿಂತ ಹೆಚ್ಚು ನಾಮಪತ್ರಗಳ ಮೂಲಕ ನಾಮನಿರ್ದೇಶನಗೊಂಡಿದ್ದ ಅಭ್ಯರ್ಥಿಯಾಗಿದ್ದಲ್ಲಿ ಈ ಉಪ-ನಿಯಮದ ಮೇರೆಗೆ ಒಂದಕ್ಕಿಂತ ಹೆಚ್ಚು ಠೇವಣಿಗಳನ್ನು ಇಡಲು ಅವನನ್ನು ಅಗತ್ಯಪಡಿಸತಕ್ಕದ್ದಲ್ಲ.

(6) ಉಪ-ನಿಯಮದ (5)ರ ಅಡಿಯಲ್ಲಿ ಠೇವಣಿ ಇಡಬೇಕೆಂದು ಅಗತ್ಯಪಡಿಸಿದ ಯಾವುದೇ ಮೊತ್ತವನ್ನು (1)ನೇ ಉಪ-ನಿಯಮದ ಮೇರೆಗೆ ನಾಮಪತ್ರವನ್ನು ಸಲ್ಲಿಸುವ ಸಮಯದಲ್ಲಿ ಅಭ್ಯರ್ಥಿಯು ಆ ಮೊತ್ತವನ್ನು ರಿಟರ್ನಿಂಗ್ ಅಧಿಕಾರಿಗೆ ನಗದಾಗಿ ಠೇವಣಿ ಇಡುವಂತೆ ಮಾಡಿದ ಹೊರತು ಅಥವಾ ಸದರಿ ಮೊತ್ತವನ್ನು ಅತನು ಸರ್ಕಾರಿ ಖಜಾನೆಯಲ್ಲಿ ಠೇವಣಿ ಇಟ್ಟಿರುವನೆಂದು ಅಥವಾ ಆತನ ಪರವಾಗಿ ಇಡಲಾಗಿದೆ ಎಂದು ತೋರಿಸುವ ರಶೀದಿಯನ್ನು ನಾಮಪತ್ರಕ್ಕೆ ಲಗತ್ತಿಸಿದ್ದ ಹೊರತು ಆ ಉಪ-ನಿಯಮದ ಮೇರೆಗೆ ಠೇವಣಿ ಇಡಲಾಗಿದೆ ಎಂದು ಭಾವಿಸತಕ್ಕದ್ದಲ್ಲ.

**13. ಮೀಸಲಿರಿಸಿದ ಸ್ಥಾನಗಳ ಸಂದರ್ಭದಲ್ಲಿ ನಾಮಪತ್ರವನ್ನು ಸ್ವೀಕರಿಸುವುದು.-** ಈ ನಿಯಮಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ 29ನೇ ಪ್ರಕರಣದ (3)ನೇ ಉಪ ಪ್ರಕರಣದ ಪರಂತುಕದ ಮೇರೆಗೆ ಸ್ಥಾನವನ್ನು ಮೀಸಲಿರಿಸಿದ ಸಂದರ್ಭದಲ್ಲಿ,-

(i) ಹಿಂದುಳಿದ ವರ್ಗಗಳ ಪ್ರವರ್ಗ `ಎ' ಗೆ ಸೇರಿದ ವ್ಯಕ್ತಿಗಾಗಿ ಮೀಸಲಿರಿಸಿದ್ದರೆ, ರಿಟರ್ನಿಂಗ್ ಅಧಿಕಾರಿಯು ಹಿಂದುಳಿದ ವರ್ಗಗಳ ಪ್ರವರ್ಗ `ಎ' ಮತ್ತು ಪ್ರವರ್ಗ `ಬಿ' ಇವುಗಳೆರಡಕ್ಕೂ ಸೇರಿದ ವ್ಯಕ್ತಿಯಿಂದ ನಾಮಪತ್ರಗಳನ್ನು ಸ್ವೀಕರಿಸಬಹುದು. ಆದರೆ, ನಾಮಪತ್ರವನ್ನು ಸಲ್ಲಿಸುವುದಕ್ಕೆ, ನಿಗದಿಪಡಿಸಿದ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮೊದಲು ಹಿಂದುಳಿದ ವರ್ಗಗಳ ಪ್ರವರ್ಗ `ಎ' ಗೆ ಸೇರಿದ ಯಾರೇ ವ್ಯಕ್ತಿಯಿಂದ ನಾಮಪತ್ರವನ್ನು ಸ್ವೀಕರಿಸಿದ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಪ್ರವರ್ಗ `ಬಿ' ಗೆ ಸೇರಿದ ವ್ಯಕ್ತಿಯಿಂದ ಠೇವಣಿಯ ಸಮೇತವಾಗಿ ಸಲ್ಲಿಸಲಾದ ನಾಮಪತ್ರವನ್ನು ಹಿಂದಿರುಗಿಸತಕ್ಕದ್ದು. ಆದಾಗ್ಯೂ, ನಾಮಪತ್ರವನ್ನು ಸಲ್ಲಿಸುವುದಕ್ಕೆ ನಿಗದಿಪಡಿಸಿದ ದಿನಾಂಕ ಮತ್ತು ಸಮಯಕ್ಕೆ ಮೊದಲು ಹಿಂದುಳಿದ ವರ್ಗಗಳ ಪ್ರವರ್ಗ `ಎ' ಗೆ ಸೇರಿದ ವ್ಯಕ್ತಿಯಿಂದ ಯಾವುದೇ ನಾಮಪತ್ರವನ್ನು ಸ್ವೀಕರಿಸದಿದ್ದಾಗ ಮಾತ್ರ ಹಿಂದುಳಿದ ವರ್ಗಗಳ ಪ್ರವರ್ಗ `ಬಿ'ಗೆ ಸೇರಿದ ಅಭ್ಯರ್ಥಿಯಿಂದ ಸಲ್ಲಿಸಿದ ನಾಮ ಪತ್ರವನ್ನು ಪರಿಗಣಿಸಲು ಅವನು ಮುಂದುವರಿಯಬಹುದು; ಮತ್ತು

(ii) ಹಿಂದುಳಿದ ವರ್ಗಗಳ ಪ್ರವರ್ಗ `ಬಿ' ಗೆ ಸೇರಿದ ವ್ಯಕ್ತಿಗೆ ಮೀಸಲಿರಿಸಿದ್ದರೆ, ರಿಟರ್ನಿಂಗ್ ಅಧಿಕಾರಿಯು ಹಿಂದುಳಿದ ವರ್ಗಗಳ ಪ್ರವರ್ಗ `ಎ' ಮತ್ತು ಪ್ರವರ್ಗ `ಬಿ' ಇವುಗಳೆರಡಕ್ಕೂ ಸೇರಿದ ವ್ಯಕ್ತಿಯಿಂದ ನಾಮಪತ್ರಗಳನ್ನು ಸ್ವೀಕರಿಸಬಹುದು. ಆದರೆ, ನಾಮಪತ್ರವನ್ನು ಸಲ್ಲಿಸುವುದಕ್ಕೆ ನಿಗದಿಪಡಿಸಿದ ದಿನಾಂಕ ಮತ್ತು ಸಮಯಕ್ಕೆ ಮುಂಚೆ ಹಿಂದುಳಿದ ವರ್ಗಗಳ ಪ್ರವರ್ಗ `ಬಿ'ಗೆ ಸೇರಿದ ಯಾರೇ ವ್ಯಕ್ತಿಯಿಂದ ನಾಮಪತ್ರವನ್ನು ಸ್ವೀಕರಿಸಿದ ಸಂದರ್ಭದಲ್ಲಿ, ಹಿಂದುಳಿದ ವರ್ಗಗಳ ಪರ್ಗ `ಎ' ಗೆ ಸೇರಿದ ವ್ಯಕ್ತಿಯಿಂದ ಠೇವಣಿಯ ಸಮೇತವಾಗಿ ಸಲ್ಲಿಸಲಾದ ನಾಮಪತ್ರವನ್ನು

ಹಿಂದಿರುಗಿಸತಕ್ಕದ್ದು. ಆದಾಗ್ಯೂ, ನಾಮಪತ್ರವನ್ನು ಸಲ್ಲಿಸುವುದಕ್ಕೆ ನಿಗದಿಪಡಿಸಿದ ದಿನಾಂಕ ಮತ್ತು ಸಮಯಕ್ಕೆ ಮುಂಚೆ ಹಿಂದುಳಿದ ವರ್ಗಗಳ ಪ್ರವರ್ಗ `ಬಿ'ಗೆ ಸೇರಿದ ವ್ಯಕ್ತಿಯಿಂದ ಯಾವುದೇ ನಾಮಪತ್ರವನ್ನು ಸ್ವೀಕರಿಸದ ಇದ್ದಾಗ ಮಾತ್ರ ಹಿಂದುಳಿದ ವರ್ಗಗಳ ಪ್ರವರ್ಗ `ಎ' ಗೆ ಸೇರಿದ ಅಭ್ಯರ್ಥಿಯಿಂದ ಸಲ್ಲಿಸಿದ ನಾಮಪತ್ರವನ್ನು ಪರಿಗಣಿಸಲು ಅವನು ಮುಂದುವರಿಯಬಹುದು.

**14. ನಾಮಪತ್ರಗಳು ಮತ್ತು ಅವುಗಳ ಪರಿಶೀಲನೆಗಾಗಿ ಸಮಯ ಮತ್ತು ಸ್ಥಳದ ನೋಟೀಸು.-** ರಿಟರ್ನಿಂಗ್ ಅಧಿಕಾರಿಯು 12ನೇ ನಿಯಮದ ಮೇರೆಗೆ ನಾಮಪತ್ರಗಳನ್ನು ಸ್ವೀಕರಿಸಿದ ಮೇಲೆ, ಅವುಗಳನ್ನು ನೀಡಲಾದ ವ್ಯಕ್ತಿಗೆ ನಾಮಪತ್ರಗಳನ್ನು ಪರಿಶೀಲಿಸುವುದಕ್ಕೆ ನಿಗದಿಪಡಿಸಿದ ದಿನಾಂಕ, ಸಮಯ ಮತ್ತು ಸ್ಥಳವನ್ನು ತಿಳಿಸತಕ್ಕದ್ದು ಮತ್ತು ನಾಮಪತ್ರದ ಮೇಲೆ ಅದರ ಕ್ರಮಸಂಖ್ಯೆಯನ್ನು ನಮೂದಿಸತಕ್ಕದ್ದು ಮತ್ತು ನಾಮಪತ್ರವನ್ನು ಆತನಿಗೆ ನೀಡಲಾದ ದಿನಾಂಕ ಮತ್ತು ಸಮಯವನ್ನು ಸೂಚಿಸಿದ ಪ್ರಮಾಣಪತ್ರದ ಮೇಲೆ ದಾಖಲು ಮಾಡಿ, ತನ್ನ ರುಜು ಹಾಕತಕ್ಕದ್ದು ಮತ್ತು ತದನಂತರ ಆದಷ್ಟು ಬೇಗನೆ ನಾಮಪತ್ರದಲ್ಲಿ ಒಳಗೊಂಡಿರುವ ಅಭ್ಯರ್ಥಿ ಮತ್ತು ಅವನ ಸೂಚಕನ ವಿವರಗಳನ್ನು ನಮೂನೆ-3ರಲ್ಲಿ ನಾಮಪತ್ರದ ನೋಟೀಸನ್ನು ತನ್ನ ಕಛೇರಿಯಲ್ಲಿ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವಂತೆ ಮಾಡತಕ್ಕದ್ದು.

**15. ನಾಮಪತ್ರಗಳ ಪರಿಶೀಲನೆ.-** (1) ನಿಯಮ 10ರ ಅಡಿಯಲ್ಲಿ ನಾಮಪತ್ರಗಳ ಪರಿಶೀಲನೆಗಾಗಿ ನಿಗದಿಪಡಿಸಲಾದ ದಿನಾಂಕದಂದು ಅಭ್ಯರ್ಥಿಗಳು, ಅವರ ಚುನಾವಣೆ ಏಜೆಂಟ್‌ರು, ಪ್ರತಿಯೊಬ್ಬ ಅಭ್ಯರ್ಥಿಯ ಒಬ್ಬ ಸೂಚಕನು ಮತ್ತು ಪ್ರತಿಯೊಬ್ಬ ಅಭ್ಯರ್ಥಿಯಿಂದ ಲಿಖಿತದಲ್ಲಿ ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಒಬ್ಬ ಇತರೆ ವ್ಯಕ್ತಿಯು, ರಿಟರ್ನಿಂಗ್ ಅಧಿಕಾರಿಯು ಗೊತ್ತುಪಡಿಸಬಹುದಾದಂತಹ ಸಮಯ ಮತ್ತು ಸ್ಥಳದಲ್ಲಿ ಹಾಜರಿರಬಹುದು ಮತ್ತು ರಿಟರ್ನಿಂಗ್ ಅಧಿಕಾರಿಯು 12ನೇ ನಿಯಮದಲ್ಲಿ ಹೇಳಲಾದ ಸಮಯದೊಳಗೆ ಮತ್ತು ಆ ರೀತಿಯಲ್ಲಿ ನೀಡಲಾಗಿರುವ ಎಲ್ಲಾ ಅಭ್ಯರ್ಥಿಗಳ ನಾಮಪತ್ರಗಳನ್ನು ಪರಿಶೀಲಿಸುವುದಕ್ಕೆ ಎಲ್ಲ ಯುಕ್ತ ಸೌಲಭ್ಯಗಳನ್ನು ಅವರಿಗೆ ನೀಡತಕ್ಕದ್ದು.

(2) ರಿಟರ್ನಿಂಗ್ ಅಧಿಕಾರಿಯು ಆ ನಾಮಪತ್ರಗಳನ್ನು ಆಗ ಪರಿಶೀಲಿಸತಕ್ಕದ್ದು ಮತ್ತು ಯಾವುದೇ ನಾಮಪತ್ರಕ್ಕೆ ಸಲ್ಲಿಸಬಹುದಾದ ಎಲ್ಲಾ ಆಕ್ಷೇಪಣೆಗಳನ್ನು ತೀರ್ಮಾನಿಸತಕ್ಕದ್ದು ಮತ್ತು ಅಂಥ ಆಕ್ಷೇಪಣೆಯ ಅಥವಾ ತನ್ನ ಸ್ವಪ್ರೇರಣೆಯಿಂದ ತನಗೆ ಅಗತ್ಯವೆಂದು ಭಾವಿಸಬಹುದಾದಂಥ ಸಂಕ್ಷಿಪ್ತ ವಿಚಾರಣೆಯ ತರುವಾಯ ಕೆಳಕಂಡ ಯಾವುದೇ ಕಾರಣದ ಮೇಲೆ ಯಾವುದೇ ನಾಮಪತ್ರವನ್ನು ತಿರಸ್ಕರಿಸಬಹುದು ಎಂದರೆ:-

(i) ನಾಮನಿರ್ದೇಶನಗಳ ಪರಿಶೀಲನೆಗಾಗಿ ನಿಗದಿಪಡಿಸಲಾದ ದಿನಾಂಕದಂದು ಅಭ್ಯರ್ಥಿಯು, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸ್ಥಾನವನ್ನು ಭರ್ತಿಮಾಡಲು ಆಯ್ಕೆಯಾಗುವುದಕ್ಕೆ ಅರ್ಹನಾಗಿಲ್ಲದಿದ್ದರೆ ಅಥವಾ ಅನರ್ಹನಾಗಿದ್ದರೆ;

(ii) ಅಧಿನಿಯಮ ಅಥವಾ ಈ ನಿಯಮಗಳ ಯಾವುದೇ ಉಪಬಂಧಗಳನ್ನು ಪಾಲಿಸಲು ವಿಫಲವಾಗಿದ್ದರೆ; ಮತ್ತು

(iii) ನಾಮಪತ್ರದ ಮೇಲೆ ಅಭ್ಯರ್ಥಿಯ ಅಥವಾ ಸೂಚಕನ ಸಹಿಯು ನೈಜವಾದುದು ಆಗಿಲ್ಲದಿದ್ದರೆ.

(3) ಉಪ-ನಿಯಮ (2)ರ (ii)ನೇ ಅಥವಾ (iii)ನೇ ಖಂಡದಲ್ಲಿ ಏನೇ ಒಳಗೊಂಡಿದ್ದಾಗ್ಯೂ ಅಭ್ಯರ್ಥಿಯು, ಯಾವ ನಾಮಪತ್ರದ ಸಂಬಂಧದಲ್ಲಿ ಅಕ್ರಮ ಮಾಡಿಲ್ಲವೋ ಆ ಸಂಬಂಧದಲ್ಲಿ ಮತ್ತೊಂದು ನಾಮಪತ್ರದ ಮೂಲಕ ಯುಕ್ತವಾಗಿ ನಾಮನಿರ್ದೇಶನಗೊಂಡಿದ್ದರೆ, ನಾಮಪತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಅಕ್ರಮದ ಕಾರಣದ ಮೇಲೆ ಯಾರೇ ಅಭ್ಯರ್ಥಿಯ ನಾಮಪತ್ರದ ನಿರಾಕರಣೆಯನ್ನು ಅಧಿಕೃತಗೊಳಿಸಲಾಗಿದೆಯೆಂದು ಭಾವಿಸತಕ್ಕದ್ದು.

(4) ರಿಟರ್ನಿಂಗ್ ಅಧಿಕಾರಿಯು ಗಂಭೀರ ಸ್ವರೂಪದ್ದಲ್ಲದಂಥ ಯಾವುದೇ ದೋಷದ ಕಾರಣದ ಮೇಲೆ ಯಾವುದೇ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ್ಲ.

(5) ರಿಟರ್ನಿಂಗ್ ಅಧಿಕಾರಿಯು 10ನೇ ನಿಯಮದ ಮೇರೆಗೆ ಆ ಬಗ್ಗೆ, ಗೊತ್ತುಪಡಿಸಿದ ದಿನಾಂಕದಂದು ಪರಿಶೀಲನೆ ನಡೆಸತಕ್ಕದ್ದು ಮತ್ತು ದೊಂಬಿ ಅಥವಾ ಬಹಿರಂಗ ಹಿಂಸೆ ಅಥವಾ ತನ್ನ ನಿಯಂತ್ರಣ ಮೀರಿದ ಕಾರಣಗಳಿಂದಾಗಿ ಅಂಥ ವ್ಯವಹರಣೆಗಳಿಗೆ ಅಡಚಣೆಯಾದ ಹೊರತು ವ್ಯವಹರಣೆಗಳ ಯಾವುದೇ ಮುಂದೂಡಿಕೆಗೆ ಅವಕಾಶ ನೀಡತಕ್ಕದ್ದಲ್ಲ:

ಪರಂತು, ರಿಟರ್ನಿಂಗ್ ಅಧಿಕಾರಿಯು ಆಕ್ಷೇಪಣೆಯನ್ನು ಎತ್ತಿದಾಗ ಅಥವಾ ಯಾರೇ ಇತರ ವ್ಯಕ್ತಿಯು ಆಕ್ಷೇಪಣೆ ಸಲ್ಲಿಸಿದಾಗ ಸಂಬಂಧಪಟ್ಟ ಅಭ್ಯರ್ಥಿಯು, ಪರಿಶೀಲನೆಗಾಗಿ ನಿಗದಿಪಡಿಸಿದ ದಿನಾಂಕದ ಮರು ದಿನವನ್ನು ಮೀರದಂತೆ ಅದನ್ನು ಖಂಡಿಸಲು ಅವಕಾಶ ನೀಡಬಹುದು ಮತ್ತು ವ್ಯವಹರಣೆಗಳನ್ನು ಮುಂದೂಡಿದ ದಿನಾಂಕದಂದು ರಿಟರ್ನಿಂಗ್ ಅಧಿಕಾರಿಯು ತನ್ನ ತೀರ್ಪನ್ನು ದಾಖಲು ಮಾಡತಕ್ಕದ್ದು.

(6) ರಿಟರ್ನಿಂಗ್ ಅಧಿಕಾರಿಯು ಪ್ರತಿಯೊಂದು ನಾಮಪತ್ರದ ಮೇಲೆ ಅದನ್ನು ಅಂಗೀಕರಿಸಿದ ಅಥವಾ ತಿರಸ್ಕರಿಸಿದ ಬಗೆಗಿನ ತನ್ನ ತೀರ್ಮಾನವನ್ನು ಹಿಂಬರಹ ಮಾಡತಕ್ಕದ್ದು ಮತ್ತು ನಾಮಪತ್ರವನ್ನು ತಿರಸ್ಕರಿಸಿದ್ದರೆ ಅಂಥ ತಿರಸ್ಕರಿಸುವಿಕೆಗೆ ತನ್ನ ಕಾರಣಗಳನ್ನು ಬರಹದಲ್ಲಿ ಸಂಕ್ಷಿಪ್ತವಾಗಿ ವಿವರಣೆಯನ್ನು ದಾಖಲು ಮಾಡತಕ್ಕದ್ದು.

(7) ಎಲ್ಲಾ ನಾಮಪತ್ರಗಳನ್ನು ಪರಿಶೀಲಿಸಿ, ಅದನ್ನು ಅಂಗೀಕರಿಸಿದ ಅಥವಾ ತಿರಸ್ಕರಿಸಿದ ಬಗೆಗಿನ ತೀರ್ಮಾನವನ್ನು ದಾಖಲು ಮಾಡಿದ ಕೂಡಲೆ, ರಿಟರ್ನಿಂಗ್ ಅಧಿಕಾರಿಯು ಸಿಂಧುವಾಗಿ ನಾಮನಿರ್ದೇಶನಗೊಂಡ ಅಭ್ಯರ್ಥಿಗಳು ಅಂದರೆ, ಯಾರ ನಾಮನಿರ್ದೇಶನಗಳು ಸಿಂಧುವೆಂದು ಕಂಡುಬಂದಿರುವುವೋ ಆ ಅಭ್ಯರ್ಥಿಗಳ ಪಟ್ಟಿಯನ್ನು ನಮೂನೆ-4ರಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ತನ್ನ ಕಛೇರಿಯ ನೋಟೀಸ್ ಬೋರ್ಡಿಗೆ ಅಂಟಿಸತಕ್ಕದ್ದು.

(8) ಈ ನಿಯಮದ ಉದ್ದೇಶಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಒಂದು ವಾರ್ಡಿನ `ಮತದಾರರ ಪಟ್ಟಿಯಲ್ಲಿ ನಮೂದನೆಯಾದ ಒಂದು ಪ್ರಮಾಣಿತ ಪ್ರತಿಯು, ಆ ನಮೂನೆಯಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಆ ವಾರ್ಡಿನ ಮತದಾರನೆಂಬುದಕ್ಕೆ ನಿರ್ಣಾಯಕ ಸಾಕ್ಷಿ ಆಗಿರತಕ್ಕದ್ದು.

**16. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದು.-** (1) ಯಾರೇ ಅಭ್ಯರ್ಥಿಯು ನಮೂನೆ-5ರಲ್ಲಿ ಲಿಖಿತ ನೋಟೀಸಿನ ಮೂಲಕ ಮತ್ತು ಅಂಥ ಅಭ್ಯರ್ಥಿಯು ಖುದ್ದಾಗಿಯಾಗಲೀ ಅಥವಾ ಅವನ ಸೂಚಕನ ಮೂಲಕವಾಗಿಯಾಗಲೀ ಅಥವಾ ಅಂಥ ಅಭ್ಯರ್ಥಿಯಿಂದ ಅಧಿಕೃತಗೊಳಿಸಲಾಗಿರುವ ಚುನಾವಣಾ ಏಜೆಂಟ್ ಮೂಲಕವಾಗಿಯಾಗಲೀ ರಿಟರ್ನಿಂಗ್ ಅಧಿಕಾರಿಗೆ ನಿಯಮ 10ರ ಮೇರೆಗೆ ನಿಗದಿಪಡಿಸಿದ ದಿನಾಂಕದಂದು ಅಪರಾಹ್ನ 3.00 ಗಂಟೆಗೆ ಮುಂಚೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಬಹುದು.

(2) ಉಪ-ನಿಯಮ (1)ರ ಮೇರೆಗೆ ಅಂಥ ನೋಟೀಸನ್ನು ಸ್ವೀಕರಿಸಿದ ತರುವಾಯ, ರಿಟರ್ನಿಂಗ್ ಅಧಿಕಾರಿಯು ಅದರ ಮೇಲೆ ಅದನ್ನು ನೀಡಲಾದ ದಿನಾಂಕ ಮತ್ತು ಸಮಯವನ್ನು ಬರೆಯತಕ್ಕದ್ದು.

(3) ಉಪ-ನಿಯಮ (1)ರ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ನೋಟೀಸನ್ನು ನೀಡಲಾಗಿರುವ ಯಾರೇ ವ್ಯಕ್ತಿಯನ್ನು ಸದರಿ ನೋಟೀಸನ್ನು ರದ್ದುಗೊಳಿಸಲು ಅನುಮತಿಸತಕ್ಕದಲ್ಲ.

(4) ರಿಟರ್ನಿಂಗ್ ಅಧಿಕಾರಿಯು, ಹಿಂತೆಗೆದುಕೊಳ್ಳುವಿಕೆಯ ನೋಟೀಸಿನ ನೈಜತೆಯ ಬಗ್ಗೆ ಮತ್ತು ಅದನ್ನು ನೀಡಲಾದ ವ್ಯಕ್ತಿಯ ಗುರುತಿನ ಬಗ್ಗೆ, ಮನವರಿಕೆ ಮಾಡಿಕೊಂಡ ಮೇಲೆ ತನ್ನ ಕಛೇರಿಯ ನೋಟೀಸು ಬೋರ್ಡಿನ ಮೇಲೆ ನಮೂನೆ-6ರಲ್ಲಿ ನೋಟೀಸನ್ನು ಅಂಟಿಸುವಂತೆ ಮಾಡತಕ್ಕದ್ದು.

**17. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸುವುದು.-** (1) ನಿಯಮ 16ರ ಮೇರೆಗೆ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಬಹುದಾಗಿರುವ ಅವಧಿಯೂ ಮುಕ್ತಾಯವಾದ ಕೂಡಲೇ ರಿಟರ್ನಿಂಗ್ ಅಧಿಕಾರಿಯು, ಸ್ಪರ್ಧಿಸುತ್ತಿರುವ ಅಂದರೆ, ಸಿಂಧುವಾಗಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ ಪಟ್ಟಿಯಲ್ಲಿ ಒಳಗೊಂಡಿರುವ ಮತ್ತು ಸದರಿ ಅವಧಿಯಲ್ಲಿ ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಂಡಿರದ ಅಭ್ಯರ್ಥಿಗಳ ಪಟ್ಟಿಯನ್ನು ಕನ್ನಡ ಭಾಷೆಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಪ್ರಕಟಿಸತಕ್ಕದ್ದು.

ಪರಂತು, ರಾಜ್ಯ ಚುನಾವಣಾ ಆಯೋಗವು ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಕನ್ನಡವಲ್ಲದ ಇತರ ಭಾಷೆಯಲ್ಲಿ ಸಿದ್ಧಪಡಿಸಬಹುದೆಂದು ನಿರ್ದೇಶಿಸಬಹುದು.

(2) ಸದರಿ ಪಟ್ಟಿಯು ಕನ್ನಡ ವರ್ಣಮಾಲೆಯ ಕ್ರಮದಲ್ಲಿ ನಾಮಪತ್ರದಲ್ಲಿ ನೀಡಲಾದಂತೆ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಹೆಸರುಗಳು ಮತ್ತು ವಿಳಾಸಗಳನ್ನು ಒಳಗೊಂಡಿರತಕ್ಕದ್ದು.

(3) ಮತದಾನವು ಅವಶ್ಯಕವಾದಲ್ಲಿ ರಿಟರ್ನಿಂಗ್ ಅಧಿಕಾರಿಯು, ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳು ತಮ್ಮ ನಾಮಪತ್ರದಲ್ಲಿ ತಿಳಿಸಿರುವ ಆಯ್ಕೆಯ ಚಿಹ್ನೆಗಳನ್ನು ಪರಿಗಣಿಸತಕ್ಕದ್ದು ಮತ್ತು ನಿಯಮ 21ರ ಅನುಸಾರವಾಗಿ ಚಿಹ್ನೆಗಳನ್ನು ಹಂಚಿಕೆ ಮಾಡತಕ್ಕದ್ದು.

(4) ಅಭ್ಯರ್ಥಿಗೆ ಯಾವುದೇ ಚಿಹ್ನೆಯ ಹಂಚಿಕೆಯು ಅಂತಿಮವಾಗಿರತಕ್ಕದ್ದು.

(5) ರಿಟರ್ನಿಂಗ್ ಅಧಿಕಾರಿಯು, ಅಭ್ಯರ್ಥಿಗೆ ಹಂಚಲಾದ ಚಿಹ್ನೆಯ ಬಗ್ಗೆ, ಪ್ರತಿಯೊಬ್ಬ ಅಭ್ಯರ್ಥಿಗೆ ಅಥವಾ ಅವನ ಚುನಾವಣಾ ಏಜೆಂಟನಿಗೆ ತಕ್ಷಣ ತಿಳಿಸತಕ್ಕದ್ದು ಮತ್ತು ಅದರ ಒಂದು ಮಾದರಿಯನ್ನು ಒದಗಿಸತಕ್ಕದ್ದು.

(6) ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪಟ್ಟಿಯು ನಮೂನೆ-7 ರಲ್ಲಿರತಕ್ಕದ್ದು.

**18. ರಾಜಕೀಯ ಪಕ್ಷಗಳ ಮನ್ನಣೆ.-** ಚುನಾವಣಾ ಚಿಹ್ನೆಗಳ (ಕಾಯ್ದಿರಿಸುವಿಕೆ ಮತ್ತು ಹಂಚಿಕೆ) ಆದೇಶ, 1968 ರ ಮೇರೆಗೆ ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕ ರಾಜ್ಯದಲ್ಲಿ ರಾಜ್ಯ ಪಕ್ಷವೆಂದು ಭಾರತ ಚುನಾವಣಾ ಆಯೋಗದಿಂದ ಮನ್ನಣೆ ಪಡೆದ ಪ್ರತಿಯೊಂದು ರಾಜಕೀಯ ಪಕ್ಷವು ನಗರ ಪಾಲಿಕೆಗಳ ಚುನಾವಣೆಯ ಉದ್ದೇಶಕ್ಕಾಗಿ ಮಾನ್ಯತೆ ಪಡೆದ ರಾಜಕೀಯ ಪಕ್ಷವಾಗಿರತಕ್ಕದ್ದು.

**19. ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಮತ್ತು ಚಿಹ್ನೆಗಳ ಪಟ್ಟಿಯ ಪ್ರಕಟಣೆ.-** (1) ಈ ನಿಯಮಗಳ ಉದ್ದೇಶಕ್ಕಾಗಿ ರಾಜ್ಯ ಚುನಾವಣಾ ಆಯೋಗವು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಮತ್ತು ಅಂಥ ಮಾನ್ಯತೆ ಪಡೆದ ಪ್ರತಿಯೊಂದು ರಾಜಕೀಯ ಪಕ್ಷಕ್ಕೆ ಕಾಯ್ದಿರಿಸಿದ ಚಿಹ್ನೆಗಳ ಒಂದು ಪಟ್ಟಿ ಮತ್ತು ಮುಕ್ತ ಚಿಹ್ನೆಗಳ ಒಂದು ಪಟ್ಟಿಯನ್ನು ಪ್ರಕಟಿಸತಕ್ಕದ್ದು.

(2) ರಾಜ್ಯ ಚುನಾವಣಾ ಆಯೋಗವು ಬೇರೆ ರಾಜ್ಯಗಳಲ್ಲಿ ನೋಂದಾಯಿತ ಅಥವಾ ಮಾನ್ಯತೆ ಪಡೆದಿರುವ ರಾಜಕೀಯ ಪಕ್ಷಗಳ ಚಿಹ್ನೆಗಳ ಪಟ್ಟಿಯನ್ನು ಅಧಿಸೂಚಿಸತಕ್ಕದ್ದು.

**20. ಮಾನ್ಯತೆ ಪಡೆಯದಿರುವ ರಾಜಕೀಯ ಪಕ್ಷಗಳ ಪಟ್ಟಿಯ ಪ್ರಕಟಣೆ.-** ರಾಜ್ಯ ಚುನಾವಣಾ ಆಯೋಗವು ಕರ್ನಾಟಕ ರಾಜ್ಯದಲ್ಲಿ ಮಾನ್ಯತೆ ಪಡೆಯದಿರುವ ರಾಜಕೀಯ ಪಕ್ಷಗಳ ಒಂದು ಪಟ್ಟಿಯನ್ನು ಅಧಿಸೂಚಿಸತಕ್ಕದ್ದು.

**21. ಚಿಹ್ನೆಗಳ ಹಂಚಿಕೆ.-** (1) ಚುನಾವಣೆಯಲ್ಲಿ ಯಾವುದೇ ಮಾನ್ಯತೆ ಪಡೆದ ರಾಜಕೀಯ ಪಕ್ಷದಿಂದ ನಿಲ್ಲುವ ಅಭ್ಯರ್ಥಿಗೆ ಆ ಪಕ್ಷಕ್ಕಾಗಿ ಕಾಯ್ದಿರಿಸಿದ ಚಿಹ್ನೆಯನ್ನೇ ಹಂಚಿಕೆ ಮಾಡತಕ್ಕದ್ದು ಮತ್ತು ಇತರ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದಲ್ಲ.

(2) ಕಾಯ್ದಿರಿಸಿದ ಚಿಹ್ನೆಯನ್ನು ಮಾನ್ಯತೆ ಪಡೆದ ರಾಜಕೀಯ ಪಕ್ಷದಿಂದ ನಿಲ್ಲುವ ಅಭ್ಯರ್ಥಿಯನ್ನು ಹೊರತುಪಡಿಸಿ ಯಾರೇ ಇತರ ಅಭ್ಯರ್ಥಿಯು ಆಯ್ಕೆಮಾಡಿಕೊಳ್ಳತಕ್ಕದ್ದಲ್ಲ ಅಥವಾ ಆತನಿಗೆ ಹಂಚಿಕೆ ಮಾಡತಕ್ಕದ್ದಲ್ಲ.

(3) ಚುನಾವಣೆಯಲ್ಲಿ ಮಾನ್ಯತೆ ಪಡೆದ ರಾಜಕೀಯ ಪಕ್ಷದಿಂದ ನಿಲ್ಲುವ ಅಭ್ಯರ್ಥಿಯನ್ನು ಹೊರತುಪಡಿಸಿ, ಯಾರೇ ಅಭ್ಯರ್ಥಿಯು ಇದರಲ್ಲಿ ಇನ್ನು ಮುಂದೆ ಉಪಬಂಧಿಸಲಾದ ನಿಯಮಗಳಿಗನುಸಾರವಾಗಿ, ಮುಕ್ತ ಚಿಹ್ನೆಗಳೆಂದು ನಿರ್ದಿಷ್ಟಪಡಿಸಿದ ಚಿಹ್ನೆಗಳಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳತಕ್ಕದ್ದು ಮತ್ತು ಆತನಿಗೆ ಹಂಚಿಕೆ ಮಾಡತಕ್ಕದ್ದು:

ಪರಂತು, ಚುನಾವಣೆಯಲ್ಲಿ ಮಾನ್ಯತೆ ಪಡೆಯದ ರಾಜಕೀಯ ಪಕ್ಷದಿಂದ ನಿಲ್ಲುವ ಅಭ್ಯರ್ಥಿಯ ಸಂದರ್ಭದಲ್ಲಿ ಅಂಥ ಅಭ್ಯರ್ಥಿಯು ಆಯ್ಕೆಮಾಡಿಕೊಂಡ ಮುಕ್ತ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದು ಮತ್ತು ಬೇರೆ ಯಾರಿಗೂ ಹಂಚಿಕೆ ಮಾಡಬಾರದು ಮತ್ತು ಎರಡು ಅಥವಾ ಹೆಚ್ಚು ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳಿಂದ ನಿಲ್ಲುವ ಅಭ್ಯರ್ಥಿಗಳು ಒಂದೇ ಮುಕ್ತ ಚಿಹ್ನೆಯನ್ನು ಆಯ್ಕೆ ಮಾಡಿಕೊಂಡಿದ್ದರೆ, ರಿಟರ್ನಿಂಗ್ ಅಧಿಕಾರಿಯು ಅಂಥ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳಿಂದ ನಿಲ್ಲಿಸಿದ ಯಾವ ಅಭ್ಯರ್ಥಿಗಳಿಗೆ ಯಾವ ಮುಕ್ತ ಚಿಹ್ನೆಯನ್ನು ಹಂಚತಕ್ಕದ್ದು ಎಂಬುದನ್ನು ಚೀಟಿ ಎತ್ತುವ ಮೂಲಕ ನಿರ್ಧರಿಸತಕ್ಕದ್ದು ಮತ್ತು ಯಾರಿಗೆ ಚೀಟಿ ಬರುತ್ತದೆಯೋ ಆ ಅಭ್ಯರ್ಥಿಗೆ ಆ ಮುಕ್ತ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದು ಮತ್ತು ಬೇರೆ ಯಾರಿಗೂ ಹಂಚಿಕೆ ಮಾಡಬಾರದು. ಉಳಿದಿರುವ ಮುಕ್ತ ಚಿಹ್ನೆಗಳನ್ನು ಇತರ ಅಭ್ಯರ್ಥಿಗಳಿಗೆ ಹಂಚಿಕೆ ಮಾಡತಕ್ಕದ್ದು.

**ವಿವರಣೆ:** ಈ ನಿಯಮ ಮತ್ತು 20ನೇ ನಿಯಮದ ಉದ್ದೇಶಕ್ಕಾಗಿ "ಮಾನ್ಯತೆ ಪಡೆಯದ ರಾಜಕೀಯ ಪಕ್ಷ" ಎಂದರೆ, ಜನತಾ ಪ್ರಾತಿನಿಧ್ಯ ಅಧಿನಿಯಮ, 1951 (1951 ರ ಕೇಂದ್ರ ಅಧಿನಿಯಮ, 43)ರ 29ಎ ಪ್ರಕರಣದ ಮೇರೆಗೆ ರಾಜಕೀಯ ಪಕ್ಷವೆಂದು ನೋಂದಾಯಿತವಾದ ರಾಜಕೀಯ ಪಕ್ಷ ಮತ್ತು ಬೆಂಗಳೂರಿನಲ್ಲಿ ತನ್ನ ನೋಂದಾಯಿತ ಕಛೇರಿ ಅಥವಾ ಶಾಖಾ ಕಛೇರಿಯನ್ನು ಹೊಂದಿರುವ ಮತ್ತು ಚುನಾವಣಾ ಚಿಹ್ನೆ (ಕಾಯ್ದಿರಿಸಿದ ಮತ್ತು ಹಂಚಿಕೆ) ಆದೇಶ, 1968ರ ಅರ್ಥವ್ಯಾಪ್ತಿಯೊಳಗೆ ಕರ್ನಾಟಕದಲ್ಲಿ ಮಾನ್ಯತೆ ಪಡೆಯದಿರುವ ರಾಷ್ಟ್ರೀಯ ಪಕ್ಷ ಅಥವಾ ಮಾನ್ಯತೆ ಪಡೆದ ರಾಜ್ಯ ಪಕ್ಷ.

(4) ಚುನಾವಣೆಯಲ್ಲಿ ಕೇವಲ ಒಬ್ಬ ಅಭ್ಯರ್ಥಿಯಿಂದ ಆಯ್ಕೆಮಾಡಿಕೊಳ್ಳಲಾದ ಮಾನ್ಯತೆ ಪಡೆಯದ ರಾಜಕೀಯ ಪಕ್ಷದಿಂದ ಸ್ಪರ್ಧಿಸಿದ ಅಭ್ಯರ್ಥಿಯು ಒಂದು ಮುಕ್ತ ಚಿಹ್ನೆಯನ್ನು ಆಯ್ಕೆ ಮಾಡಿಕೊಂಡಿರುವುದನ್ನು ಹೊರತುಪಡಿಸಿ ರಿಟರ್ನಿಂಗ್ ಅಧಿಕಾರಿಯು ಆ ಚಿಹ್ನೆಯನ್ನು ಆ ಅಭ್ಯರ್ಥಿಗೆ ಹಂಚಿಕೆ ಮಾಡತಕ್ಕದ್ದು ಮತ್ತು ಬೇರಾರಿಗೂ ಹಂಚಿಕೆ ಮಾಡತಕ್ಕದ್ದಲ್ಲ.

(5) ಯಾವುದೇ ಮಾನ್ಯತೆ ಪಡೆಯದ ರಾಜಕೀಯ ಪಕ್ಷದಿಂದ ಸ್ಪರ್ಧಿಸುವ ಅಭ್ಯರ್ಥಿಯು ಒಂದು ಚಿಹ್ನೆಯನ್ನು ಆಯ್ಕೆಮಾಡಿಕೊಂಡಿದ್ದು, ಅದೇ ಮುಕ್ತ ಚಿಹ್ನೆಯನ್ನು ಒಬ್ಬನಿಗಿಂತ ಹೆಚ್ಚು ಅಭ್ಯರ್ಥಿಗಳು ಆಯ್ಕೆಮಾಡಿಕೊಂಡಿದ್ದಲ್ಲಿ, ಆಗ,-

(i) ರಿಟರ್ನಿಂಗ್ ಅಧಿಕಾರಿಯು, ಅಭ್ಯರ್ಥಿಗಳಲ್ಲಿ ಯಾರಿಗೆ ಆ ಮುಕ್ತ ಚಿಹ್ನೆಯನ್ನು ನೀಡಬೇಕೆಂಬುದನ್ನು ಚೀಟಿ ಎತ್ತುವ ಮೂಲಕ ನಿರ್ಧರಿಸತಕ್ಕದ್ದು ಮತ್ತು ಆ ಚೀಟಿ ಯಾವ ಅಭ್ಯರ್ಥಿಯ ಪರವಾಗಿರುತ್ತದೆಯೋ ಆ ಅಭ್ಯರ್ಥಿಗೆ ಹಂಚಿಕೆ ಮಾಡತಕ್ಕದ್ದು, ಇತರೇ ಬೇರಾರಿಗೂ ಹಂಚಿಕೆ ಮಾಡಬಾರದು; ಮತ್ತು

(ii) ನಿರ್ದಿಷ್ಟಪಡಿಸಿದ ಮುಕ್ತ ಚಿಹ್ನೆಗಳ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ಅಭ್ಯರ್ಥಿಗಳಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯು, ಉಳಿದ ಅಭ್ಯರ್ಥಿಗಳಿಗೆ ತನ್ನ ವಿವೇಚನಾನುಸಾರ ಯಾವುದೇ ಇತರ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದು.

**ವಿವರಣೆ:-** ಈ ನಿಯಮಗಳ ಉದ್ದೇಶಕ್ಕಾಗಿ,-

(ಎ) ಅಭ್ಯರ್ಥಿಯು ಆ ಬಗ್ಗೆ, ತನ್ನ ನಾಮಪತ್ರದಲ್ಲಿ ಘೋಷಣೆ ಮಾಡಿದ್ದರೆ ಮತ್ತು ಮಾಡಿದ್ದಾಗ ಮಾತ್ರ;

(ಬಿ) ಆ ಬಗ್ಗೆ, ಲಿಖಿತದಲ್ಲಿ ನೋಟೀಸನ್ನು ನಾಮಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕದಂದು ಅಪರಾಹ್ನ 3:00 ಗಂಟೆಗೂ ಮುಂಚೆ ರಿಟರ್ನಿಂಗ್ ಅಧಿಕಾರಿಗೆ ನೀಡಿದ್ದರೆ ಮತ್ತು ನೀಡಿದ್ದಾಗ ಮಾತ್ರ; ಮತ್ತು

(ಸಿ) ಸದರಿ ನೋಟೀಸಿಗೆ ಪಕ್ಷದ ಅಧ್ಯಕ್ಷ, ಕಾರ್ಯದರ್ಶಿ ಅಥವಾ ಪಕ್ಷದ ಇತರ ಯಾರೇ ಪದಾಧಿಕಾರಿಯು ರುಜು ಮಾಡಿದ್ದರೆ ಮತ್ತು ಅಧ್ಯಕ್ಷ, ಕಾರ್ಯದರ್ಶಿ ಅಥವಾ ಅಂಥ ಇತರ ಪದಾಧಿಕಾರಿಯ ಅಂಥ ನೋಟೀಸನ್ನು ಕಳುಹಿಸುವುದಕ್ಕೆ ಪಕ್ಷದಿಂದ ಅಧಿಕೃಗೊಳಿಸಿದ್ದರೆ ಮತ್ತು ಅಧ್ಯಕ್ಷ, ಕಾರ್ಯದರ್ಶಿ ಅಥವಾ ಇತರ ಪದಾಧಿಕಾರಿಯ ಹೆಸರು ಮತ್ತು ಮಾದರಿ ರುಜುವನ್ನು ಮುಂಚಿತವಾಗಿಯೇ ಆ ವಾರ್ಡಿನ ರಿಟರ್ನಿಂಗ್ ಅಧಿಕಾರಿಗೆ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ಕಳುಹಿಸಿದ್ದರೆ, ರಾಷ್ಟ್ರೀಯ ಪಕ್ಷದ ಸಂದರ್ಭದಲ್ಲಿ ರಾಜ್ಯ ಮಟ್ಟದಲ್ಲಿನ ಪಕ್ಷಗಳ ಘಟಕದ ಅಧ್ಯಕ್ಷರಿಂದ ಅಥವಾ ಅಂತಹ ಘಟಕದ ಪದಾಧಿಕಾರಿಯಿಂದ ಅಧಿಕೃತಗೊಳಿಸಿದ್ದರೆ

- ಅಭ್ಯರ್ಥಿಯನ್ನು ಒಂದು ರಾಜಕೀಯ ಪಕ್ಷದಿಂದ ಸ್ಪರ್ಧಿಸುತ್ತಿರುವ ಅಭ್ಯರ್ಥಿಯೆಂದು ಭಾವಿಸತಕ್ಕದ್ದು.

(6) ಒಂದು ರಾಜಕೀಯ ಪಕ್ಷವು ಕರ್ನಾಟಕದಲ್ಲಿ ಅಥವಾ ಯಾವುದೇ ಇತರೆ ರಾಜ್ಯದಲ್ಲಿ ನೋಂದಾಯಿತ ಮತ್ತು ಮಾನ್ಯತೆ ಪಡೆದ ಪಕ್ಷವಾಗಿದ್ದರೆ ಮತ್ತು ಅಂತಹ ಪಕ್ಷವು ರಾಜ್ಯದಲ್ಲಿನ ಚುನಾವಣೆಯಲ್ಲಿ ಸ್ಪರ್ಧಿಸಲು ಅಭ್ಯರ್ಥಿಗಳನ್ನು ನಿಲ್ಲಿಸಿದ್ದರೆ, ಆ ಪಕ್ಷದ ಅಭ್ಯರ್ಥಿಗಳಿಗೆ ಇತರ ರಾಜ್ಯದಲ್ಲಿ ನೀಡಿರುವ ಚಿಹ್ನೆಗಳನ್ನೇ ಹಂಚಿಕೆ ಮಾಡತಕ್ಕದ್ದು ಅಂತಹ ಚಿಹ್ನೆಗಳು ಮುಕ್ತ ಚಿಹ್ನೆಗಳ ಪಟ್ಟಿಯಲ್ಲಿ ಇಲ್ಲದಿದ್ದರೂ ಸಹ, ಈ ಕೆಳಗಿನ ಷರತ್ತುಗಳನ್ನು ಪೂರೈಸಿದಲ್ಲಿ ಸ್ವತಃ ಹಂಚಿಕೆ ಮಾಡಬಹುದು, ಎಂದರೆ:-

(i) ಅಂತಹ ಪಕ್ಷದ ಅಧ್ಯಕ್ಷನು ರಾಜ್ಯ ಚುನಾವಣಾ ಆಯೋಗವು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ ಮೂರು ದಿನಗಳೊಳಗೆ ತಮ್ಮ ಪಕ್ಷದಿಂದ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಇಂತಹುದೇ ನಿರ್ದಿಷ್ಟ ಚಿಹ್ನೆಯನ್ನು ಹಂಚಿಕೆ ಮಾಡುವಂತೆ ಕೋರಿ ರಾಜ್ಯ ಚುನಾವಣಾ ಆಯೋಗಕ್ಕೆ, ಲಿಖಿತದಲ್ಲಿ ಮನವಿಯನ್ನು ಸಲ್ಲಿಸತಕ್ಕದ್ದು.

(ii) ಇತರೆ ರಾಜ್ಯಗಳಲ್ಲಿ ಮಾನ್ಯತೆ ಪಡೆದ ಒಂದಕ್ಕಿಂತ ಹೆಚ್ಚು ಪಕ್ಷಗಳು ತಮ್ಮ ಪಕ್ಷಕ್ಕೆ ಕಾಯ್ದಿರಿಸಿದ ಚಿಹ್ನೆಯಾಗಿ ಒಂದೇ ಚಿಹ್ನೆಯನ್ನು ಆಯ್ಕೆ ಮಾಡಿಕೊಂಡಿದ್ದರೆ ಮತ್ತು ಅಂತಹ ಪಕ್ಷಗಳು ತಮ್ಮ ಅಭ್ಯರ್ಥಿಗಳಿಗೆ ಅದೇ ಚಿಹ್ನೆಯನ್ನು ನೀಡಲು ಮನವಿಯನ್ನು ಸಲ್ಲಿಸಿದ್ದರೆ, ರಾಜ್ಯ ಚುನಾವಣಾ ಆಯೋಗವು ಚೀಟಿ ಎತ್ತುವ ಮುಖಾಂತರ ಅಂತಹ ಪಕ್ಷದ ಅಭ್ಯರ್ಥಿಗೆ ಚಿಹ್ನೆಯನ್ನು

ಹಂಚಿಕೆ ಮಾಡತಕ್ಕದ್ದು, ಇತರೆ ಪಕ್ಷದ ಅಭ್ಯರ್ಥಿಗಳು ಮುಕ್ತ ಚಿಹ್ನೆಗಳಲ್ಲಿ ಉಳಿದ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.

(iii) ಯಾವ ಪಕ್ಷವು ತನ್ನನ್ನು ಅಭ್ಯರ್ಥಿಯನ್ನಾಗಿ ನಿಲ್ಲಿಸಿದೆ ಎಂಬುದನ್ನು ನಾಮಪತ್ರದಲ್ಲಿ ಅಭ್ಯರ್ಥಿಯು ಘೋಷಣೆ ಮಾಡತಕ್ಕದ್ದು ಅಂದರೆ, ವ್ಯತಿರಿಕ್ತವಾಗುವಂತಹ ಅಂಶಗಳು ನಾಮಪತ್ರ ಅಥವಾ ನಮೂನೆ-ಸಿ ಅಥವಾ `ಡಿ' ಯಲ್ಲಿ ಕಂಡುಬಂದ ಸಂದರ್ಭದಲ್ಲಿ ಅಂತಹ ಅಭ್ಯರ್ಥಿಗೆ ಕಾಯ್ದಿರಿಸಿದ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದಲ್ಲ ಮತ್ತು ಅಂಥಹ ಅಭ್ಯರ್ಥಿಗೆ ಮುಕ್ತ ಚಿಹ್ನೆಗಳ ಪಟ್ಟಿಯಿಂದ ಚುನಾವಣಾ ಆಯುಕ್ತರ ಮೂಲಕ ಚಿಹ್ನೆಯನ್ನು ಹಂಚಿಕೆಮಾಡತಕ್ಕದ್ದು.

(iv) ಅರ್ಜಿಯನ್ನು ತಿರಸ್ಕರಿಸಲು ಯಾವುದೇ ಸಮಂಜಸವಾದ ಕಾರಣಗಳು ಇಲ್ಲವೆಂದು ರಾಜ್ಯ ಚುನಾವಣಾ ಆಯೋಗ ಮನವರಿಕೆ ಮಾಡಿಕೊಳ್ಳತಕ್ಕದ್ದು ಆದರೆ ಮುಂದೆ ನಡೆಯುವ ಯಾವುದೇ ಇತರ ಚುನಾವಣೆಗೆ ಅದೇ ಚಿಹ್ನೆಯನ್ನು ಹಂಚಿಕೆ ಮಾಡುವಂತೆ ಕ್ಲೇಮು ಮಾಡುವಂತಿಲ್ಲ.

**22. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ.-** (1) ನಿಯಮ 17ರ ಮೇರೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿದ ತರುವಾಯ ಕೂಡಲೇ ಅದರ ಒಂದು ಪ್ರತಿಯನ್ನು ರಿಟರ್ನಿಂಗ್ ಅಧಿಕಾರಿಯು ತನ್ನ ಕಛೇರಿಯ ನೋಟೀಸು ಬೋರ್ಡಿನ ಮೇಲೆ ಅಂಟಿಸುವಂತೆ ಮಾಡತಕ್ಕದ್ದು.

(2) ಮತದಾನವು ಅವಶ್ಯವಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿಯು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯ ಪ್ರತಿಯನ್ನು ಮತ್ತು ಹಂಚಿಕೆ ಮಾಡಿದ ಚಿಹ್ನೆಯ ಚಿತ್ರದ ಮಾದರಿಯನ್ನು ಪ್ರತಿಯೊಬ್ಬ ಅಂಥ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟಿನಿಗೆ ಒದಗಿಸತಕ್ಕದ್ದು.

**23. ಚುನಾವಣಾ ಏಜೆಂಟ್‌ನ ನೇಮಕಾತಿ.-** (1) ಅಧಿನಿಯಮದ ೪೮ನೇ ಪ್ರಕರಣದ ಮೇರೆಗಿನ ಉಪಬಂಧಗಳಿಗೊಳಪಟ್ಟು, ಚುನಾವಣೆಯಲ್ಲಿನ ಅಭ್ಯರ್ಥಿಯು ನಮೂನೆ-8ರಲ್ಲಿ ಒಬ್ಬ ಚುನಾವಣಾ ಎಜೆಂಟ್‌ನನ್ನು ನೇಮಕ ಮಾಡಬಹುದು ಮತ್ತು ಅಂತಹ ನೇಮಕಾತಿಯ ನೋಟೀಸನ್ನು ದ್ವಿಪ್ರತಿಯಲ್ಲಿ ರಿಟರ್ನಿಂಗ್ ಅಧಿಕಾರಿಗೆ ಅದನ್ನು ಕಳುಹಿಸುವ ಮೂಲಕ ನೀಡತಕ್ಕದ್ದು. ಅವನ ನೇಮಕಾತಿಯ ಪ್ರತಿಗೆ ತನ್ನ ಅನುಮೋದನೆಯ ಗುರುತಾಗಿ ತನ್ನ ಮೊಹರು ಮತ್ತು ಸಹಿಯನ್ನು ಅದರ ಮೇಲೆ ಹಾಕಿದ ತರುವಾಯ ಚುನಾವಣಾ ಏಜೆಂಟನಿಗೆ ಅದರ ಒಂದು ಪ್ರತಿಯನ್ನು ಹಿಂತಿರುಗಿಸತಕ್ಕದ್ದು.

(2) ಚುನಾವಣಾ ಏಜೆಂಟ್‌ನ ನೇಮಕಾತಿಯ ರದ್ದತಿಯನ್ನು ನಮೂನೆ-9ರಲ್ಲಿ ಮಾಡತಕ್ಕದ್ದು ಚುನಾವಣಾ ಏಜೆಂಟ್‌ನ ಅಂಥ ರದ್ದತಿ ಅಥವಾ ಮರಣದ ಸಂದರ್ಭದಲ್ಲಿ ಅಭ್ಯರ್ಥಿಯು ಚುನಾವಣೆ ಮುಗಿಯುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ (1)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ರೀತಿಯಲ್ಲಿ ಹೊಸ ನೇಮಕಾತಿಯನ್ನು ಮಾಡತಕ್ಕದ್ದು.

**24. ಪೋಲಿಂಗ್ ಏಜೆಂಟರುಗಳ ನೇಮಕಾತಿ.-** (1) ಸ್ಪರ್ಧಿಸುತ್ತಿರುವ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಪ್ರತಿಯೊಂದು ಮತದಾನ ಕೇಂದ್ರದಲ್ಲಿ ತನ್ನ ಪರವಾಗಿ ಅಂಥ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಒಬ್ಬ ಪೋಲಿಂಗ್ ಏಜೆಂಟ್ ಮತ್ತು ಇಬ್ಬರು ಬದಲಿ ಏಜೆಂಟರುಗಳನ್ನು ನೇಮಕ ಮಾಡಬಹುದು.

(2) ಆಂಥ ಪ್ರತಿಯೊಂದು ನೇಮಕಾತಿಯನ್ನು ನಮೂನೆ-10ರಲ್ಲಿ ಮಾಡತಕ್ಕದ್ದು ಮತ್ತು ಮತದಾನ ಕೇಂದ್ರದಲ್ಲಿ ಹಾಜರಿರುವ ಸಲುವಾಗಿ ಪೋಲಿಂಗ್ ಏಜೆಂಟನನ್ನು ನೇಮಕ ಮಾಡತಕ್ಕದ್ದು.

(3) ಪೋಲಿಂಗ್ ಏಜೆಂಟನು (2)ನೇ ಉಪ ನಿಯಮದ ಮೇರೆಗೆ ತನ್ನ ನೇಮಕಾತಿಯ ಲಿಖಿತ ಪತ್ರವನ್ನು ಪ್ರಿಸೈಡಿಂಗ್ ಅಧಿಕಾರಿಗೆ ಅದರಲ್ಲಿ ಒಳಗೊಂಡಿರುವ ಘೋಷಣೆಯನ್ನು ಪ್ರಿಸೈಡಿಂಗ್ ಅಧಿಕಾರಿಯ ಮುಂದೆ ಕ್ರಮಬದ್ಧವಾಗಿ ಪೂರ್ಣಗೊಳಿಸಿ ಮತ್ತು ರುಜು ಹಾಕಿ, ಅವನು ಅದನ್ನು ನೀಡದ ಹೊರತು ಯಾವುದೇ ಮತದಾನದ ಕೇಂದ್ರದೊಳಗೆ ಪ್ರವೇಶಿಸಲು ಅವಕಾಶ ನೀಡತಕ್ಕದ್ದಲ್ಲ.

(4) ಪೋಲಿಂಗ್ ಏಜೆಂಟಿನ ನೇಮಕಾತಿಯ ರದ್ದತಿಯು ನಮೂನೆ-11 ರಲ್ಲಿರತಕ್ಕದ್ದು.

(5) ಅಂಥ ಯಾವುದೇ ರದ್ದತಿಯು ಅಥವಾ ಪೋಲಿಂಗ್ ಏಜೆಂಟನ ಮರಣದ ಸಂದರ್ಭದಲ್ಲಿ ಅಭ್ಯರ್ಥಿ ಅಥವಾ ತನ್ನ ಚುನಾವಣಾ ಏಜೆಂಟನು ಮತದಾನವು ಮುಗಿಯುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ (2)ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಹೊಸ ನೇಮಕಾತಿಯನ್ನು ಮಾಡಬಹುದು.

**25. ಮತದಾನ ಕೇಂದ್ರಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನ ಹಾಜರಾತಿ.-** (1) ಮತದಾನ ನಡೆಯುವ ಪ್ರತಿಯೊಂದು ಚುನಾವಣೆಯಲ್ಲಿ ಮತದಾನ ನಡೆಯುವಾಗ, 7ನೇ ನಿಯಮದ ಮೇರೆಗೆ ಉಪಬಂಧಿಸಿದ ಯಾವುದೇ ಮತದಾನದ ಕೇಂದ್ರದಲ್ಲಿ ಅಂಥ ಚುನಾವಣೆಯಲ್ಲಿ ಸ್ಪರ್ಧಿಸುವ ಪ್ರತಿಯೊಬ್ಬ ಅಭ್ಯರ್ಥಿ ಮತ್ತು ಆತನ ಚುನಾವಣಾ ಏಜೆಂಟನು, ಹಾಜರಾಗುವ ಹಕ್ಕನ್ನು ಹೊಂದಿರತಕ್ಕದ್ದು.

(2) ಸ್ಪರ್ಧಿಸುವ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಅಂಥ ಸ್ಪರ್ಧಿಸುವ ಅಭ್ಯರ್ಥಿಯ ಯಾವುದೇ ಮತದಾನದ ಏಜೆಂಟ್ ಅಥವಾ ಎಣಿಕ ಏಜೆಂಟನನ್ನು ನೇಮಕ ಮಾಡಿದ್ದರೆ, ಈ ನಿಯಮಗಳ ಮೇರೆಗೆ ಹಾಗೆ ಮಾಡಲು ಅಧಿಕೃತಗೊಳಿಸಿದ್ದರೆ ಅಥವಾ ಅಂಥ ಕೃತ್ಯ ಅಥವಾ ಕಾರ್ಯಮಾಡಲು ಅಂಥ ಸ್ಪರ್ಧಿಸುವ ಅಭ್ಯರ್ಥಿಯ ತನ್ನ ಯಾರೇ ಪೋಲಿಂಗ್ ಏಜೆಂಟ್ ಅಥವಾ ಎಣಿಕೆ ಏಜೆಂಟನಿಗೆ ಸಹಾಯ ಮಾಡಬಹುದು.

**26. ಮತದಾನ ಅಥವಾ ಎಣಿಕೆ ಏಜೆಂಟರುಗಳು ಹಾಜರಾಗದಿರುವುದು.-** ಯಾವುದೇ ಕೃತ್ಯ ಅಥವಾ ಕಾರ್ಯವನ್ನು ಮಾಡಲು ಈ ನಿಯಮಗಳ ಮೇರೆಗೆ ಅಗತ್ಯಪಡಿಸಿರುವಾಗ ಅಥವಾ ಅಧಿಕೃತಗೊಳಿಸಿರುವಾಗ ಮತದಾನದ ಅಥವಾ ಎಣಿಕೆ ಏಜೆಂಟ್‌ನ ಸಮ್ಮುಖದಲ್ಲಿ ಮಾಡಬೇಕಾಗಿರುವ, ಗೊತ್ತುಪಡಿಸಲಾದ ಸಮಯ ಮತ್ತು ಸ್ಥಳದಲ್ಲಿ ಅಂಥ ಏಜೆಂಟನು ಹಾಜರಿಲ್ಲದಿರುವಲ್ಲಿ ಯಾವುದೇ ಕೃತ್ಯ ಅಥವಾ ಕಾರ್ಯವನ್ನು ಅನ್ಯಥಾ ಕ್ರಮಬದ್ಧವಾಗಿ ಮಾಡಿದ್ದರೆ, ಹಾಗೆ ಮಾಡಿದ ಯಾವುದೇ ಕೃತ್ಯ ಅಥವಾ ಕಾರ್ಯವನ್ನು ಅಮಾನ್ಯಗೊಳಿಸತಕ್ಕದ್ದಲ್ಲ.

## ಅಧ್ಯಾಯ - III

**27. ಚುನಾವಣಾ ವೆಚ್ಚಗಳ ಲೆಕ್ಕದ ವಿವರಗಳು.-** (1) ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಪ್ರತಿಯೊಂದು ಬಾಬಿನ ಸಂಬಂಧದಲ್ಲಿನ ದಿನನಿತ್ಯದ ವೆಚ್ಚವು ಸಾಮಾನ್ಯವಾಗಿ ಈ ಕೆಳಗಿನ ವಿವರಗಳನ್ನು ಒಳಗೊಂಡಂತೆ 64ನೇ ಪ್ರಕರಣದ ಮೇರೆಗೆ ನಮೂನೆ-11ಎ ನಲ್ಲಿ ಚುನಾವಣಾ ವೆಚ್ಚಗಳ ಲೆಕ್ಕವನ್ನು ನಿರ್ವಹಿಸತಕ್ಕದ್ದು, ಎಂದರೆ:-

(i) ವೆಚ್ಚ ಮಾಡಿದ ಮತ್ತು ಅಧಿಕೃತಗೊಳಿಸಿದ ದಿನಾಂಕ,
(ii) ವೆಚ್ಚದ ಸ್ವರೂಪ (ಉದಾಹರಣೆಗಾಗಿ, ಪ್ರಯಾಣ ಅಂಚೆ ಚೀಟಿ ಅಥವಾ ಮುದ್ರಣ ಮತ್ತು ಅಂಥದೇ ಖರ್ಚು)
(iii) ಈ ಕೆಳಗಿನ ವೆಚ್ಚವನ್ನು ವಿಂಗಡಿಸಲಾದ ಮೊತ್ತ, ಎಂದರೆ-
    (ಎ) ಸಂದಾಯ ಮಾಡಿದ ಮೊತ್ತ;
    (ಬಿ) ಬಾಕಿ ಇರುವ ಮೊತ್ತ; ಮತ್ತು
    (ಸಿ) ಸಂದಾಯ ಮಾಡಿದ ದಿನಾಂಕ;

(ಡಿ) ಯಾರಿಗೆ ಹಣ ಸಂದಾಯ ಮಾಡಲಾಗಿದೆಯೋ ಆತನ ಹೆಸರು ಮತ್ತು ವಿಳಾಸ;

(ಇ) ಮೊತ್ತವನ್ನು ಸಂದಾಯ ಮಾಡಿದ ಸಂದರ್ಭದಲ್ಲಿ ವೋಚರುಗಳ ಕ್ರಮಸಂಖ್ಯೆ;

(ಎಫ್) ಬಾಕಿ ಇರುವ ಮೊತ್ತದ ಸಂದರ್ಭದಲ್ಲಿ ಯಾವುದಾದರೂ ಇದ್ದರೆ ಬಿಲ್ಲುಗಳ ಕ್ರಮಸಂಖ್ಯೆ; ಮತ್ತು

(ಜಿ) ಬಾಕಿ ಇರುವ ಮೊತ್ತವನ್ನು ಪಾವತಿಸಬೇಕಾಗಿರುವ ವ್ಯಕ್ತಿಯ ಹೆಸರು ಮತ್ತು ವಿಳಾಸ.

(2) ವೋಚರುಗಳನ್ನು ಪಡೆಯಲು ಸಾಧ್ಯವಾಗದಂಥ ಅಂಚೆ ಚೀಟಿಗಳ ವೆಚ್ಚ, ರೈಲಿನಲ್ಲಿ ಮಾಡಿರುವ ಪ್ರಯಾಣ ಸ್ವರೂಪದಂತಹ ಸಂದರ್ಭವನ್ನು ಹೊರತುಪಡಿಸಿ ಪ್ರತಿಯೊಂದು ವೆಚ್ಚದ ಬಾಬಿಗಾಗಿ ವೋಚರನ್ನು ಪಡೆಯತಕ್ಕದ್ದು.

(3) ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನು ಚುನಾವಣಾ ವೆಚ್ಚಗಳ ಲೆಕ್ಕದ ಜೊತೆಗೆ ಎಲ್ಲಾ ವೋಚರುಗಳನ್ನು ದಾಖಲಿಸಿ ಸಂದಾಯ ಮಾಡಿದ ದಿನಾಂಕಕ್ಕೆ ಅನುಸಾರವಾಗಿ ಮತ್ತು ಕ್ರಮಸಂಖ್ಯೆ ನೀಡಿ ವ್ಯವಸ್ಥೆ ಮಾಡತಕ್ಕದ್ದು ಮತ್ತು (1)ನೇ ಉಪ-ನಿಯಮದ (iii) ನೇ ಖಂಡದ (ಇ) ಬಾಬಿನ ಅಡಿಯಲ್ಲಿ ಅಂಥ ಕ್ರಮಸಂಖ್ಯೆಗಳನ್ನು ಲೆಕ್ಕದಲ್ಲಿ ನಮೂದಿಸತಕ್ಕದ್ದು.

(4) ಉಪ-ನಿಯಮ (2)ರ ಅಡಿಯಲ್ಲಿ ವೆಚ್ಚದ ಬಾಬುಗಳ ವೋಚರುಗಳನ್ನು ಪಡೆದಿರುವುದಿರುವ ಸಂದರ್ಭದಲ್ಲಿ (1)ನೇ ಉಪ-ನಿಯಮದ (iii)ನೇ ಖಂಡದ (ಇ) ಬಾಬುವಿನಲ್ಲಿ ನಮೂದಿಸಿದ ವಿವರಗಳನ್ನು ನೀಡುವುದು ಅಗತ್ಯವಿರತಕ್ಕದ್ದಲ್ಲ.

(5) ಪ್ರತಿಯೊಬ್ಬ ಅಭ್ಯರ್ಥಿಯು, ರಿಟರ್ನಿಂಗ್ ಅಧಿಕಾರಿ ಮುಂದೆ ತನ್ನ ವೆಚ್ಚದ ವಿವರವನ್ನು ದಾಖಲಿಸುವಾಗ ನಮೂನೆ 11-ಬಿ ನಲ್ಲಿ ಘೋಷಣೆಯನ್ನು ಮಾಡತಕ್ಕದ್ದು ಮತ್ತು ರಿಟರ್ನಿಂಗ್ ಅಧಿಕಾರಿಯು ನಮೂನೆ 11-ಸಿ ನಲ್ಲಿ ಅದನ್ನು ಸ್ವೀಕೃತಿಯನ್ನು ನೀಡತಕ್ಕದ್ದು.

**28. ರಿಟರ್ನಿಂಗ್ ಅಧಿಕಾರಿಯಿಂದ ನೋಟೀಸು.-** ರಿಟರ್ನಿಂಗ್ ಅಧಿಕಾರಿಯು ಅಧಿನಿಯಮದ 65ನೇ ಪ್ರಕರಣದ ಮೇರೆಗೆ ಅಭ್ಯರ್ಥಿಯಿಂದ ಚುನಾವಣಾ ವೆಚ್ಚದ ಲೆಕ್ಕವನ್ನು ಸಲ್ಲಿಸಲಾದ ದಿನಾಂಕದಿಂದ ಎರಡು ದಿನಗಳೊಳಗಾಗಿ ಕಛೇರಿಯ ಸೂಚನಾ ಫಲಕದ ಮೇಲೆ ಈ ಕೆಳಗೆ ನಿರ್ದಿಷ್ಟಪಡಿಸಿದ ಸೂಚನೆಗಳನ್ನು ಅಂಟಿಸುವಂತೆ ಮಾಡತಕ್ಕದ್ದು, ಎಂದರೆ:-

(ಎ) ಲೆಕ್ಕವನ್ನು ಸಲ್ಲಿಸಿದ ದಿನಾಂಕ;

(ಬಿ) ಅಭ್ಯರ್ಥಿಯ ಹೆಸರು; ಮತ್ತು

(ಸಿ) ಅಂಥ ಲೆಕ್ಕವನ್ನು ಪರಿಶೀಲಿಸಬಹುದಾದ ಸಮಯ ಮತ್ತು ಸ್ಥಳ.

**29. ಚುನಾವಣಾ ವೆಚ್ಚದ ಲೆಕ್ಕದ ವಿವರಗಳನ್ನು ಸಲ್ಲಿಸಿದ ಬಗೆ, ರಿಟರ್ನಿಂಗ್ ಅಧಿಕಾರಿಯಿಂದ ವರದಿ ಮತ್ತು ಅದರ ಮೇಲೆ ರಾಜ್ಯ ಚುನಾವಣಾ ಆಯೋಗದ ತೀರ್ಮಾನ.-** (1) ಯಾವುದೇ ಚುನಾವಣೆಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕದ ವಿವರಗಳನ್ನು ಸಲ್ಲಿಸುವುದಕ್ಕಾಗಿ ಅಧಿನಿಯಮದ 65ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ನಂತರ ಅದಷ್ಟು ಬೇಗನೆ ರಿಟರ್ನಿಂಗ್ ಅಧಿಕಾರಿಯು ರಾಜ್ಯ ಚುನಾವಣಾ ಆಯೋಗಕ್ಕೆ ಈ ಮುಂದಿನ ವರದಿಯನ್ನು ಸಲ್ಲಿಸತಕ್ಕದ್ದು, ಎಂದರೆ:-

(ಎ) ಸ್ಪರ್ಧಿಸುತ್ತಿರುವ ಪ್ರತಿಯೊಬ್ಬ ಅಭ್ಯರ್ಥಿಯ ಹೆಸರು;

(ಬಿ) ಅಂಥ ಅಭ್ಯರ್ಥಿಯು ತನ್ನ ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಿದ್ದಾರೆಯೇ, ಹಾಗಿದ್ದರೆ, ಯಾವ ದಿನಾಂಕದಂದು ಅಂಥ ಲೆಕ್ಕವನ್ನು ಸಲ್ಲಿಸಿದ್ದಾರೆ; ಮತ್ತು

(ಸಿ) ಅಂಥ ಲೆಕ್ಕವನ್ನು ಅಧಿನಿಯಮ ಮತ್ತು ಈ ನಿಯಮಗಳ ಮೂಲಕ ಅಗತ್ಯಪಡಿಸಿದ ಸಮಯದೊಳಗೆ ಮತ್ತು ರೀತಿಯಲ್ಲಿ ಸಲ್ಲಿಸಲಾಗಿದೆಯೇ ಎಂಬುದರ ಬಗ್ಗೆ ರಿಟರ್ನಿಂಗ್ ಅಧಿಕಾರಿಯ ಅಭಿಪ್ರಾಯ.

(2) ರಿಟರ್ನಿಂಗ್ ಅಧಿಕಾರಿಯು ಅಭಿಪ್ರಾಯಪಟ್ಟಿರುವಂತೆ, ಯಾವುದೇ ಅಭ್ಯರ್ಥಿಯು ಚುನಾವಣಾ ವೆಚ್ಚಗಳ ಲೆಕ್ಕವನ್ನು ಅಧಿನಿಯಮ ಮತ್ತು ಈ ನಿಯಮಗಳ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ಸಲ್ಲಿಸಿರದಿದ್ದಲ್ಲಿ, ಅಭ್ಯರ್ಥಿಯ ಚುನಾವಣಾ ವೆಚ್ಚಗಳ ಲೆಕ್ಕ ಮತ್ತು ಅದರೊಂದಿಗೆ ವೋಚರುಗಳ ಸಹಿತವಾಗಿ ಸಲ್ಲಿಸಿರುವ ಬಗ್ಗೆ ಆತನು ರಾಜ್ಯ ಚುನಾವಣಾ ಆಯೋಗಕ್ಕೆ ಅಂಥ ಪ್ರತಿಯೊಂದು ವರದಿಯನ್ನು ಕಳುಹಿಸತಕ್ಕದ್ದು.

(3) ಉಪ-ನಿಯಮ (2)ರಲ್ಲಿ ಉಲ್ಲೇಖಿಸಿದ ವರದಿಯನ್ನು ಸಲ್ಲಿಸಿದ ತರುವಾಯ, ಕೂಡಲೇ ರಿಟರ್ನಿಂಗ್ ಅಧಿಕಾರಿಯು ಸೂಚನಾ ಫಲಕದಲ್ಲಿ ಅದನ್ನು ಅಂಟಿಸುವುದರ ಮೂಲಕ ಅದರ ಒಂದು ಪ್ರತಿಯನ್ನು ಪ್ರಕಟಿಸತಕ್ಕದ್ದು.

(4) ಉಪ-ನಿಯಮ (2)ರಲ್ಲಿ ಉಲ್ಲೇಖಿಸಿದ ವರದಿಯು ಸ್ವೀಕೃತವಾದ ನಂತರ ಆದಷ್ಟು ಬೇಗನೆ, ರಾಜ್ಯ ಚುನಾವಣಾ ಆಯೋಗವು ಅದನ್ನು ಪರಿಗಣಿಸತಕ್ಕದ್ದು ಮತ್ತು ಸ್ಪರ್ಧಿಸಿರುವ ಯಾರೇ ಅಭ್ಯರ್ಥಿಯು ಅಧಿನಿಯಮ ಮತ್ತು ಈ ನಿಯಮಗಳ ಮೂಲಕ ಅಗತ್ಯಪಡಿಸಿರುವ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲರಾಗಿದ್ದಾರೆಯೇ ಎಂಬುದನ್ನು ತೀರ್ಮಾನಿಸತಕ್ಕದ್ದು.

(5) ರಾಜ್ಯ ಚುನಾವಣಾ ಆಯೋಗವು ಸ್ಪರ್ಧಿಸಿರುವ ಅಭ್ಯರ್ಥಿಯು ಅಧಿನಿಯಮ ಮತ್ತು ಈ ನಿಯಮಗಳಲ್ಲಿ ಅಗತ್ಯಪಡಿಸಿದ ಸಮಯದೊಳಗೆ ಮತ್ತು ಅಂಥ ರೀತಿಯಲ್ಲಿ ಚುನಾವಣಾ ವೆಚ್ಚಗಳ ಲೆಕ್ಕವನ್ನು ಸಲ್ಲಿಸಲು ವಿಫಲರಾಗಿದ್ದಾರೆಂದು ತೀರ್ಮಾನಿಸಿದ್ದಲ್ಲಿ ಅಂಥ ವಿಫಲತೆಗಾಗಿ ಆ ಅಭ್ಯರ್ಥಿಗೆ ಅಧಿನಿಯಮದ 65ನೇ ಪ್ರಕರಣದ ಅಡಿಯಲ್ಲಿ ಅವರನ್ನು ಏಕೆ ಅನರ್ಹಗೊಳಿಸಬಾರದೆಂಬ ಬಗ್ಗೆ, ಲಿಖಿತದಲ್ಲಿ ನೋಟೀಸ್ ಮೂಲಕ ಕಾರಣವನ್ನು ಕೇಳತಕ್ಕದ್ದು.

(6) ಉಪ-ನಿಯಮ (5)ರ ಮೇರೆಗೆ ಕಾರಣ ಕೇಳಲು ಕರೆದಾಗ, ಚುನಾವಣೆಗೆ ಸ್ಪರ್ಧಿಸಿದ ಯಾರೇ ಅಭ್ಯರ್ಥಿಯು ಆ ವಿಷಯಕ್ಕೆ ಸಂಬಂಧಪಟ್ಟಂತೆ ಅಂಥ ನೋಟೀಸನ್ನು ಸ್ವೀಕರಿಸಿದ ಇಪ್ಪತ್ತು ದಿನಗಳೊಳಗಾಗಿ ತನ್ನ ಮನವಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಲಿಖಿತದಲ್ಲಿ ಸಲ್ಲಿಸಬಹುದು ಹಾಗೂ ಅಂಥ ಲೆಕ್ಕವನ್ನು ಈಗಾಗಲೇ ಒದಗಿಸದಿದ್ದಲ್ಲಿ, ತನ್ನ ಚುನಾವಣಾ ವೆಚ್ಚಗಳ ಸಂಪೂರ್ಣ ಲೆಕ್ಕದೊಂದಿಗೆ ತನ್ನ ಮನವಿಯ ಪ್ರತಿಯನ್ನು ಅದೇ ಸಮಯದಲ್ಲಿ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸತಕ್ಕದ್ದು.

(7) ರಿಟರ್ನಿಂಗ್ ಅಧಿಕಾರಿಯು ಅಂಥ ಮನವಿಯ ಪ್ರತಿ ಮತ್ತು ಲೆಕ್ಕವನ್ನು (ಯಾವುದಾದರೂ ಇದ್ದರೆ) ಚುನಾವಣಾ ವೆಚ್ಚಗಳ ಲೆಕ್ಕವನ್ನು ಸ್ವೀಕರಿಸಿದ ಐದು ದಿನಗಳ ಒಳಗೆ ಈ ಬಗ್ಗೆ ತಾನು ಅಂಥ ಯುಕ್ತ ಅಭಿಪ್ರಾಯದೊಂದಿಗೆ ಅದರ ಬಗ್ಗೆ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು.

**30. ಚುನಾವಣಾ ವೆಚ್ಚಗಳ ಗರಿಷ್ಠ ಮಿತಿ.-** ಚುನಾವಣೆಯ ಸಂಬಂಧದಲ್ಲಿ ಪ್ರತಿಯೊಬ್ಬ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನು ಮಾಡಬಹುದಾದ ಖರ್ಚು ವೆಚ್ಚದ ಗರಿಷ್ಠಮಿತಿಯು ಐದು ಲಕ್ಷ ರೂಪಾಯಿಗಳನ್ನು ಮೀರತಕ್ಕದ್ದಲ್ಲ.

**31. ಮತದಾನಕ್ಕೆ ಮುಂಚೆ ಅಭ್ಯರ್ಥಿಯ ಮರಣ.-** ಅಭ್ಯರ್ಥಿವು ಮಾನ್ಯತೆ ಪಡೆದ ರಾಜಕೀಯ ಪಕ್ಷದ ಅಭ್ಯರ್ಥಿಯಾಗಿದ್ದರೆ,-

(ಎ) ನಾಮಪತ್ರ ಸಲ್ಲಿಸಲು ಗೊತ್ತುಪಡಿಸಿರುವ ಕೊನೆಯ ದಿನಾಂಕದಂದು ಪೂರ್ವಾಹ್ನ 11:00 ಗಂಟೆಯ ತರುವಾಯ ಯಾವುದೇ ಸಮಯದಲ್ಲಿ ಮರಣ ಹೊಂದಿದ್ದರೆ ಮತ್ತು 15ನೇ ನಿಯಮದ ಮೇರೆಗೆ ಆತನ ನಾಮಪತ್ರವನ್ನು ಪರಿಶೀಲಿಸಿದಾಗ ಅದು ಸಿಂಧುವೆಂದು ಕಂಡುಬಂದಲ್ಲಿ;

(ಬಿ) ಯಾರ ನಾಮಪತ್ರವು, 15ನೇ ನಿಯಮದ ಮೇರೆಗೆ ಪರಿಶೀಲಿಸಿದಾಗ ಸಿಂಧುವೆಂದು ಕಂಡುಬಂದಿದ್ದು, ಆತನು 16ನೇ ನಿಯಮದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳದೆ ಮೃತನಾದಲ್ಲಿ, ಮತ್ತು 22ನೇ ನಿಯಮದ ಮೇರೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವುದಕ್ಕೆ ಮುಂಚೆ ಯಾವುದೇ ಸಮಯದಲ್ಲಿ ಮರಣದ ವರದಿಯನ್ನು ಸ್ವೀಕರಿಸಿದ್ದರೆ; ಅಥವಾ

(ಸಿ) ಸ್ಪರ್ಧಿಸುವ ಅಭ್ಯರ್ಥಿಯು ಮರಣ ಹೊಂದಿದರೆ, ಮತದಾನ ಪ್ರಾರಂಭವಾಗುವುದಕ್ಕೆ ಮುಂಚೆ ಆತನ ಮರಣದ ವರದಿಯನ್ನು ಸ್ವೀಕರಿಸಿದ್ದರೆ, ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಯ ಮರಣದ ಸಂಗತಿಯ ಬಗ್ಗೆ ಮನವರಿಕೆ ಮಾಡಿಕೊಂಡ ಮೇಲೆ ಆದೇಶಾನುಸಾರ ಆ ಮತದಾನವನ್ನು ರದ್ದು ಮಾಡತಕ್ಕದ್ದು ಮತ್ತು ರಾಜ್ಯ ಚುನಾವಾಣಾ ಆಯೋಗಕ್ಕೆ ಆ ವಿಷಯದ ಬಗ್ಗೆ ವರದಿ ಮಾಡತಕ್ಕದ್ದು ಮತ್ತು ಚುನಾವಣೆಗೆ ಸಂಬಂಧಿಸಿದ ಎಲ್ಲಾ ವ್ಯವಹರಣೆಗಳನ್ನು ಎಲ್ಲ ವಿಷಯಗಳ ಸಂಬಂಧದಲ್ಲೂ ಹೊಸ ಚುನಾವಣೆಯಾಗಿದ್ದರೆ ಹೇಗೋ ಹಾಗೆ ಹೊಸದಾಗಿ ಪ್ರಾರಂಭಿಸತಕ್ಕದ್ದು:

ಪರಂತು, ಮರಣ ಹೊಂದಿದ ಅಭ್ಯರ್ಥಿಯ ನಾಮಪತ್ರವೂ ಸೇರಿದಂತೆ ಎಲ್ಲಾ ನಾಮಪತ್ರಗಳನ್ನು ಪರಿಶೀಲಿಸಿದ ತರುವಾಯ ಹೊರತು, (ಎ) ಖಂಡದಲ್ಲಿ ಉಲ್ಲೇಖಿಸಲಾದ ಸಂದರ್ಭದಲ್ಲಿ ಮತದಾನ ರದ್ದುಪಡಿಸುವುದಕ್ಕಾಗಿ ಯಾವುದೇ ಆದೇಶ ಹೊರಡಿಸತಕ್ಕದ್ದಲ್ಲ:

ಮತ್ತು ಪರಂತು, ಮತದಾನವನ್ನು ರದ್ದುಪಡಿಸಿದ ಸಮಯದಲ್ಲಿ ಒಬ್ಬ ವ್ಯಕ್ತಿಯು ಸ್ಪರ್ಧಿಸುವ ಅಭ್ಯರ್ಥಿಯಾಗಿದ್ದ ಸಂದರ್ಭದಲ್ಲಿ ಮತ್ತೊಂದು ನಾಮಪತ್ರ ಸಲ್ಲಿಸುವ ಅಗತ್ಯವಿರತಕ್ಕದ್ದಲ್ಲ;

ಮತ್ತೂ ಪರಂತು, ಮತದಾನ ರದ್ದಾರಾಗುವುದಕ್ಕೆ ಮುಂಚೆ 16ನೇ ನಿಯಮದ (1)ನೇ ಉಪ-ನಿಯಮದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಕೊಟ್ಟಿರುವ ಯಾರೇ ವ್ಯಕ್ತಿಯು ಅಂಥ ರದ್ದತಿಯ ತರುವಾಯ ಚುನಾವಣೆಗಾಗಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲು ಅನರ್ಹನಾಗಿರತಕ್ಕದ್ದಲ್ಲ.

**32. ಸ್ಪರ್ಧೆ ಇರುವ ಮತ್ತು ಸ್ಪರ್ಧೆ ಇಲ್ಲದ ಚುನಾವಣೆಯಲ್ಲಿ ಪ್ರಕ್ರಿಯೆ.-** (1) ಸ್ಪರ್ಧಿಸಿದ ಅಭ್ಯರ್ಥಿಗಳ ಸಂಖ್ಯೆಯು ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗಿಂತ ಹೆಚ್ಚಾಗಿದ್ದರೆ ಮತದಾನವು ನಡೆಯತಕ್ಕದ್ದು.

(2) ಅಂಥ ಅಭ್ಯರ್ಥಿಗಳ ಸಂಖ್ಯೆಯು ಭರ್ತಿಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮನಾಗಿದ್ದರೆ, ರಿಟರ್ನಿಂಗ್ ಅಧಿಕಾರಿಯು ಕೂಡಲೇ ಅಂಥ ಎಲ್ಲಾ ಅಭ್ಯರ್ಥಿಗಳು ಆ ಸ್ಥಾನಗಳನ್ನು ಭರ್ತಿ ಮಾಡಲು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು 12 ಅಥವಾ 12ಎ ನಮೂನೆಯಲ್ಲಿ ಸೂಕ್ತವೆನಿಸಬಹುದಾದಂತೆ ಘೋಷಿಸತಕ್ಕದ್ದು.

(3) ಅಂಥ ಅಭ್ಯರ್ಥಿಗಳ ಸಂಖ್ಯೆಯು ಆ ವಾರ್ಡಿನಲ್ಲಿ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗಿಂತ ಕಡಿಮೆಯಾಗಿದ್ದರೆ, ರಿಟರ್ನಿಂಗ್ ಅಧಿಕಾರಿಯು, ಕೂಡಲೇ ಅಂಥ ಎಲ್ಲಾ ಅಭ್ಯರ್ಥಿಗಳು ಕ್ರಮಬದ್ಧವಾಗಿ ಚುನಾಯಿತರಾಗಿರುವರೆಂದು ನಮೂನೆ-12 ಅಥವಾ ನಮೂನೆ-12ಎ ರಲ್ಲಿ ಸೂಕ್ತವೆನಿಸಬಹುದಾದಂತೆ ಘೋಷಿಸತಕ್ಕದ್ದು ಮತ್ತು ಆಯುಕ್ತರು ರಾಜ್ಯ ಚುನಾವಣಾ ಆಯೋಗದ ಪೂರ್ವಾನುಮೋದನೆ ಪಡೆದು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ವಾರ್ಡಿನ

ಉಳಿದ ಸ್ಥಾನ ಅಥವಾ ಸ್ಥಾನಗಳನ್ನು ಭರ್ತಿ ಮಾಡಲು ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಚುನಾಯಿಸುವಂತೆ ಕೋರತಕ್ಕದ್ದು.

**33. ತುರ್ತು ಪರಿಸ್ಥಿತಿಯಲ್ಲಿ ಮತದಾನದ ಮುಂದೂಡುವಿಕೆ.-** (1) ಯಾವುದೇ ದೊಂಬಿ ಅಥವಾ ಬಹಿರಂಗ ಹಿಂಸಾಚಾರದಿಂದ ಚುನಾವಣೆಯಲ್ಲಿ ಯಾವುದೇ ಮತದಾನ ಕೇಂದ್ರದಲ್ಲಿನ ವ್ಯವಹರಣೆಗಳಿಗೆ ಅಡಚಣೆ ಅಥವಾ ಅಡ್ಡಿಯುಂಟಾದರೆ ಅಥವಾ ಚುನಾವಣೆಯಲ್ಲಿ ಯಾವುದೇ ಪ್ರಕೃತಿ ವಿಕೋಪ ಅಥವಾ ಇತರ ಯಾವುದೇ ಸಾಕಷ್ಟು ಕಾರಣದಿಂದಾಗಿ ಯಾವುದೇ ಮತದಾನ ಕೇಂದ್ರದಲ್ಲಿ ಮತದಾನವನ್ನು ನಡೆಸಲು ಸಾಧ್ಯವಾಗದಿದ್ದರೆ, ಅಂಥ ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿ ಅಥವಾ ರಿಟರ್ನಿಂಗ್ ಅಧಿಕಾರಿಯು ತರುವಾಯ ಅಧಿಸೂಚಿಸಬೇಕಾದ ದಿನಾಂಕಕ್ಕೆ ಮತದಾನದ ಮುಂದೂಡಿಕೆಯನ್ನು ಪ್ರಕಟಿಸತಕ್ಕದ್ದು ಮತ್ತು ಮತದಾನವನ್ನು ಪ್ರಿಸೈಡಿಂಗ್ ಅಧಿಕಾರಿಯು ಮುಂದೂಡಿದಲ್ಲಿ ಅವನು ಕೂಡಲೇ ರಿಟರ್ನಿಂಗ್ ಅಧಿಕಾರಿಗೆ ತಿಳಿಸತಕ್ಕದ್ದು.

(2) ಉಪ-ನಿಯಮ (1)ರ ಅಡಿಯಲ್ಲಿ, ಮತದಾನವನ್ನು ಮುಂದೂಡಿದಾಗಲೆಲ್ಲಾ ರಿಟರ್ನಿಂಗ್ ಅಧಿಕಾರಿಯು, ಪರಿಸ್ಥಿತಿಗಳ ಬಗ್ಗೆ ಕೂಡಲೇ ಆಯುಕ್ತರಿಗೆ ಮತ್ತು ರಾಜ್ಯ ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು ಮತ್ತು ಆದಷ್ಟು ಬೇಗನೆ, ರಾಜ್ಯ ಚುನಾವಣಾ ಆಯೋಗದ ಪೂರ್ವಾನುಮೋದನೆ ಪಡೆದು ನಡೆಸತಕ್ಕದ್ದು. ಮತದಾನ ಕೇಂದ್ರ ಮತ್ತು ಮತದಾನವನ್ನು ಪುನಃ ಗೊತ್ತುಪಡಿಸಿದ ದಿನ ಹಾಗೂ ಯಾವ ವೇಳೆಯಲ್ಲಿ ಅದನ್ನು ನಡೆಸತಕ್ಕದ್ದೂ, ಆ ವೇಳೆಗಳನ್ನು ನೋಟೀಸ್ ಮೂಲಕ ಪ್ರಕಟಿಸತಕ್ಕದ್ದು ಮತ್ತು ನಿಗದಿಪಡಿಸತಕ್ಕದ್ದು ಮತ್ತು ಅಂಥ ಮುಂದೂಡಿದ ಮತದಾನವು ಪೂರ್ಣಗೊಳ್ಳುವವರೆಗೆ, ಅಂಥ ವಾರ್ಡಿನ ಚುನಾವಣೆಯಲ್ಲಿ ನೀಡಿದ ಮತಗಳನ್ನು ಎಣಿಕೆ ಮಾಡತಕ್ಕದ್ದಲ್ಲ.

(3) ಈ ಹಿಂದೆ ಹೇಳಿದಂತೆ. ಪ್ರತಿಯೊಂದು ಅಂಥ ಸಂದರ್ಭದಲ್ಲಿ, ರಿಟರ್ನಿಂಗ್ ಅಧಿಕಾರಿಯು (2)ನೇ ಉಪ-ನಿಯಮದ ಅಡಿಯಲ್ಲಿ ನಿಗದಿಪಡಿಸಿದ ಮತದಾನದ ದಿನಾಂಕ, ಸ್ಥಳ ಮತ್ತು ವೇಳೆಯನ್ನು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಅಧಿಸೂಚಿಸತಕ್ಕದ್ದು.

**34. ಮತದಾನವನ್ನು ಮುಂದೂಡುವ ಪ್ರಕ್ರಿಯೆ.-** (1) ಯಾವುದೇ ಮತದಾನ ಕೇಂದ್ರದಲ್ಲಿ 33ನೇ ನಿಯಮದ ಮೇರೆಗೆ ಮುಂದೂಡಿದ್ದಲ್ಲಿ, 62, 63, 65 ಮತ್ತು 66ನೇ ನಿಯಮಗಳ ಉಪಬಂಧಗಳು ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ 10ನೇ ನಿಯಮದ ಅಡಿಯಲ್ಲಿ ಆ ಬಗ್ಗೆ ಗೊತ್ತುಪಡಿಸಿದ ವೇಳೆಯಲ್ಲಿ ಮತದಾನವು ಮುಕ್ತಾಯಗೊಂಡಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(2) ಮುಂದೂಡಿದ ಮತದಾನವನ್ನು 33ನೇ ನಿಯಮದ (2)ನೇ ಉಪ-ನಿಯಮದ ಅಡಿಯಲ್ಲಿ ಶಿಫಾರಸ್ಸು ಮಾಡಿದಾಗ, ಹಾಗೆ ಮುಂದೂಡಿದ ಮತದಾನದಲ್ಲಿ ಈಗಾಗಲೇ ಮತ ಚಲಾಯಿಸಿರುವ ಮತದಾರರನ್ನು ಪುನಃ ಮತ ಚಲಾಯಿಸಲು ಅನುಮತಿಸತಕ್ಕದ್ದಲ್ಲ.

(3) ರಿಟರ್ನಿಂಗ್ ಅಧಿಕಾರಿಯು, ಅಂಥ ಮುಂದೂಡಿದ ಮತದಾನವು ನಡೆದಂಥ ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಗೆ ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯನ್ನು ಒಳಗೊಂಡಿರುವ ಮೊಹರು ಮಾಡಿದ ಪ್ಯಾಕೆಟ್ ಸಹಿತ ಮತ್ತು ಒಂದು ಹೊಸ ಬ್ಯಾಲೆಟ್ ಬಾಕ್ಸನ್ನು ಒದಗಿಸತಕ್ಕದ್ದು.

(4) ಪ್ರಿಸೈಡಿಂಗ್ ಅಧಿಕಾರಿಯು, ಹಾಜರಿರುವ ಮತದಾನ ಏಜೆಂಟರುಗಳ ಸಮ್ಮುಖದಲ್ಲಿ ಮೊಹರು ಮಾಡಿದ ಪ್ಯಾಕೆಟನ್ನು ತೆರೆಯತಕ್ಕದ್ದು ಮತ್ತು ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯನ್ನು ಮುಂದೂಡಿದ ಮತದಾನದಲ್ಲಿ ಯಾರಿಗೆ ಬ್ಯಾಲೆಟ್ ಪೇಪರುಗಳನ್ನು ನೀಡಲಾಗಿದೆಯೋ ಆ ಮತದಾರರ ಹೆಸರುಗಳನ್ನು ಗುರುತು ಮಾಡಿಕೊಳ್ಳುವುದಕ್ಕಾಗಿ

ಉಪಯೋಗಿಸತಕ್ಕದ್ದು. ಆದಾಗ್ಯೂ, ಅದರ ಕ್ರಮ ಸಂಖ್ಯೆಯನ್ನು ಅದರಲ್ಲಿ ದಾಖಲು ಮಾಡಿಕೊಳ್ಳಬಾರದು.

(5) 38, 39, 40, 41, 42, 43 ಮತ್ತು 44ರವರೆಗೆ ಹಾಗೂ 53, 54, 55, 56, 57, 58. 59. 60, 61, 62, 63, 64, 65 ಮತ್ತು 66 ರವರೆಗಿನ ನಿಯಮಗಳ ಉಪಬಂಧಗಳು, ಮುಂದೂಡಿದ ಮತದಾನವನ್ನು ನಡೆಸುವ ಸಂಬಂಧದಲ್ಲಿ ಅದನ್ನು ಹಾಗೆ ಮುಂದೂಡುವ ಮುಂಚೆ ಮತದಾನದ ಸಂಬಂಧದಲ್ಲಿ ಅವು ಹೇಗೆ ಅನ್ವಯವಾಗುತ್ತಿದ್ದವೋ ಹಾಗೆ ಅನ್ವಯವಾಗತಕ್ಕದ್ದು.

**35. ಮತದಾನದ ಮುಂದೂಡುವಿಕೆ ಅಥವಾ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡಿರುವ ಆಧಾರದ ಮೇಲೆ ಚುನಾವಣೆಯನ್ನು ರದ್ದುಪಡಿಸುವುದು.-** (1) ಯಾವುದೇ ಚುನಾಣೆಯಲ್ಲಿ,-

(ಎ) ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ (ಇದರಲ್ಲಿ ಇನ್ನು ಮುಂದೆ ಈ ನಿಯಮದಲ್ಲಿ ಒಂದು ಸ್ಥಳವೆಂದು ಉಲ್ಲೇಖಿಸಲಾಗಿದೆ) ಆ ಮತದಾನ ಕೇಂದ್ರದಲ್ಲಿ ಅಥವಾ ಸ್ಥಳದಲ್ಲಿ ಮತದಾನದ ಫಲಿತಾಂಶವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲದೇ ಇರುವಂಥ ರೀತಿಯಲ್ಲಿ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡರೆ; ಅಥವಾ

(ಬಿ) ಮತಗಳನ್ನು ಎಣಿಕೆ ಮಾಡುವುದಕ್ಕಾಗಿ ಯಾವುದೇ ಸ್ಥಳದಲ್ಲಿ, ಆ ಸ್ಥಳದಲ್ಲಿ ಎಣಿಕೆ ಫಲಿತಾಂಶವನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲದೆ ಇರುವಂಥ ರೀತಿಯಲ್ಲಿ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡರೆ,

- ರಿಟರ್ನಿಂಗ್ ಅಧಿಕಾರಿಯು ಕೂಡಲೇ ರಾಜ್ಯ ಚುನಾವಣಾ ಆಯೋಗ ಮತ್ತು ಆಯುಕ್ತರಿಗೆ ಆ ವಿಷಯವನ್ನು ವರದಿ ಮಾಡತಕ್ಕದ್ದು.

(2) ರಾಜ್ಯ ಚುನಾವಣಾ ಆಯೋಗವು (1)ನೇ ಉಪ-ನಿಯಮದ ಅಡಿಯಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ವರದಿ ಸ್ವೀಕರಿಸಿದ ಮೇಲೆ ಮತ್ತು ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ, ಯಾವುದಾದರೂ ಒಂದು ಸನ್ನಿವೇಶದಲ್ಲಿ,-

(ಎ) ಆ ಮತದಾನ ಕೇಂದ್ರದಲ್ಲಿ ಅಥವಾ ಸ್ಥಳದಲ್ಲಿ ನಡೆದ ಮತದಾನವು ಸಿಂಧುವಲ್ಲವೆಂದು ಘೋಷಿಸತಕ್ಕದ್ದು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಹೊಸದಾಗಿ ಮತದಾನವನ್ನು ನಡೆಸುವುದಕ್ಕಾಗಿ ಗೊತ್ತುಪಡಿಸಿದ ದಿನ ಮತ್ತು ವೇಳೆಯನ್ನು ನಿಗದಿಪಡಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಹಾಗೆ ಗೊತ್ತುಪಡಿಸಿದ ದಿನಾಂಕ ಮತ್ತು ನಿಗದಿಪಡಿಸಿದ ವೇಳೆಯನ್ನು ಅಧಿಸೂಚಿಸತಕ್ಕದ್ದು;

(ಬಿ) ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡಿರುವಲ್ಲಿ, ಹೆಚ್ಚಿನ ಸಂಖ್ಯೆಯ ಮತದಾನ ಕೇಂದ್ರಗಳು ಅಥವಾ ಸ್ಥಳಗಳು ಸೇರಿದೆಯೆಂದು, ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದೆಂದು ಅಥವಾ ಮತಗಟ್ಟೆಯನ್ನು ವಶಪಡಿಸಿಕೊಳ್ಳುವಿಕೆಯು ಚುನಾವಣಾ ಫಲಿತಾಂಶಕ್ಕೆ ಬಾಧಕವಾಗಬಹುದಾದ ರೀತಿಯಲ್ಲಿ ಮತಗಳ ಎಣಿಕೆಯು ಬಾಧಕವಾಗುತ್ತದೆಯೆಂದು ಅಭಿಪ್ರಾಯಪಟ್ಟರೆ ಆ ವಾರ್ಡಿನ ಚುನಾವಣೆಯನ್ನು ರದ್ದುಪಡಿಸತಕ್ಕದ್ದು.

**ವಿವರಣೆ:** ಈ ನಿಯಮದ ಉದ್ದೇಶಕ್ಕಾಗಿ 'ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದು' ಎಂಬುದು ಇತರ ವಿಷಯಗಳೊಂದಿಗೆ ಈ ಮುಂದಿನ ಎಲ್ಲಾ ಅಥವಾ ಯಾವುದೇ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ, ಎಂದರೆ:-

(i) ಯಾರೇ ವ್ಯಕ್ತಿಯು ಮತದಾನ ಕೇಂದ್ರವನ್ನು ಅಥವಾ ಮತದಾನಕ್ಕಾಗಿ ನಿಗಧಿಪಡಿಸಿರುವ ಸ್ಥಳವನ್ನು ಬಲಾತ್ಕಾರವಾಗಿ ಹಿಡಿದಿಟ್ಟುಕೊಳ್ಳುವುದು, ಮತದಾನ ಅಧಿಕಾರಿಗಳಿಗೆ ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಬಲವಂತವಾಗಿ ವಶಕ್ಕೆ ಒಪ್ಪಿಸುವಂತೆ ಮಾಡುವುದು ಮತ್ತು ಚುನಾವಣೆಗಳು ಶಾಂತಿಯುತವಾಗಿ ನಡೆಯುವುದಕ್ಕೆ ಬಾಧಕವನ್ನುಂಟು ಮಾಡುವಂಥ ಇತರೆ ಯಾವುದೇ ಕೃತ್ಯಗಳನ್ನು ಮಾಡುವುದು;

(ii) ಯಾರೇ ವ್ಯಕ್ತಿಯು ಒಂದು ಮತದಾನ ಕೇಂದ್ರ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳವನ್ನು ಬಲವಂತವಾಗಿ ವಶಕ್ಕೆ ತೆಗೆದುಕೊಳ್ಳುವುದು ಮತ್ತು ಅವನ ಅಥವಾ ಅವರ ಬೆಂಬಲಿಗರು ಮಾತ್ರ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅವಕಾಶ ಮಾಡಿಕೊಟ್ಟು, ಮತ್ತು ಇತರರು ಮತ ಚಲಾಯಿಸದಂತೆ ತಡೆಯುವುದು;

(iii) ಯಾರೇ ಮತದಾರನಿಗೆ ಬೆದರಿಕೆ ಹಾಕುವುದು ಮತ್ತು ಅವನು ತನ್ನ ಮತ ಚಲಾಯಿಸಲು ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕೆ ಗೊತ್ತುಪಡಿಸಿರುವ ಸ್ಥಳಕ್ಕೆ ಹೋಗದಂತೆ ತಡೆಯುವುದು;

(iv) ಯಾರೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆ ಮಾಡುವ ಸ್ಥಳವನ್ನು ಬಲಾತ್ಕಾರವಾಗಿ ಹಿಡಿದಿಟ್ಟುಕೊಳ್ಳುವುದು, ಎಣಿಕೆ ಮಾಡುವ ಅಧಿಕಾರಿಗಳಿಗೆ ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಬಲವಂತವಾಗಿ ಒಪ್ಪಿಸುವಂತೆ ಮಾಡುವುದು ಮತ್ತು ಮತಗಳನ್ನು ಶಾಂತಿಯುತವಾಗಿ ಎಣಿಸುವ ಕಾರ್ಯಕ್ಕೆ ಬಾಧಕವನ್ನುಂಟು ಮಾಡುವಂಥ ಯಾವುದೇ ಕೃತ್ಯವನ್ನು ಮಾಡುವುದು;

(v) ಸರ್ಕಾರಿ ಸೇವೆಯಲ್ಲಿರುವ ಯಾರೇ ವ್ಯಕ್ತಿಯು ಮೇಲೆ ಹೇಳಲಾದ ಎಲ್ಲಾ ಅಥವಾ ಯಾವುದೇ ಚಟುವಟಿಕೆಗಳನ್ನು ಮಾಡುವುದು ಅಥವಾ ಒಬ್ಬ ಅಭ್ಯರ್ಥಿಯ ಚುನಾವಣೆಯ ಸಂಭಾವ್ಯತೆಯ ಮುಂದುವರಿಕೆಯಲ್ಲಿ ಅಂಥ ಯಾವುದೇ ಚಟುವಟಿಕೆಗೆ ಸಹಾಯ ಮಾಡುವುದು ಅಥವಾ ಪರೋಕ್ಷ ಸಮ್ಮತಿ ನೀಡುವುದು.

**36. ಮತಪೆಟ್ಟಿಗೆಗಳ ನಾಶ ಮುಂತಾದವುಗಳ ಸಂದರ್ಭದಲ್ಲಿ ಹೊಸದಾಗಿ ಮತದಾನ.-** (1) ಯಾವುದೇ ಚುನಾವಣೆಯಲ್ಲಿ,-

(ಎ) ಮತಗಟ್ಟೆಯಲ್ಲಿ ಉಪಯೋಗಿಸಿದ ಯಾವುದೇ ಮತಪೆಟ್ಟಿಗೆಯನ್ನು ಕಾನೂನು ಬಾಹಿರವಾಗಿ ಪ್ರಿಸೈಡಿಂಗ್ ಅಧಿಕಾರಿ ಅಥವಾ ರಿಟರ್ನಿಂಗ್ ಅಧಿಕಾರಿ ಅಭಿರಕ್ಷೆಯಿಂದ ತೆಗೆದುಕೊಂಡು ಹೋದರೆ ಅಥವಾ ಆ ಮತಗಟ್ಟೆಯ ಅಥವಾ ಆ ವಾರ್ಡಿನ ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲಾಗದಷ್ಟರ ಮಟ್ಟಿಗೆ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಗೊಂಡರೆ ಅಥವಾ ಕಳೆದು ಹೋದರೆ ಅಥವಾ ಹಾನಿಗೊಂಡರೆ ಅಥವಾ ಹಾಳು ಮಾಡಿದರೆ; ಅಥವಾ

(ಬಿ) ಮತದಾನ ಕೇಂದ್ರದಲ್ಲಿ ಮತದಾನವು ನಿರರ್ಥಕಗೊಳಿಸುವ ಸಂಭವವಿರುವಂಥ ಪ್ರಕ್ರಿಯೆಯಲ್ಲಿನ ಯಾವುದೇ ಅಂಥ ತಪ್ಪು ಅಥವಾ ಅಕ್ರಮ ದೋಷ ಮಾಡಿದ್ದರೆ;

ಬಳಿಕ, ರಿಟರ್ನಿಂಗ್ ಅಧಿಕಾರಿಯು ಆ ವಿಷಯವನ್ನು ಕೂಡಲೇ ರಾಜ್ಯ ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು.

(2) ಆ ನಂತರ, ರಾಜ್ಯ ಚುನಾವಣಾ ಆಯೋಗವು, ಎಲ್ಲಾ ಮುಖ್ಯ ಸನ್ನಿವೇಶಗಳನ್ನು ಪರಿಗಣನೆಗೆ ತೆಗೆದುಕೊಂಡ ತರುವಾಯ, ಯಾವುದಾದರೂ ಒಂದು ಸನ್ನಿವೇಶದಲ್ಲಿ,-

(ಎ) ಆ ಮತದಾನ ಕೇಂದ್ರದಲ್ಲಿನ ಮತದಾನವು ಶೂನ್ಯವೆಂದು ಘೋಷಿಸತಕ್ಕದ್ದು, ಆ ಮತದಾನ ಕೇಂದ್ರದಲ್ಲಿ ಹೊಸದಾಗಿ ಮತದಾನವನ್ನು ನಡೆಸುವುದಕ್ಕಾಗಿ ದಿನವನ್ನು ಗೊತ್ತುಪಡಿಸತಕ್ಕದ್ದು ಮತ್ತು ವೇಳೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಹಾಗೇ ಗೊತ್ತುಪಡಿಸಿದ ದಿನವನ್ನು, ಹಾಗೇ ನಿಗದಿಪಡಿಸಿದ ವೇಳೆಯನ್ನು ನೋಟೀಸ್ ಬೋರ್ಡಿನ ಮೇಲೆ ಅಧಿಸೂಚಿಸತಕ್ಕದ್ದು; ಅಥವಾ

(ಬಿ) ಆ ಮತದಾನ ಕೇಂದ್ರದಲ್ಲಿನ ಹೊಸ ಮತದಾನದ ಫಲಿತಾಂಶವು ಆ ವಾರ್ಡಿನ ಚುನಾವಣೆಯ ಫಲಿತಾಂಶಗಳಿಗೆ ಯಾವುದೇ ರೀತಿಯಲ್ಲಿ ಬಾಧಕವಾಗುವುದಿಲ್ಲವೆಂದು ಅಥವಾ ಪ್ರಕ್ರಿಯೆಯಲ್ಲಿನ ತಪ್ಪು ಅಥವಾ ಕ್ರಮದೋಷವು ಮುಖ್ಯವಾದುದಲ್ಲವೆಂದು ಮನವರಿಕೆಯಾದರೆ, ಚುನಾವಣೆಯನ್ನು ಮುಂದುವರಿಸಲು ಮತ್ತು ಪೂರ್ಣಗೊಳಿಸುವುದಕ್ಕಾಗಿ ತಾನು ಸರಿಯೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ರಿಟರ್ನಿಂಗ್ ಅಧಿಕಾರಿಗೆ ನೀಡತಕ್ಕದ್ದು.

(3) ಈ ನಿಯಮಗಳು, ಮೂಲ ಮತದಾನಕ್ಕೆ ಅವು ಅನ್ವಯವಾಗುವಂತೆ, (2)ನೇ ಉಪ-ನಿಯಮದ ಮೇರೆಗೆ ಹೊಸದಾಗಿ ನಡೆಸುವ ಪ್ರತಿಯೊಂದು ಮತದಾನಕ್ಕೆ ಅನ್ವಯವಾಗತಕ್ಕದ್ದು.

**37. ಮತದಾನ ಮಾಡುವ ವಿಧಾನ.-** ಮತದಾನ ನಡೆಯುವ ಪ್ರತಿಯೊಂದು ಚುನಾವಣೆಯಲ್ಲಿ ಮತಪತ್ರದ ಮೂಲಕ ಮತ ಚಲಾಯಿಸತಕ್ಕದ್ದು ಮತ್ತು ಚುನಾವಣೆಯಲ್ಲಿ ಮತ ಚಲಾಯಿಸುವ ಎಲ್ಲ ಮತದಾರರು, ಮತದಾನ ಕೇಂದ್ರದಲ್ಲಿ ಹಾಗೆ ಮಾಡಲು ಖುದ್ದಾಗಿ ಮತ ಚಲಾಯಿಸತಕ್ಕದ್ದು ಹಾಗೂ ಪ್ರಾಕ್ಸಿ ಮತದಾರನ ಮೂಲಕ ಯಾವುದೇ ಮತವನ್ನು ಸ್ವೀಕರಿಸತಕ್ಕದ್ದಲ್ಲ.

**38. ಮತಪತ್ರದ ನಮೂನೆ.-** (1) ಪ್ರತಿಯೊಂದು ಮತಪತ್ರವು, ಅದಕ್ಕೆ ಲಗತ್ತಿಸಿದ ಪಕ್ಕ ಪ್ರತಿಯನ್ನು ಹೊಂದಿರತಕ್ಕದ್ದು ಮತ್ತು ಸದರಿ ಮತಪತ್ರ ಹಾಗೂ ಪಕ್ಕ ಪ್ರತಿಯ ನಮೂನೆ ಮತ್ತು ಅದರಲ್ಲಿನ ವಿವರಗಳು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಭಾಷೆ ಅಥವಾ ಭಾಷೆಗಳಲ್ಲಿರತಕ್ಕದ್ದು.

(2) ಅಭ್ಯರ್ಥಿಗಳ ಹೆಸರುಗಳನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಅವು ಇರುವಂತಹುದೇ ಕ್ರಮದಲ್ಲಿ ಮತಪತ್ರದಲ್ಲಿ ವ್ಯವಸ್ಥೆಗೊಳಿಸತಕ್ಕದ್ದು.

(3) ಇಬ್ಬರು ಅಥವಾ ಹೆಚ್ಚು ಅಭ್ಯರ್ಥಿಗಳು ಒಂದೇ ಹೆಸರನ್ನು ಹೊಂದಿದ್ದರೆ, ಅವರ ವೃತ್ತಿ ಅಥವಾ ವಾಸಸ್ಥಳವನ್ನು ಸೇರಿಸುವ ಮೂಲಕ ಅಥವಾ ಇತರೆ ಬೇರೆ ರೀತಿಯಲ್ಲಿ ಅವರನ್ನು ವಿಶೇಷವಾಗಿ ಗುರುತಿಸತಕ್ಕದ್ದು.

**39. ಮತ ಪೆಟ್ಟಿಗೆಗಳ ವಿನ್ಯಾಸ.-** ಪ್ರತಿಯೊಂದು ಮತ ಪೆಟ್ಟಿಗೆಯು, ರಾಜ್ಯ ಚುನಾವಣಾ ಆಯೋಗವು ಅನುಮೋದಿಸಬಹುದಾದಂಥ ವಿನ್ಯಾಸದಲ್ಲಿರತಕ್ಕದ್ದು.

**40. ಮತದಾನ ಕೇಂದ್ರಗಳಲ್ಲಿನ ವ್ಯವಸ್ಥೆ.-** (1) ಪ್ರತಿಯೊಂದು ಮತದಾನ ಕೇಂದ್ರದ ಹೊರಗಡೆ, ಈ ಕೆಳಕಂಡ ವಿವರಗಳನ್ನು ಎದ್ದು ಕಾಣುವಂತೆ ಪ್ರದರ್ಶಿಸತಕ್ಕದು ಎಂದರೆ:-

(ಎ) ಮತದಾನ ಕೇಂದ್ರದಲ್ಲಿ ಯಾವ ಮತದಾನ ಕ್ಷೇತ್ರದ ಮತದಾರರು, ಮತ ಚಲಾಯಿಸಲು ಹಕ್ಕುಳ್ಳವರಾಗಿರುವರೋ ಆ ಮತ ಕ್ಷೇತ್ರದ ಮತ್ತು ಮತ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಮತದಾನ ಕೇಂದ್ರವಿದ್ದಾಗ, ಹಾಗೆ ಹಕ್ಕುಳ್ಳ ಮತದಾರರ ವಿವರಗಳನ್ನು ನಿರ್ದಿಷ್ಟಪಡಿಸುವ ಸೂಚನಾ ಪತ್ರ; ಮತ್ತು

(ಬಿ) ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯ ಪ್ರತಿ.

(2) ಪ್ರತಿಯೊಂದು ಮತದಾನ ಕೇಂದ್ರದಲ್ಲಿ, ಬೇರೆಯವರು ನೋಡುವುದಕ್ಕೆ ಸಾಧ್ಯವಾಗದ ರೀತಿಯಲ್ಲಿ ಮರೆ ಮಾಡಿ, ಮತದಾರರು ತಮ್ಮ ಮತಗಳನ್ನು ದಾಖಲಿಸಬಹುದಾದಂಥ, ಒಂದು ಅಥವಾ ಹೆಚ್ಚು ಮತದಾನದ ಅಂಕಣ (ಕಂಪಾರ್ಟ್‌ಮೆಂಟ್) ಗಳನ್ನು ಸ್ಥಾಪಿಸತಕ್ಕದ್ದು.

(3) ರಿಟರ್ನಿಂಗ್ ಅಧಿಕಾರಿಯವರು, ಸಾಕಷ್ಟು ಮತಪೆಟ್ಟಿಗೆಗಳ ಸಂಖ್ಯೆ ಮತದಾರ ಪಟ್ಟಿಯ ಸಂಬಂಧಪಟ್ಟ ಭಾಗದ ಪ್ರತಿಗಳು, ಮತಪತ್ರಗಳು, ಮತಪತ್ರಗಳ ಮೇಲೆ ವಿಶಿಷ್ಟ ಗುರುತು ಚಿಹ್ನೆಯನ್ನು ಹಾಕುವುದಕ್ಕಾಗಿ ಉಪಕರಣ ಮತ್ತು ಮತಪತ್ರಗಳ ಮೇಲೆ ಗುರುತು ಮಾಡಲು ಮತದಾರರಿಗೆ ಅವಶ್ಯಕವಾದ ವಸ್ತುಗಳು ಮತ್ತು ಮತದಾನ ನಡೆಸುವುದಕ್ಕಾಗಿ ಅವಶ್ಯವಿರಬಹುದಾದಂಥ ಇತರ ಸಾಮಗ್ರಿಗಳನ್ನು ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಒದಗಿಸತಕ್ಕದ್ದು.

**41. ಮತದಾನ ಕೇಂದ್ರಗಳಿಗೆ ಪ್ರವೇಶ.-** ಪ್ರಿಸೈಡಿಂಗ್ ಅಧಿಕಾರಿಯು, ಮತದಾನ ಕೇಂದ್ರದ ಒಳಗಡೆ ಯಾವುದೇ ಸಮಯದಲ್ಲಿ ಈ ಕೆಳಕಂಡ ವ್ಯಕ್ತಿಗಳನ್ನು ಹೊರತುಪಡಿಸಿ, ಹೆಚ್ಚು ಮತದಾರರು ಪ್ರವೇಶಿಸದಂತೆ ನಿಯಂತ್ರಿಸತಕ್ಕದ್ದು, ಎಂದರೆ:-

(i) ಮತಗಟ್ಟೆ ಅಧಿಕಾರಿಗಳು;
(ii) ಚುನಾವಣಾ ಸಂಬಂಧಿತ ಕರ್ತವ್ಯದ ಮೇಲಿರುವ ಸರ್ಕಾರಿ ನೌಕರರು:
(iii) ಆಯುಕ್ತರು ಮತ್ತು ರಾಜ್ಯ ಚುನಾವಣಾ ಆಯೋಗದಿಂದ ಅಧಿಕೃತಗೊಂಡ ವ್ಯಕ್ತಿಗಳು;
(iv) ಅಭ್ಯರ್ಥಿಗಳು, ಅವರ ಚುನಾವಣಾ ಏಜೆಂಟರು ಮತ್ತು ಪ್ರತಿಯೊಬ್ಬ ಅಭ್ಯರ್ಥಿಯ ಒಬ್ಬ ಮತದಾನ ಏಜೆಂಟ್:
(v) ಮತದಾರರ ಜೊತೆಗೆ ಬರುವ ಚಿಕ್ಕ ವಯಸ್ಸಿನ ಎಳೆಯ ಮಗು;
(vi) ಸಹಾಯವಿಲ್ಲದೇ ನಡೆದಾಡುವುದಕ್ಕೆ ಆಗದಿರುವ ಕುರುಡ ಅಥವಾ ಅಶಕ್ತ ಮತದಾರರೊಂದಿಗೆ ಬರುವ ಒಬ್ಬ ವ್ಯಕ್ತಿ, ಮತ್ತು
(vii) ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯು ಚುನಾವಣಾ ಉದ್ದೇಶಕ್ಕಾಗಿ ನಿಯೋಜಿಸಬಹುದಾದಂಥ ಇತರೆ ವ್ಯಕ್ತಿಗಳು.

**42. ಮಹಿಳಾ ಮತದಾರರಿಗಾಗಿ ಸೌಲಭ್ಯಗಳು.-** (1) ಮತದಾನ ಕೇಂದ್ರದಲ್ಲಿ ಪುರುಷ ಮತ್ತು ಮಹಿಳಾ ಮತದಾರರಿಬ್ಬರೂ ಇದ್ದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು, ಅವರನ್ನು ಪ್ರತ್ಯೇಕ ತಂಡಗಳಲ್ಲಿ ಪರ್ಯಾಯವಾಗಿ ಮತದಾನ ಕೇಂದ್ರಕ್ಕೆ ಒಳಕ್ಕೆ ಬಿಡಲು ನಿರ್ದೇಶಿಸಬಹುದು.

(2) ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯು, ಮಹಿಳಾ ಮತದಾರರಿಗೆ ನೆರವಾಗಲು ಯಾವುದೇ ಮತದಾನ ಕೇಂದ್ರದಲ್ಲಿ ಸಹಾಯಕಿಯಾಗಿ ಸೇವೆ ಸಲ್ಲಿಸಲು ಮತ್ತು ಮಹಿಳಾ ಮತದಾರರಿಗೆ ಸಂಬಂಧಿಸಿದಂತೆ ಮತ ಚಲಾಯಿಸಲು ಸಾಮಾನ್ಯವಾಗಿ ಪ್ರಿಸೈಡಿಂಗ್ ಅಧಿಕಾರಿಗೆ ನೆರವಾಗಲು ಸಹ ಮತ್ತು ವಿಶೇಷವಾಗಿ, ಅವಶ್ಯವಾಗಿರುವ ಸಂದರ್ಭದಲ್ಲಿ ಯಾರೇ ಮಹಿಳಾ ಮತದಾರರನ್ನು ತಪಾಸಣೆ ಮಾಡಲು ಸಹಾಯ ಮಾಡುವುದಕ್ಕಾಗಿ ಒಬ್ಬ ಮಹಿಳೆಯನ್ನು ನೇಮಕ ಮಾಡಬಹುದು.

**43. ಮತದಾರರನ್ನು ಗುರುತಿಸುವುದು.-** (1) ರಿಟರ್ನಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯು, ಮತದಾರರನ್ನು ಗುರುತಿಸುವುದಕ್ಕೆ ಸಹಾಯ ಮಾಡಲು ಅಥವಾ ಮತ ಚಲಾಯಿಸುವಲ್ಲಿ ಪ್ರಿಸೈಡಿಂಗ್ ಅಧಿಕಾರಿಗೆ ಅನ್ಯಥಾ ನೆರವಾಗಲು ಅವನು ಸೂಕ್ತವೆಂದು ಭಾವಿಸಬಹುದಾದಂಥ ವ್ಯಕ್ತಿಗಳನ್ನು ಮತದಾನ ಕೇಂದ್ರದಲ್ಲಿ ನಿಯೋಜಿಸಬಹುದು.

(2) ಪ್ರತಿಯೊಬ್ಬ ಮತದಾರನು ಮತದಾನ ಕೇಂದ್ರವನ್ನು ಪ್ರವೇಶಿಸುತ್ತಿದ್ದಂತೆಯೇ, ಪ್ರಿಸೈಡಿಂಗ್ ಅಧಿಕಾರಿಯು ಅಥವಾ ಈ ಬಗ್ಗೆ ಅವರಿಂದ ಅಧಿಕೃತಗೊಂಡ ಪೋಲಿಂಗ್ ಅಧಿಕಾರಿಯು,

ಮತದಾರರ ಹೆಸರು ಮತ್ತು ಮತದಾರರ ಪಟ್ಟಿಯಲ್ಲಿ ನಮೂದಿಸಿದ ಸಂಬಂಧಪಟ್ಟ ಇತರೆ ವಿವರಗಳನ್ನು ಪರಿಶೀಲಿಸತಕ್ಕದ್ದು ಮತ್ತು ನಂತರ ಮತದಾರರ ಕ್ರಮಸಂಖ್ಯೆ, ಹೆಸರು ಮತ್ತು ಇತರೆ ವಿವರಗಳನ್ನು ಗಟ್ಟಿಯಾಗಿ ಕೂಗಿ ಹೇಳತಕ್ಕದ್ದು.

(3) ಪ್ರಿಸೈಡಿಂಗ್ ಅಧಿಕಾರಿ ಅಥವಾ ಸಂದರ್ಭಾನುಸಾರ, ಪೋಲಿಂಗ್ ಅಧಿಕಾರಿಯಿಂದ ಮತಪತ್ರವನ್ನು ಪಡೆಯುವ ವ್ಯಕ್ತಿಯ ಹಕ್ಕನ್ನು ನಿರ್ಣಯಿಸುವಲ್ಲಿ, ಅವರು ಅಂಥ ವ್ಯಕ್ತಿ, ಅಂಥ ನಮೂದು ಯಾರಿಗೆ ಸಂಬಂಧಿಸಿದೆಯೋ ಆ ಮತದಾರರು ಒಬ್ಬರೇ ಆಗಿರುವರೆಂದು ಮನವರಿಕೆ ಮಾಡಿಕೊಂಡರೆ, ಮತದಾರರ ಪಟ್ಟಿಯಲ್ಲಿನ ನಮೂದಿನಲ್ಲಿ ಕೇವಲ ಬರವಣಿಗೆ ಅಥವಾ ಮುದ್ರಣ ದೋಷಗಳನ್ನು ನಿರ್ಲಕ್ಷಿಸತಕ್ಕದ್ದು.

**44. ಚುನಾವಣಾ ಕರ್ತವ್ಯದ ಮೇಲಿರುವ ಸರ್ಕಾರಿ ನೌಕರರಿಗಾಗಿ ಸೌಲಭ್ಯಗಳು.-** (1) ಯಾರೇ ಚುನಾವಣಾ ಕರ್ತವ್ಯದ ಮೇಲಿರುವ ಮತದಾರರು, ಚುನಾವಣೆಯಲ್ಲಿ ಅಂಚೆ ಮೂಲಕ ಮತ ಚಲಾಯಿಸಲು ಅಪೇಕ್ಷಿಸಿದರೆ, ರಿಟರ್ನಿಂಗ್ ಅಧಿಕಾರಿಗೆ ನಮೂನೆ-15 ರಲ್ಲಿ ಅರ್ಜಿಯನ್ನು ಮತದಾನದ ದಿನಾಂಕಕ್ಕೂ ಮುಂಚೆ ಕನಿಷ್ಠಪಕ್ಷ ಏಳು ದಿನಗಳಲ್ಲಿ ಅಥವಾ ರಿಟರ್ನಿಂಗ್ ಅಧಿಕಾರಿಯು ಅನುಮತಿಸಬಹುದಾದ ಕಡಿಮೆ ಅವಧಿಯಲ್ಲಿ ಅವರಿಗೆ ತಲುಪುವ ಹಾಗೆ ಕಳುಹಿಸತಕ್ಕದ್ದು ಮತ್ತು ರಿಟರ್ನಿಂಗ್ ಅಧಿಕಾರಿಯು, ಅರ್ಜಿದಾರನು ಅವನು ಮತದಾರನಾಗಿರುವ ವಾರ್ಡ್ ಹೊರಗೆ ಯಾವುದೇ ಸ್ಥಳದಲ್ಲಿ ಚುನಾವಣಾ ಕರ್ತವ್ಯದ ಮೇಲಿದ್ದಾನೆಂದು ಮನದಟ್ಟಾದರೆ, ಅಧಿಕಾರಿಗೆ ಅಂಥ ಸಂಬಂಧಿಸಿದ ವಾರ್ಡ್‌ನ ಅಂಚೆ ಮತಪತ್ರವನ್ನು ನೀಡತಕ್ಕದ್ದು.

(2) ಅಂಥ ಮತದಾರನು, ಅವನು ಮತ ಚಲಾಯಿಸಲು ಹಕ್ಕುಳ್ಳ ಮತಕೇಂದ್ರವಲ್ಲದೆ ಬೇರೆ ಮತಕೇಂದ್ರದಲ್ಲಿ ಪ್ರಿಸೈಡಿಂಗ್ ಅಧಿಕಾರಿ, ಪೋಲಿಂಗ್ ಅಧಿಕಾರಿಯ ಅಥವಾ ಚುನಾವಣಾ ಕರ್ತವ್ಯದ ಮೇಲಿರುವ ಸರ್ಕಾರಿ ನೌಕರನಾಗಿದ್ದಲ್ಲಿ ಅವನು ಕರ್ತವ್ಯದ ಮೇಲಿರುವ ಮತ ಕೇಂದ್ರದಲ್ಲಿ ಮತ ಚಲಾಯಿಸಲು ಇಚ್ಛಿಸಿದರೆ, ಅವನು, ರಿಟರ್ನಿಂಗ್ ಅಧಿಕಾರಿಗೆ ನಮೂನೆ-13ರಲ್ಲಿ ಅರ್ಜಿಯನ್ನು ಕನಿಷ್ಠಪಕ್ಷ ನಾಲ್ಕು ದಿನಗಳಲ್ಲಿ ಅಥವಾ ಮತದಾನದ ದಿನಾಂಕಕ್ಕಿಂತ ಮುಂಚೆ ರಿಟರ್ನಿಂಗ್ ಅಧಿಕಾರಿಯು ಅನುಮತಿಸಬಹುದಾದಂಥ ಕಡಿಮೆ ಅವಧಿಯಲ್ಲಿ ಅವರಿಗೆ ತಲುಪುವ ಹಾಗೆ ಕಳುಹಿಸತಕ್ಕದ್ದು ಮತ್ತು ರಿಟರ್ನಿಂಗ್ ಅಧಿಕಾರಿಗೆ, ಅರ್ಜಿದಾರನು, ಸರ್ಕಾರಿ ನೌಕರನೆಂದು ಮತ್ತು ಚುನಾವಣಾ ಕರ್ತವ್ಯದ ಮೇಲಿರುವ ಮತದಾರನೆಂದು ಮನದಟ್ಟಾದರೆ,-

ಅವನು,-

(ಎ) ನಮೂನೆ-14ರಲ್ಲಿ ಚುನಾವಣಾ ಕರ್ತವ್ಯದ ಪ್ರಮಾಣಪತ್ರವನ್ನು (ಇಡಿಸಿ) ಅರ್ಜಿದಾರನಿಗೆ ನೀಡತಕ್ಕದ್ದು;

(ಬಿ) ಆತನು/ಆಕೆಗೆ ಚುನಾವಣಾ ಕರ್ತವ್ಯದ ಪ್ರಮಾಣಪತ್ರವನ್ನು ನೀಡಲಾಗಿದೆ ಎಂಬುದನ್ನು ಸೂಚಿಸಲು ಗುರುತು ಮಾಡಲಾಗಿರುವ ಮತದಾರರ ಪಟ್ಟಿಯ ಪ್ರತಿಯಲ್ಲಿ ಆತನ/ಆಕೆಯ ಹೆಸರಿನ ಮುಂದೆ ಇಡಿಸಿ ಎಂದು ಗುರುತು ಮಾಡತಕ್ಕದ್ದು; ಮತ್ತು

(ಸಿ) ಆತ/ಆಕೆ ಮತ ಚಲಾಯಿಸಲು ಹಕ್ಕುಳ್ಳವನಾಗಿರುವ ಮತಕೇಂದ್ರದಲ್ಲಿ ಆತನಿಗೆ/ಆಕೆಗೆ ಮತ ಚಲಾಯಿಸಲು ಅವಕಾಶ ನೀಡಿಲ್ಲವೆಂದು ಖಚಿತಪಡಿಸಿಕೊಳ್ಳತಕ್ಕದ್ದು.

(3) ನಿಯಮ-43ರ ಉಪಬಂಧಗಳು, ನಮೂನೆ-14ರಲ್ಲಿ ಚುನಾವಣಾ ಕರ್ತವ್ಯ ಪ್ರಮಾಣ ಪತ್ರವನ್ನು ಮತದಾನ ಕೇಂದ್ರದಲ್ಲಿ ಹಾಜರುಪಡಿಸಿರುವ ಮತ್ತು ಅವನು ಮತ ಚಲಾಯಿಸಲು ಹಕ್ಕುಳ್ಳ ಮತಕೇಂದ್ರ ಬೇರೆಯಾಗಿದ್ದರೂ ಮತ ಪತ್ರವನ್ನು ಕೇಳುವ ಯಾರೇ ವ್ಯಕ್ತಿಗೆ ಅನ್ವಯಿಸತಕ್ಕದ್ದಲ್ಲ. ಅಂಥ ಪ್ರಮಾಣಪತ್ರವನ್ನು ಹಾಜರುಪಡಿಸಿದ ಮೇಲೆ, ಪ್ರಿಸೈಡಿಂಗ್ ಅಧಿಕಾರಿಯು,-

(ಎ) ಅದನ್ನು ಹಾಜರುಪಡಿಸಿದ ವ್ಯಕ್ತಿಯ ಸಹಿಯನ್ನು ಅದರ ಮೇಲೆ ಪಡೆಯತಕ್ಕದ್ದು;

(ಬಿ) ಗುರುತು ಮಾಡಿರುವ ಮತದಾರರ ಪಟ್ಟಿಯ ಪ್ರತಿಯ ಕೊನೆಯಲ್ಲಿ ಪ್ರಮಾಣಪತ್ರದಲ್ಲಿ ನಮೂದಿಸಲಾದಂತೆ ವ್ಯಕ್ತಿಯ ಹೆಸರು ಮತ್ತು ಮತದಾರರ ಕ್ರಮಸಂಖ್ಯೆಯನ್ನು ನಮೂದಿಸಿಕೊಳ್ಳತಕ್ಕದ್ದು; ಮತ್ತು

(ಸಿ) ಮತಪತ್ರವನ್ನು ಅವನಿಗೆ ನೀಡತಕ್ಕದ್ದು ಮತ್ತು ಮತದಾನ ಕೇಂದ್ರದಲ್ಲಿ ಮತ ಚಲಾಯಿಸಲು ಹಕ್ಕುಳ್ಳ ಮತದಾರರ ರೀತಿಯಲ್ಲಿ ಮತ ಚಲಾಯಿಸಲು ಅವರಿಗೆ ಅನುಮತಿ ನೀಡತಕ್ಕದ್ದು.

**45. ಅಂಚೆ ಮೂಲಕ ಮತ ಚಲಾಯಿಸಲು ಹಕ್ಕುಳ್ಳ ವ್ಯಕ್ತಿಗಳು.-** ಇದರಲ್ಲಿ ಇನ್ನು ಮುಂದೆ ನಿರ್ದಿಷ್ಟಪಡಿಸಿದ ಅಗತ್ಯತೆಗಳನ್ನು ಪೂರೈಸುವುದಕ್ಕೆ ಒಳಪಟ್ಟು, ಈ ಕೆಳಕಂಡ ವ್ಯಕ್ತಿಗಳು, ಅಂಚೆ ಮೂಲಕ ಮತ ಚಲಾಯಿಸಲು ಹಕ್ಕುಳ್ಳವರಾಗಿರತಕ್ಕದ್ದು ಎಂದರೆ:-

(ಎ) ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950 ರ ಕೇಂದ್ರ ಅಧಿನಿಯಮ 43)ರ 20ನೇ ಪ್ರಕರಣದ (3)ನೇ ಉಪ-ಪ್ರಕರಣ ಅಥವಾ (6)ನೇ ಉಪ-ಪ್ರಕರಣದ ಉಪಬಂಧಗಳು ಯಾರಿಗೆ ಅನ್ವಯವಾಗುವುದೋ ಆ ವ್ಯಕ್ತಿಗಳು;

(ಬಿ) ಅವರು ಮತ ಚಲಾಯಿಸಲು ಹಕ್ಕುಳ್ಳವರಾಗಿರುವ ವಾರ್ಡಿನ ಹೊರಗೆ ಯಾವುದೇ ಸ್ಥಳದಲ್ಲಿ ಚುನಾವಣಾ ಕರ್ತವ್ಯದ ಮೇಲಿರುವ ಮತದಾರರು; ಮತ್ತು

(ಸಿ) ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟ ಮತದಾರರು.

**46. ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿರುವ ಮತದಾರರು.-** (1) ಪಾಲಿಕೆಗಳು, ಚುನಾವಣೆಯನ್ನು ಘೋಷಿಸಿದ ಹದಿನೈದು ದಿನಗಳೊಳಗೆ, ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟ ಮತದಾರರು ಯಾರಾದರೂ ಇದ್ದರೆ ಅವರ ಹೆಸರುಗಳು, ವಿಳಾಸಗಳು ಮತ್ತು ಮತದಾರರ ಕ್ರಮಸಂಖ್ಯೆಗಳು ಮತ್ತು ಅವರ ಸ್ಥಾನಬದ್ಧತೆಯ ಸ್ಥಳಗಳ ಬಗೆಗಿನ ವಿವರಗಳನ್ನು ರಿಟರ್ನಿಂಗ್ ಅಧಿಕಾರಿಗೆ ಖಚಿತಪಡಿಸತಕ್ಕದ್ದು ಮತ್ತು ತಿಳಿಸತಕ್ಕದ್ದು.

(2) ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟ ಯಾರೇ ಮತದಾರನು, ಚುನಾವಣೆಯನ್ನು ಘೋಷಿಸಿದ ಹದಿನೈದು ದಿನಗಳೊಳಗೆ, ಅವನು ತನ್ನ ಹೆಸರು, ವಿಳಾಸ, ಮತದಾರರ ಕ್ರಮಸಂಖ್ಯೆ ಮತ್ತು ಸ್ಥಾನಬದ್ಧತೆಯ ಸ್ಥಳವನ್ನು ನಿರ್ದಿಷ್ಟಪಡಿಸಿ ಅಂಚೆ ಮೂಲಕ ಮತ ಚಲಾಯಿಸಲು ಇಚ್ಛಿಸಿರುವನೆಂದು ರಿಟರ್ನಿಂಗ್ ಅಧಿಕಾರಿಗೆ ಮಾಹಿತಿಯನ್ನು ತಿಳಿಸತಕ್ಕದ್ದು.

(3) ರಿಟರ್ನಿಂಗ್ ಅಧಿಕಾರಿಯು, ಅಂಥ ಮಾಹಿತಿಯನ್ನು ಸ್ವೀಕರಿಸಿದ ಮೇಲೆ, (1)ನೇ ಉಪ-ನಿಯಮದ ಅಥವಾ (2)ನೇ ಉಪ-ನಿಯಮದ ಮೇರೆಗೆ ಯಾರ ಹೆಸರನ್ನು ಅವರಿಗೆ ತಿಳಿಸಲಾಗಿದೆಯೋ ಆ ಪ್ರತಿಬಂಧಕ ಸ್ಥಾನಬದ್ಧತೆಗೆ ಒಳಪಟ್ಟ ಪ್ರತಿಯೊಬ್ಬ ಮತದಾರನಿಗೆ ಅಂಚೆ ಮತಪತ್ರವನ್ನು ನೀಡತಕ್ಕದ್ದು.

**47. ಅಂಚೆ ಮೂಲಕ ಮತ ಚಲಾಯಿಸಲು ಅರ್ಹರಾದ ಮತದಾರರಿಂದ ಮಾಹಿತಿ:-** 44 ಮತ್ತು 46ನೇ ನಿಯಮಗಳಿಗೊಳಪಟ್ಟು, ಚುನಾವಣೆಯಲ್ಲಿ ಅಂಚೆ ಮೂಲಕ ಮತ ಚಲಾಯಿಸಲು ಇಚ್ಛಿಸಿರುವ 45ನೇ ನಿಯಮದಲ್ಲಿ ಉಲ್ಲೇಖಿಸಲಾದ ವ್ಯಕ್ತಿಯು, ಮತದಾನದ ದಿನಾಂಕಕ್ಕೂ ಮುಂಚೆ ಕನಿಷ್ಠಪಕ್ಷ ಹತ್ತು ದಿನಗಳಲ್ಲಿ ರಿಟರ್ನಿಂಗ್ ಅಧಿಕಾರಿಗೆ ತಲುಪುವ ಹಾಗೆ ಅವರಿಗೆ ನಮೂನೆ-15ರಲ್ಲಿ ಮಾಹಿತಿಯನ್ನು ತಿಳಿಸತಕ್ಕದ್ದು ಮತ್ತು ರಿಟರ್ನಿಂಗ್ ಅಧಿಕಾರಿಯು ಮಾಹಿತಿಯನ್ನು ಸ್ವೀಕರಿಸಿದ ಮೇಲೆ ಅವನಿಗೆ ಅಂಚೆ ಮತಪತ್ರವನ್ನು ನೀಡತಕ್ಕದ್ದು.

**48. ಅಂಚೆ ಮತಪತ್ರದ ನಮೂನೆ.-** ಅಂಚೆ ಮತಪತ್ರವು, ಖುದ್ದಾಗಿ ಮತ ಚಲಾಯಿಸಲು ಹಕ್ಕುಳ್ಳವರಾದ ಮತದಾರರಿಗೆ ಕೊಡಲಾದ ಇತರ ಮತಪತ್ರದಂತೆ ಇರತಕ್ಕದ್ದು.

**49. ಅಂಚೆ ಮತಪತ್ರ ನೀಡಿಕೆ.-** (1) ಅಂಚೆ ಮತಪತ್ರವನ್ನು,

(i) ನಮೂನೆ-16 ರಲ್ಲಿನ ಘೋಷಣೆ;
(ii) ನಮೂನೆ-16ಎ ರಲ್ಲಿನ ಲಕೋಟೆ (ಕವರ್);
(iii) ನಮೂನೆ-16ಬಿ ರಲ್ಲಿ ರಿಟರ್ನಿಂಗ್ ಅಧಿಕಾರಿಯ ವಿಳಾಸವನ್ನು ಒಳಗೊಂಡಿರುವ ದೊಡ್ಡ ಲಕೋಟೆ (ಕವರ್); ಮತ್ತು
(iv) ನಮೂನೆ-16ಸಿ ನಲ್ಲಿ ಮತದಾರನ ಮಾರ್ಗದರ್ಶನಕ್ಕಾಗಿ ಸೂಚನೆಗಳು,

- ಇವುಗಳ ಜೊತೆಗೆ ಮತದಾರನಿಗೆ ಅಂಚೆ ಪ್ರಮಾಣಪತ್ರದ ಮೇರೆಗೆ ಅಂಚೆ ಮೂಲಕ ಕಳುಹಿಸತಕ್ಕದ್ದು:

ಪರಂತು, ರಿಟರ್ನಿಂಗ್ ಅಧಿಕಾರಿಯು, ಅಂಚೆ ಮೂಲಕ ಮತ ಚಲಾಯಿಸಲು ಹಕ್ಕುಳ್ಳವರಾದ ಯಾರೇ ಚುನಾವಣಾ ಕರ್ತವ್ಯದ ಮೇಲಿರುವ ಮತದಾರನ ಸಂದರ್ಭದಲ್ಲಿ ಮತಪತ್ರ ಮತ್ತು ನಮೂನೆಗಳನ್ನು ಒದಗಿಸಬಹುದು ಅಥವಾ ಖುದ್ದಾಗಿ ಅಂಥ ಮತದಾರನಿಗೆ ಒದಗಿಸುವಂತೆ ಮಾಡತಕ್ಕದ್ದು.

(2) ರಿಟರ್ನಿಂಗ್ ಅಧಿಕಾರಿಯು, ಅದೇ ಸಮಯದಲ್ಲಿ,-

(ಎ) ಮತಪತ್ರದ ಪಕ್ಕ ಪ್ರತಿಯಲ್ಲಿ ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿಯಲ್ಲಿ ನಮೂದಿಸಲಾದಂತೆ ಮತದಾರನ ಕ್ರಮಸಂಖ್ಯೆಯನ್ನು ದಾಖಲಿಸತಕ್ಕದ್ದು;

(ಬಿ) ಅಂಚೆ ಮತಪತ್ರವನ್ನು ಆ ಮತದಾರನಿಗೆ ನೀಡಲಾದ ಮತಪತ್ರದ ಕ್ರಮಸಂಖ್ಯೆಯನ್ನು ಅದರಲ್ಲಿ ದಾಖಲಿಸದೆ ಅವನಿಗೆ ನೀಡಲಾಗಿದೆಯೆಂದು ಸೂಚಿಸಲು ಗುರುತು ಮಾಡಿರುವ ಮತದಾರರ ಪಟ್ಟಿಯ ಪ್ರತಿಯಲ್ಲಿ ಮತದಾರರ ಹೆಸರನ್ನು ಗುರುತು ಮಾಡತಕ್ಕದ್ದು; ಮತ್ತು

(ಸಿ) ಮತದಾರನನ್ನು ಮತದಾನ ಕೇಂದ್ರದಲ್ಲಿ ಮತ ಚಲಾಯಿಸಲು ಅನುಮತಿಸಿರುವುದಿಲ್ಲ ಎಂದು ಖಚಿತಪಡಿಸಿಕೊಳ್ಳತಕ್ಕದ್ದು.

(3) ಅಂಚೆ ಮತಪತ್ರವನ್ನು ಯಾವುದರಿಂದ ಅಥವಾ ಯಾರ ಮುಖಾಂತರ ಕಳುಹಿಸಲಾಗಿದೆಯೋ ಆ ಪ್ರತಿಯೊಬ್ಬ ಅಧಿಕಾರಿಯು, ವಿಳಂಬ ಮಾಡದೆ ವಿಳಾಸದಾರನಿಗೆ ಅದನ್ನು ಕಳುಹಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

**50. ಮತಗಳನ್ನು ದಾಖಲಿಸುವುದು.-** (1) ಅಂಚೆ ಮತಪತ್ರವನ್ನು ಸ್ವೀಕರಿಸಿರುವ ಮತ್ತು ಮತ ಚಲಾಯಿಸಲು ಅಪೇಕ್ಷಿಸಿರುವ ಮತದಾರನು, ನಮೂನೆ-16ಸಿ ಯ ಭಾಗ-1 ರಲ್ಲಿ ಒಳಗೊಂಡಿರುವ ನಿರ್ದೇಶನಗಳಿಗೆ ಅನುಸಾರವಾಗಿ ಮತಪತ್ರದಲ್ಲಿ ತನ್ನ ಮತವನ್ನು ದಾಖಲಿಸತಕ್ಕದ್ದು ಮತ್ತು ನಂತರ ನಮೂನೆ-16ಬಿ ಯಲ್ಲಿನ ಲಕೋಟೆ (ಕವರ್) ಯಲ್ಲಿ ಅದನ್ನು ಇಡತಕ್ಕದ್ದು.

(2) ಮತದಾರನು, ಅವನಿಗೆ ವೈಯಕ್ತಿಕವಾಗಿ ಗೊತ್ತಿರುವಂತಹ ಮ್ಯಾಜಿಸ್ಟ್ರೇಟ್ ಅಥವಾ ಯಾರೇ ಗೆಜೆಟೆಡ್ ಅಧಿಕಾರಿಯ ಸಮ್ಮುಖದಲ್ಲಿ ನಮೂನೆ-16 ರಲ್ಲಿ ಘೋಷಣೆಗೆ ಸಹಿ ಮಾಡತಕ್ಕದ್ದು ಮತ್ತು ಅವರಿಂದ ರುಜುವನ್ನು ದೃಢೀಕರಿಸಿಕೊಳ್ಳತಕ್ಕದ್ದು.

(3) ನಿಯಮ 45ರ (ಎ) ಖಂಡದ ಅಡಿಯಲ್ಲಿ ಬರುವ ಮತದಾರನ ಸಂದರ್ಭದಲ್ಲಿ, ಮತದಾರನು ಅಥವಾ ಸಂದರ್ಭಾನುಸಾರ ಮತದಾರನ ಪತಿ-ಪತ್ನಿ ನಿಯೋಜನೆಯಾಗಿರುವ ಘಟಕ, ಉದ್ಯಮ ಅಥವಾ ಕಾರ್ಯಸಂಸ್ಥೆಯ ಕಮಾಂಡಿಂಗ್ ಅಧಿಕಾರಿಯು ಅನುಪ್ರಮಾಣಿಸತಕ್ಕದ್ದು.

(4) ಚುನಾವಣಾ ಕರ್ತವ್ಯದ ಮೇಲಿರುವ ಮತದಾರನ ಸಂದರ್ಭದಲ್ಲಿ ಅವನು ಕರ್ತವ್ಯದ ಮೇಲಿರುವಂಥ ಮತದಾನ ಕೇಂದ್ರದ ಯಾರೇ ಗೆಜೆಟೆಡ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯು ದೃಢೀಕರಿಸಬಹುದು.

(5) ಪ್ರತಿಬಂಧಕ ಸ್ಥಾನಬದ್ಧತೆಯಲ್ಲಿರುವ ಮತದಾರನ ಸಂದರ್ಭದಲ್ಲಿ ಮತದಾರನು ಸ್ಥಾನಬದ್ಧತೆಯಲ್ಲಿರುವ ಜೈಲಿನ ಸೂಪರಿಂಟೆಂಡೆಂಟ್‌ನಿಂದ ದೃಢೀಕರಿಸಬಹುದು.

**51. ಅಂಚೆ ಮತಪತ್ರದ ವಾಪಸಾತಿ.-** (1) ಮತದಾರನು ತನ್ನ ಮತವನ್ನು ದಾಖಲಿಸಿದ ಮತ್ತು ತಾನು ಘೋಷಣೆಯನ್ನು ಮಾಡಿದ ತರುವಾಯ, ಅವನು, ಮತಗಳ ಎಣಿಕೆಯನ್ನು ಪ್ರಾರಂಭಿಸಲು ನಿಗದಿಪಡಿಸಿದ ಕಾಲಕ್ಕೆ ಮುಂಚಿತವಾಗಿ ರಿಟರ್ನಿಂಗ್ ಅಧಿಕಾರಿಗೆ ತಲುಪುವ ಹಾಗೆ ಅವನಿಗೆ ತಿಳಿಸಲಾದ ಸೂಚನೆಗಳಿಗೆ ಅನುಸಾರವಾಗಿ ರಿಟರ್ನಿಂಗ್ ಅಧಿಕಾರಿಗೆ ಅಂಚೆ ಮತಪತ್ರ ಮತ್ತು ಘೋಷಣೆಯನ್ನು ವಾಪಸ್ಸು ಮಾಡತಕ್ಕದ್ದು.

(2) ಅಂಚೆ ಮತಪತ್ರವನ್ನು ಒಳಗೊಂಡ ಯಾವುದೇ ಲಕೋಟೆಯನ್ನು (1)ನೇ ಉಪ-ನಿಯಮದಲ್ಲಿ ನಿಗದಿಪಡಿಸಿದ ಅವಧಿಯ ಮುಕ್ತಾಯದ ತರುವಾಯ ರಿಟರ್ನಿಂಗ್ ಅಧಿಕಾರಿಯು ಸ್ವೀಕರಿಸಿದರೆ, ಅವನು ಅದನ್ನು ಸ್ವೀಕರಿಸಿದ ದಿನ ಮತ್ತು ಸಮಯವನ್ನು ಅದರ ಮೇಲೆ ಬರೆಯತಕ್ಕದ್ದು ಮತ್ತು ಅಂಥ ಎಲ್ಲ ಲಕೋಟೆಗಳನ್ನು ಒಂದು ಪ್ರತ್ಯೇಕ ಪ್ಯಾಕೆಟ್‌ನಲ್ಲಿ ಇಡತಕ್ಕದ್ದು.

(3) ರಿಟರ್ನಿಂಗ್ ಅಧಿಕಾರಿಯು, ಅವನಿಂದ ಸ್ವೀಕರಿಸಿದ ಅಂಚೆ ಮತ ಪತ್ರಗಳನ್ನು ಒಳಗೊಂಡ ಲಕೋಟೆಗಳನ್ನು ಮತಗಳ ಎಣಿಕೆಯು ಪ್ರಾರಂಭವಾಗುವವರೆಗೆ ಸುರಕ್ಷಿತವಾಗಿ ಅಭಿರಕ್ಷೆಯಲ್ಲಿಡತಕ್ಕದ್ದು.

**52. ಮತ ಚಲಾಯಿಸುವ ಹಕ್ಕು.-** (1) ಯಾವುದೇ ವಾರ್ಡಿನ ಮತದಾರ ಪಟ್ಟಿಯಲ್ಲಿ ಯಾರ ಹೆಸರು ನಮೂದಿಸಿರುವುದಿಲ್ಲವೋ ಆ ಯಾರೇ ವ್ಯಕ್ತಿಯು, ಆ ವಾರ್ಡಿನಲ್ಲಿ ಮತ ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು, ಅಧಿನಿಯಮದ 63ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಅನರ್ಹತೆಗಳಿಗೆ ಒಳಪಟ್ಟಿದ್ದರೆ ಚುನಾವಣೆಯಲ್ಲಿ ಮತ ಚಲಾಯಿಸತಕ್ಕದ್ದಲ್ಲ.

(3) ಒಂದಕ್ಕಿಂತ ಹೆಚ್ಚು ವಾರ್ಡಿನಲ್ಲಿ ಮತದಾರರ ಪಟ್ಟಿಯಲ್ಲಿ ಅವನ ಹೆಸರು ನೋಂದಾಯಿತವಾಗಿದ್ದರೂ, ಒಂದಕ್ಕಿಂತ ಹೆಚ್ಚು ವಾರ್ಡಿನಲ್ಲಿ ಯಾರೇ ವ್ಯಕ್ತಿಯು ಮತ ಚಲಾಯಿಸತಕ್ಕದ್ದಲ್ಲ ಮತ್ತು ಒಬ್ಬ ವ್ಯಕ್ತಿಯು, ಒಂದಕ್ಕಿಂತ ಹೆಚ್ಚು ವಾರ್ಡಿನಲ್ಲಿ ಮತ ಚಲಾಯಿಸಿದ್ದರೆ, ಅಂಥ ಎಲ್ಲ ವಾರ್ಡುಗಳಲ್ಲಿ ಅವನ ಮತಗಳು ಅನೂರ್ಜಿತವಾಗತಕ್ಕದ್ದು.

(4) ಯಾರೇ ವ್ಯಕ್ತಿಯು, ಅವನ ಹೆಸರು ವಾರ್ಡಿನ ಮತದಾರರ ಪಟ್ಟಿಯಲ್ಲಿ ಒಂದಕ್ಕಿಂತ ಹೆಚ್ಚು ಸಲ ನೋಂದಾಯಿತವಾಗಿದ್ದರೂ, ಅದೇ ವಾರ್ಡಿನಲ್ಲಿ ಒಂದಕ್ಕಿಂತ ಹೆಚ್ಚು ಸಲ ಯಾವುದೇ ಚುನಾವಣೆಯಲ್ಲಿ ಮತ ಚಲಾಯಿಸತಕ್ಕದ್ದಲ್ಲ ಮತ್ತು ಅವನು ಹಾಗೆ ಮತ ಚಲಾಯಿಸಿದರೆ, ಆ ವಾರ್ಡಿನಲ್ಲಿ ಅವನ ಎಲ್ಲ ಮತಗಳು, ಅನೂರ್ಜಿತವಾಗತಕ್ಕದ್ದು.

(5) ಯಾರೇ ವ್ಯಕ್ತಿಯು, ಅವನು ಕಾರಾವಾಸದ ಶಿಕ್ಷೆಯ ಮೇರೆಗೆ ಆಗಲಿ ಅಥವಾ ಅನ್ಯಥಾವಾಗಿಯಾಗಲಿ ಕಾರಾಗೃಹದಲ್ಲಿ ಬಂಧನದಲ್ಲಿದ್ದರೆ ಅಥವಾ ಪೊಲೀಸರ ಕಾನೂನುಬದ್ಧ ಕಸ್ಟಡಿಯಲ್ಲಿದ್ದರೆ ಯಾವುದೇ ಚುನಾವಣೆಯಲ್ಲಿ ಮತ ಚಲಾಯಿಸತಕ್ಕದ್ದಲ್ಲ:

ಪರಂತು, ಈ ಉಪ-ನಿಯಮದಲ್ಲಿರುವುದು ಯಾವುದೂ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಪ್ರತಿಬಂಧಕ ಸ್ಥಾನಬದ್ಧತೆಗೊಳಪಟ್ಟ ವ್ಯಕ್ತಿಗೆ ಅನ್ವಯವಾಗತಕ್ಕದ್ದಲ್ಲ.

**53. ಮತದಾನಕ್ಕಾಗಿ ಮತಪೆಟ್ಟಿಗೆಗಳನ್ನು ಸಿದ್ಧಪಡಿಸುವುದು.-** (1) ಮತದಾನ ಪ್ರಾರಂಭವಾಗುವುದಕ್ಕೆ ಮುಂಚೆ ಪ್ರಿಸೈಡಿಂಗ್ ಅಧಿಕಾರಿಯು, ಮತಪೆಟ್ಟಿಗೆ ಖಾಲಿ ಇದೆ ಎಂದು ಮತ್ತು (7)ನೇ ಉಪ-ನಿಯಮದಲ್ಲಿ ಉಲ್ಲೇಖಿಸಲಾದ ಲೇಬಲ್‌ಗಳನ್ನು ಹೊಂದಿದೆ ಎಂದು ಮತದಾನ ಏಜೆಂಟರುಗಳಿಗೆ ಪ್ರದರ್ಶಿಸತಕ್ಕದ್ದು.

(2) ನಂತರ ಮತಪೆಟ್ಟಿಗೆಯನ್ನು ಮುಚ್ಚತಕ್ಕದ್ದು, ಮೊಹರು ಮಾಡತಕ್ಕದ್ದು ಮತ್ತು ಭದ್ರಪಡಿಸತಕ್ಕದ್ದು ಹಾಗೂ ಪ್ರಿಸೈಡಿಂಗ್ ಅಧಿಕಾರಿ ಮತ್ತು ಮತದಾನ ಏಜೆಂಟರುಗಳಿಗೆ ಪೂರ್ಣವಾಗಿ ಕಾಣುವಂತೆ ಇಡತಕ್ಕದ್ದು.

(3) ಮತಪೆಟ್ಟಿಗೆಯನ್ನು ಭದ್ರಪಡಿಸುವುದಕ್ಕಾಗಿ ಪೇಪರ್ ಸೀಲ್ (ಕಾಗದದ ಮೊಹರು) ಅನ್ನು ಉಪಯೋಗಿಸುವಾಗ, ಪ್ರಿಸೈಡಿಂಗ್ ಅಧಿಕಾರಿಯು ಪೇಪರ್ ಸೀಲ್ ಮೇಲೆ ತನ್ನ ಸಹಿಯನ್ನು ಹಾಕತಕ್ಕದ್ದು ಮತ್ತು ಅದರ ಮೇಲೆ ಸಹಿಗಳನ್ನು ಹಾಕಲು ಇಚ್ಛಿಸುವ ಹಾಜರಿರುವ ಅಂಥ ಮತದಾನ ಏಜೆಂಟರುಗಳ ಸಹಿಗಳನ್ನು ಪಡೆಯತಕ್ಕದ್ದು.

(4) ತದನಂತರ, ಪ್ರಿಸೈಡಿಂಗ್ ಅಧಿಕಾರಿಯು ಹಾಗೆ ಸಹಿ ಮಾಡಿದ ಪೇಪರ್ ಸೀಲ್‌ನ್ನು ಮತ ಪೆಟ್ಟಿಗೆಯಲ್ಲಿ ಅದಕ್ಕಾಗಿ ಇರುವ ಸ್ಥಳ ಮತ್ತು ನಂತರ ಮತಪತ್ರವನ್ನು ಹಾಕುವುದಕ್ಕಾಗಿ ಉದ್ದವಾಗಿ ತೆರೆದಿರುವಂಥ ರೀತಿಯಲ್ಲಿ ಪೆಟ್ಟಿಗೆಯನ್ನು ಭದ್ರಪಡಿಸತಕ್ಕದ್ದು ಮತ್ತು ಮೊಹರು ಮಾಡತಕ್ಕದ್ದು.

(5) ಮತಪೆಟ್ಟಿಗೆಯನ್ನು ಭದ್ರಗೊಳಿಸುವುದಕ್ಕಾಗಿ ಉಪಯೋಗಿಸಿದ ಮೊಹರುಗಳನ್ನು, ಪೆಟ್ಟಿಗೆಯನ್ನು ಮುಚ್ಚಿದ ತರುವಾಯ ಮೊಹರನ್ನು ಒಡೆಯದೆ ಅದನ್ನು ತೆರೆಯಲು ಸಾಧ್ಯವಿಲ್ಲದಂಥ ರೀತಿಯಲ್ಲಿ ಅಂಟಿಸತಕ್ಕದ್ದು.

(6) ಮತಪೆಟ್ಟಿಗೆಗಳನ್ನು ಭದ್ರಗೊಳಿಸುವುದಕ್ಕಾಗಿ ಪೇಪರ್ ಸೀಲ್‌ಗಳನ್ನು ಉಪಯೋಗಿಸುವುದು ಅಗತ್ಯವಾಗಿರದಿದ್ದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು, ಮತಪತ್ರಗಳನ್ನು ಹಾಕುವುದಕ್ಕಾಗಿ ಉದ್ಯವಾಗಿ ತೆರೆದಿರುವಂಥ ರೀತಿಯಲ್ಲಿ ಮತ ಪೆಟ್ಟಿಗೆಗಳನ್ನು ಭದ್ರಪಡಿಸತಕ್ಕದ್ದು ಮತ್ತು ಮೊಹರು ಮಾಡತಕ್ಕದ್ದು ಮತ್ತು ಹಾಜರಿರುವ ಮತದಾನ ಏಜೆಂಟರುಗಳು ಅವರು ತಮ್ಮ ಮೊಹರುಗಳನ್ನು ಹಾಕಲು ಇಚ್ಛಿಸಿದರೆ ಅವಕಾಶ ಮಾಡಿಕೊಡತಕ್ಕದ್ದು.

(7) ಮತದಾನ ಕೇಂದ್ರದಲ್ಲಿ ಉಪಯೋಗಿಸಿದ ಪ್ರತಿಯೊಂದು ಮತ ಪಟ್ಟಿಗೆಯು, ಒಳಗಡೆ ಮತ್ತು ಹೊರಗಡೆ ಎರಡೂ ಕಡೆ, ಕೆಳಕಂಡ ವಿವರಗಳಿರುವ ಗುರುತಿನ ಲೇಬಲ್‌ಗಳನ್ನು ಹೊಂದಿರತಕ್ಕದ್ದು, ಎಂದರೆ:-

(i) ಕ್ರಮ ಸಂಖ್ಯೆ ಯಾವುದಾದರೂ ಇದ್ದರೆ, ಮತ್ತು ವಾರ್ಡಿನ ಹೆಸರು;
(ii) ಮತದಾನ ಕೇಂದ್ರದ ಕ್ರಮಸಂಖ್ಯೆ ಮತ್ತು ಹೆಸರು;
(iii) ಮತಪೆಟ್ಟಿಗೆಯ ಕ್ರಮಸಂಖ್ಯೆ (ಮತಪೆಟ್ಟಿಗೆಯ ಹೊರಗಿನ ಲೇಬಲ್ ಮೇಲೆ ಮಾತ್ರ ಮತದಾನ ಮುಕ್ತಾಯದಲ್ಲಿ ಭರ್ತಿ ಮಾಡಬೇಕಾದುದು); ಮತ್ತು
(iv) ಮತದಾನದ ದಿನಾಂಕ.

**54. ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿ.-** ಮತದಾನದ ಪ್ರಾರಂಭದ ನಿಕಟಪೂರ್ವದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು, ಹಾಜರಿರುವ ಮತದಾನ ಏಜೆಂಟರುಗಳು ಮತ್ತು ಇತರರಿಗೆ, ರಿಟರ್ನಿಂಗ್ ಅಧಿಕಾರಿಯು ಒದಗಿಸಲಾಗಿರುವ ಮತ್ತು ಮತದಾನದ ಅವಧಿಯಲ್ಲಿ ಉಪಯೋಗಿಸಬೇಕಾದ ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿಯನ್ನು ಪರಿಶೀಲಿಸಲು ಅವಕಾಶ ಮಾಡಿಕೊಡತಕ್ಕದ್ದು.

**55. ಗುರುತಿನ ಬಗ್ಗೆ ಆಕ್ಷೇಪಣೆ.-** (1) ಯಾರೇ ಮತದಾನ ಏಜೆಂಟ್‌ನು ಅಂಥ ಪ್ರತಿಯೊಂದು ಆಕ್ಷೇಪಣೆಗಾಗಿ ಪ್ರಿಸೈಡಿಂಗ್ ಅಧಿಕಾರಿಯವರಲ್ಲಿ ಎರಡು ರೂಪಾಯಿಗಳ ನಗದು ಮೊತ್ತವನ್ನು ಮೊದಲು ಠೇವಣಿ ಇಡುವ ಮೂಲಕ ನಿರ್ದಿಷ್ಟ ಮತದಾರನೆಂದು ಕ್ಲೇಮು ಮಾಡುವ ವ್ಯಕ್ತಿಯ ಗುರುತಿನ ಬಗ್ಗೆ ಆಕ್ಷೇಪಣೆ ಮಾಡಬಹುದು.

(2) ಅಂಥ ಠೇವಣಿಯನ್ನು ಇಟ್ಟ ಮೇಲೆ, ಪ್ರಿಸೈಡಿಂಗ್ ಅಧಿಕಾರಿಯು,-

(i) ಮತ್ತೊಬ್ಬರಂತೆ ನಟಿಸಿದಕ್ಕಾಗಿ ದಂಡವನ್ನು ಹಾಕಿ ಆಕ್ಷೇಪಿಸಲಾದ ವ್ಯಕ್ತಿಗೆ ಎಚ್ಚರಿಕೆ ನೀಡುವುದು;

(ii) ಮತದಾರರ ಪಟ್ಟಿಯಲ್ಲಿ ಸಂಬಂಧಪಟ್ಟ ನಮೂದನ್ನು ಪೂರ್ತಿಯಾಗಿ ಓದತಕ್ಕದ್ದು ಮತ್ತು ಅವನು ಆ ನಮೂದಿನಲ್ಲಿ ಉಲ್ಲೇಖಿಸಲಾದ ವ್ಯಕ್ತಿಯಾಗಿದ್ದಾನೆಯೆ ಎಂದು ಅವನನ್ನು ಕೇಳತಕ್ಕದ್ದು;

(iii) ನಮೂನೆ-17 ರಲ್ಲಿ ಆಕ್ಷೇಪಿತ ಮತಗಳ ಪಟ್ಟಿಯಲ್ಲಿ ಅವನ ಹೆಸರು ಮತ್ತು ವಿಳಾಸವನ್ನು ದಾಖಲಿಸತಕ್ಕದ್ದು; ಮತ್ತು

(iv) ಸದರಿ ಪಟ್ಟಿಯಲ್ಲಿ ಅವನ ಸಹಿ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಲು ಅವನನ್ನು ಅಗತ್ಯಪಡಿಸತಕ್ಕದ್ದು.

(3) ತದನಂತರ, ಪ್ರಿಸೈಡಿಂಗ್ ಅಧಿಕಾರಿಯು ಆಕ್ಷೇಪಣೆಗಾಗಿ ಕ್ಷಿಪ್ರ ವಿಚಾರಣೆಯನ್ನು ನಡೆಸತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ:

(i) ಆಕ್ಷೇಪಣೆಯನ್ನು ರುಜುವಾತುಪಡಿಸಲು ಸಾಕ್ಷ್ಯವನ್ನು ಒದಗಿಸುವಂತೆ ಆಕ್ಷೇಪಣೆ ಎತ್ತಿದವನನ್ನು ಹಾಗೂ ಅವನ ಗುರುತನ್ನು ರುಜುವಾತುಪಡಿಸಲು ಸಾಕ್ಷ್ಯವನ್ನು ಒದಗಿಸುವಂತೆ ಆಕ್ಷೇಪಿಸಿದ ವ್ಯಕ್ತಿಯನ್ನು ಅಗತ್ಯಪಡಿಸಬಹುದು;

(ii) ಆಕ್ಷೇಪಿತ ವ್ಯಕ್ತಿಗೆ ಅವನ ಗುರುತನ್ನು ದೃಢಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಯಾವುದೇ ಪ್ರಶ್ನೆಯನ್ನು ಕೇಳಬಹುದು ಮತ್ತು ಪ್ರಮಾಣ ಮಾಡಿ ಅಧಿಕಾರಿಗೆ ಉತ್ತರಿಸಲು ಅವನನ್ನು ಅಗತ್ಯಪಡಿಸಬಹುದು; ಮತ್ತು

(iii) ಆಕ್ಷೇಪಿತ ವ್ಯಕ್ತಿಗೆ ಸಾಕ್ಷ್ಯ ಕೊಡಲು ಮುಂದಾಗಿರುವ ಯಾರೇ ಇತರೆ ವ್ಯಕ್ತಿಗೆ ಪ್ರಮಾಣ ಮಾಡಿಸಬಹುದು.

(4) ಪ್ರಿಸೈಡಿಂಗ್ ಅಧಿಕಾರಿಯು ವಿಚಾರಣೆ ನಡೆಸಿದ ತರುವಾಯ, ಆಕ್ಷೇಪಣೆಯು ದೃಢಪಟ್ಟಿಲ್ಲವೆಂದು ಪರಿಗಣಿಸಿದರೆ, ಅವನು, ಆಕ್ಷೇಪಿತ ವ್ಯಕ್ತಿಗೆ ಮತ ಚಲಾಯಿಸಲು ಅವಕಾಶ ಮಾಡಿಕೊಡತಕ್ಕದ್ದು ಮತ್ತು ಅವನು ಆಕ್ಷೇಪಣೆಯು ದೃಢಪಟ್ಟಿದೆ ಎಂದು ಪರಿಗಣಿಸಿದರೆ, ಅವನು ಆಕ್ಷೇಪಿತ ವ್ಯಕ್ತಿಗೆ ಮತ ಚಲಾಯಿಸಲು ಬಿಡದೇ ಹೊರಹಾಕತಕ್ಕದ್ದು.

(5) ಪ್ರಿಸೈಡಿಂಗ್ ಅಧಿಕಾರಿಯು, ಆಕ್ಷೇಪಣೆಯು ಕ್ಷುಲ್ಲಕವಾದುದು ಅಥವಾ ಸದ್ಭಾವನೆಯಿಂದ ಮಾಡಲಾಗಿಲ್ಲ ಎಂದು ಅಭಿಪ್ರಾಯಪಟ್ಟರೆ ಅವನು, (1)ನೇ ಉಪ-ನಿಯಮದ ಮೇರೆಗೆ ಮಾಡಲಾದ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ನಿರ್ದೇಶಿಸತಕ್ಕದ್ದು ಮತ್ತು ಯಾವುದೇ ಇತರೆ ಸಂದರ್ಭದಲ್ಲಿ, ವಿಚಾರಣೆಯು ಮುಕ್ತಾಯಗೊಂಡಾಗ ಆಕ್ಷೇಪಣೆ ಎತ್ತಿದವನಿಗೆ ಅದನ್ನು ಹಿಂತಿರುಗಿಸತಕ್ಕದ್ದು.

**56. ಮತ್ತೊಬ್ಬರಂತೆ ನಟಿಸುವವರ ವಿರುದ್ಧ ರಕ್ಷಣೆ:-** (1) ಪ್ರಿಸೈಡಿಂಗ್ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿಯು ಸಂದರ್ಭಾನುಸಾರ, ಯಾವ ಮತದಾರನ ಗುರುತಿನ ಬಗ್ಗೆ ಮನವರಿಕೆ ಮಾಡಿಕೊಂಡಿರುವನೋ ಪ್ರಿಸೈಡಿಂಗ್ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿಯು ಆ ಪ್ರತಿಯೊಬ್ಬ ಮತದಾರನ, ಅವನ ಎಡಗೈ ತೋರು ಬೆರಳನ್ನು ಪರಿಶೀಲಿಸುವುದು ಮತ್ತು ಅದರ ಮೇಲೆ ಸಾಧ್ಯವಾಗಬಹುದಾದಷ್ಟು ಉಗುರಿನ ಬುಡದ ಕೆಳಗೆ ಚರ್ಮ ಮತ್ತು ಉಗುರಿನ ಬುಡದ ನಡುವಿನ ಮೇಲೆಯೂ ಸಹ ಹರಡುವ ಹಾಗೆ ಅಳಿಸಲಾಗದ ಶಾಯಿ ಗುರುತನ್ನು ಹಾಕಲು ಅವಕಾಶ ಮಾಡಿಕೊಡತಕ್ಕದ್ದು.

(2) ಯಾರೇ ಮತದಾರನು, (1)ನೇ ಉಪ-ನಿಯಮದ ಅನುಸಾರವಾಗಿ ತನ್ನ ಎಡಗೈ ತೋರು ಬೆರಳನ್ನು ಪರಿಶೀಲಿಸಲು ಅಥವಾ ಗುರುತು ಮಾಡಿಸಿಕೊಳ್ಳಲು ನಿರಾಕರಿಸಿದರೆ ಅಥವಾ ಈಗಾಗಲೇ ಅವನ ಎಡಗೈ ತೋರು ಬೆರಳಿನ ಮೇಲೆ ಅಂಥ ಗುರುತನ್ನು ಹೊಂದಿದ್ದರೆ ಅಥವಾ ಶಾಯಿ ಗುರುತನ್ನು ಅಳಿಸಿಹಾಕುವ ದೃಷ್ಟಿಯಿಂದ ಯಾವುದೇ ಕೆಲಸವನ್ನು ಮಾಡಿದ್ದರೆ, ಅವನಿಗೆ ಯಾವುದೇ ಮತ ಪತ್ರವನ್ನು ಒದಗಿಸತಕ್ಕದ್ದಲ್ಲ ಅಥವಾ ಮತ ಚಲಾಯಿಸಲು ಅವಕಾಶ ಮಾಡಿಕೊಡತಕ್ಕದ್ದಲ್ಲ.

(3) ಈ ನಿಯಮದಲ್ಲಿ ಮತದಾರನ ಎಡಗೈ ತೋರು ಬೆರಳಿಗೆ ಮಾಡಿದ ಯಾವುದೇ ಉಲ್ಲೇಖವನ್ನು, ಅವನ ಎಡಗೈ ತೋರು ಬೆರಳು ಇಲ್ಲದೆ ಇದ್ದ ಸಂದರ್ಭದಲ್ಲಿ, ಅವನ ಎಡಗೈನ ಯಾವುದೇ ಇತರೆ ಬೆರಳಿಗೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು ಮತ್ತು ಅವನ ಎಡಗೈನ ಎಲ್ಲ ಬೆರಳುಗಳು ಇಲ್ಲದಿದ್ದ ಸಂದರ್ಭದಲ್ಲಿ, ಅವನ ಬಲಗೈನ ತೋರು ಬೆರಳು ಅಥವಾ ಯಾವುದೇ ಇತರ ಬೆರಳಿಗೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು ಮತ್ತು ಅವನ ಎರಡೂ ಕೈಗಳ ಎಲ್ಲ ಬೆರಳುಗಳು ಇಲ್ಲದಿದ್ದ ಸಂದರ್ಭದಲ್ಲಿ, ಅವನು ಹೊಂದಿರುವ ಎಡ ಅಥವಾ ಬಲ ತೋಳಿನ ತುದಿಗೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

**57. ಮತದಾರರಿಗೆ ಮತಪತ್ರಗಳನ್ನು ನೀಡುವುದು.-** (1) ಪ್ರತಿಯೊಂದು ಮತಪತ್ರವನ್ನು ಮತದಾರನಿಗೆ ನೀಡುವ ಮುಂಚೆ ಮತ್ತು ಅದಕ್ಕೆ ಲಗತ್ತಿಸಿದ ಪಕ್ಕ ಪ್ರತಿಯ ಹಿಂಭಾಗದಲ್ಲಿ ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ವಿಶಿಷ್ಟ ಗುರುತಿನ ಮುದ್ರೆಯೊತ್ತತಕ್ಕದ್ದು ಮತ್ತು ಪ್ರತಿಯೊಂದು ಮತಪತ್ರವನ್ನು ನೀಡುವ ಮುಂಚೆ ಅದರ ಹಿಂಭಾಗದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಪೂರ್ಣ ಸಹಿ ಮಾಡಿರತಕ್ಕದ್ದು.

(2) ಮತದಾರನಿಗೆ ಮತಪತ್ರವನ್ನು ನೀಡುವ ಸಮಯದಲ್ಲಿ ಪೋಲಿಂಗ್ ಅಧಿಕಾರಿಯು,-

(ಎ) ಅದರ ಪಕ್ಕ ಪ್ರತಿಯ ಮೇಲೆ, ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿಯಲ್ಲಿ ನಮೂದಿಸಲಾದಂತೆ ಮತದಾರನ ಕ್ರಮ ಸಂಖ್ಯೆಯನ್ನು ದಾಖಲು ಮಾಡತಕ್ಕದ್ದು;

(ಬಿ) ಸದರಿ ಪಕ್ಕ ಪ್ರತಿಯ ಮೇಲೆ ಮತದಾರರ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಳ್ಳತಕ್ಕದ್ದು; ಮತ್ತು

(ಸಿ) ಮತದಾರರ ಪಟ್ಟಿಯ ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿಯಲ್ಲಿ ಆ ಮತದಾರನಿಗೆ ನೀಡಲಾದ ಮತಪತ್ರದ ಕ್ರಮಸಂಖ್ಯೆಯನ್ನು ದಾಖಲಿಸದೆ, ಮತಪತ್ರವನ್ನು ಅವನಿಗೆ ನೀಡಲಾಗಿದೆ ಎಂದು ಸೂಚಿಸಲು ಮತದಾರನ ಹೆಸರನ್ನು ಗುರುತು ಮಾಡತಕ್ಕದ್ದು:

ಪರಂತು, ಮತದಾರನಿಗೆ, ಆ ಮತಪತ್ರದ ಪಕ್ಕ ಪ್ರತಿಯ ಮೇಲೆ ಅವನು ಸಹಿ ಮಾಡಿದ ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕಿದ ಹೊರತು ಯಾವುದೇ ಮತಪತ್ರವನ್ನು ನೀಡತಕ್ಕದ್ದಲ್ಲ.

(3) ಪಕ್ಕ ಪ್ರತಿಯ ಮೇಲೆ ಮತದಾರನ ಹೆಬ್ಬೆಟ್ಟಿನ ಗುರುತನ್ನು ಅಧಿಪ್ರಮಾಣಿಸುವುದು ಯಾರೇ ಪ್ರಿಸೈಡಿಂಗ್ ಅಧಿಕಾರಿ ಅಥವಾ ಯಾರೇ ಪೋಲಿಂಗ್ ಅಧಿಕಾರಿ ಅಥವಾ ಯಾರೇ ಇತರೆ ಅಧಿಕಾರಿಗೆ ಅದು ಅಗತ್ಯವಾಗಿರತಕ್ಕದ್ದಲ್ಲ.

(4) ಮತದಾನ ಕೇಂದ್ರದಲ್ಲಿನ ಯಾರೇ ವ್ಯಕ್ತಿಯು, ನಿರ್ದಿಷ್ಟ ಮತದಾರರಿಗೆ ನೀಡಲಾದ ಮತಪತ್ರಗಳ ಕ್ರಮ ಸಂಖ್ಯೆಗಳನ್ನು ಬರೆದುಕೊಳ್ಳತಕ್ಕದ್ದಲ್ಲ.

**58. ಮತದಾನ ಕೇಂದ್ರದೊಳಗೆ ಮತದಾರರು ಮತದಾನ ಗೋಪ್ಯತೆಯನ್ನು ಕಾಪಾಡುವುದು ಮತ್ತು ಮತದಾನದ ಬಗೆಗಿನ ಪ್ರಕ್ರಿಯೆ.-** (1) ನಿಯಮ 57ರ ಅಡಿಯಲ್ಲಿ ಅಥವಾ ಈ ನಿಯಮಗಳ ಇತರೆ ಯಾವುದೇ ಉಪಬಂಧದ ಮೇರೆಗೆ ಮತಪತ್ರವನ್ನು ಯಾರಿಗೆ ಕೊಡಲಾಗಿದೆಯೋ ಆ ಪ್ರತಿಯೊಬ್ಬ ಮತದಾರನು, ಮತದಾನ ಕೇಂದ್ರದೊಳಗೆ ಮತದಾನ ಗೋಪ್ಯತೆಯನ್ನು ಕಾಪಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ, ಇದರಲ್ಲಿ ಇನ್ನುಮುಂದೆ ಹೇಳಲಾದ ಮತದಾನದ ಬಗೆಗಿನ ಪ್ರಕ್ರಿಯೆಯನ್ನು ಪಾಲಿಸತಕ್ಕದ್ದು.

(2) ಮತದಾರನು ಮತಪತ್ರವನ್ನು ಸ್ವೀಕರಿಸಿದ ಕೂಡಲೇ,-

(i) ಮತ ಚಲಾಯಿಸಲು ಇರುವ ಮತದಾನ ಅಂಕಣ(ಕಂಪಾರ್ಟ್‌ಮೆಂಟ್)ಕ್ಕೆ ಹೋಗತಕ್ಕದ್ದು;

(ii) ಅವನು ಯಾರಿಗೆ ಮತ ಹಾಕಲು ಉದ್ದೇಶಿಸಿರುವನೋ ಆ ಅಭ್ಯರ್ಥಿಯ ಚಿಹ್ನೆಯ ಮೇಲೆ ಅಥವಾ ಪಕ್ಕದಲ್ಲಿ ಆ ಉದ್ದೇಶಕ್ಕಾಗಿ ಒದಗಿಸಲಾದ ಸಾಧನದಿಂದ ಮತಪತ್ರದ ಮೇಲೆ ಗುರುತು ಮಾಡತಕ್ಕದ್ದು;

(iii) ಅವರ ಮತವನ್ನು ಗುಟ್ಟಾಗಿರುವ ಹಾಗೆ ಮತಪತ್ರವನ್ನು ಮಡಿಚತಕ್ಕದ್ದು;

(iv) ಅಗತ್ಯವಿದ್ದರೆ, ಪ್ರಿಸೈಡಿಂಗ್ ಅಧಿಕಾರಿಗೆ ಮತಪತ್ರದ ಮೇಲಿನ ವಿಶಿಷ್ಟ ಗುರುತನ್ನು ತೋರಿಸತಕ್ಕದ್ದು;

(v) ಮಡಿಚಿದ ಮತಪತ್ರವನ್ನು ಮತ ಪೆಟ್ಟಿಗೆಯೊಳಗೆ ಹಾಕತಕ್ಕದ್ದು; ಮತ್ತು

(vi) ಮತದಾನ ಕೇಂದ್ರದಿಂದ ಹೊರಹೋಗತಕ್ಕದ್ದು.

(3) ಪ್ರತಿಯೊಬ್ಬ ಮತದಾರನು ವಿನಾಕಾರಣ ವಿಳಂಬ ಮಾಡದೆ ಮತ ಚಲಾಯಿಸತಕ್ಕದ್ದು.

(4) ಬೇರೊಬ್ಬ ಮತದಾರನು ಮತದಾನದ ಅಂಕಣದ ಒಳಗಡೆ ಇರುವಾಗ ಯಾರೇ ಮತದಾರನು ಮತದಾನದ ಅಂಕಣದೊಳಗೆ (ಕಂಪಾರ್ಟ್‌ಮೆಂಟ್) ಪ್ರವೇಶಿಸಲು ಅವಕಾಶ ಮಾಡಿಕೊಡತಕ್ಕದ್ದಲ್ಲ.

(5) ಮತಪತ್ರವನ್ನು ಯಾರಿಗೆ ನೀಡಲಾಗಿದೆಯೋ ಆ ಮತದಾರನು, ಪ್ರಿಸೈಡಿಂಗ್ ಅಧಿಕಾರಿಯು ಎಚ್ಚರಿಕೆ ನೀಡಿದ ತರುವಾಯ, (2)ನೇ ಉಪ-ನಿಯಮದಲ್ಲಿ ಹೇಳಲಾದಂತಹ ಪ್ರಕ್ರಿಯೆಯನ್ನು ಪಾಲಿಸಲು ನಿರಾಕರಿಸಿದರೆ, ಅವನಿಗೆ ನೀಡಲಾದ ಮತಪತ್ರವನ್ನು, ಅದರ ಮೇಲೆ ಅವನು ಮತವನ್ನು ದಾಖಲಿಸಿರಲಿ ಅಥವಾ ದಾಖಲಿಸದಿರಲಿ, ಪ್ರಿಸೈಡಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯ ನಿರ್ದೇಶನದ ಮೇರೆಗೆ ಪೋಲಿಂಗ್ ಅಧಿಕಾರಿಯು ಅವನಿಂದ ಅದನ್ನು ವಾಪಸ್ಸು ತೆಗೆದುಕೊಳ್ಳತಕ್ಕದ್ದು.

(6) ಮತಪತ್ರವನ್ನು ವಾಪಸ್ಸು ಪಡೆದ ತರುವಾಯ, ಪ್ರಿಸೈಡಿಂಗ್ ಅಧಿಕಾರಿಯು, "ರದ್ದುಪಡಿಸಲಾಗಿದೆ; ಮತದಾನ ಪ್ರಕ್ರಿಯೆಯನ್ನು ಉಲ್ಲಂಘಿಸಲಾಗಿದೆ" ಎಂಬ ಪದಗಳನ್ನು ಅದರ ಹಿಂಭಾಗದಲ್ಲಿ ದಾಖಲಿಸತಕ್ಕದ್ದು ಮತ್ತು ಆ ಪದಗಳ ಕೆಳಗೆ ತನ್ನ ಸಹಿಯನ್ನು ಹಾಕತಕ್ಕದ್ದು.

(7) "ರದ್ದುಪಡಿಸಲಾಗಿದೆ; ಮತದಾನ ಪ್ರಕ್ರಿಯೆಯನ್ನು ಉಲ್ಲಂಘಿಸಲಾಗಿದೆ" ಎಂಬ ಪದಗಳನ್ನು ದಾಖಲು ಮಾಡಿರುವಂಥ ಎಲ್ಲ ಮತಪತ್ರಗಳನ್ನು ಪ್ರತ್ಯೇಕವಾದ ಲಕೋಟೆಯಲ್ಲಿಡತಕ್ಕದ್ದು. ಅದರ ಮೇಲ್ಭಾಗದಲ್ಲಿ "ಮತ ಪತ್ರಗಳು; ಮತದಾನ ಪ್ರಕ್ರಿಯೆಯನ್ನು ಉಲ್ಲಂಘಿಸಲಾಗಿದೆ" ಎಂಬ ಪದಗಳನ್ನು ಬರೆಯತಕ್ಕದ್ದು.

(8) ಉಪ-ನಿಯಮದ (5)ರ ಮೇರೆಗೆ ಯಾವ ಮತದಾರನಿಂದ ಮತಪತ್ರವನ್ನು ವಾಪಸ್ಸು ಪಡೆದುಕೊಳ್ಳಲಾಗಿದೆಯೋ ಆ ಮತದಾರನು ಹೊಣೆಯಾಗಬಹುದಾದಂಥ ಯಾವುದೇ ಇತರೆ ದಂಡನೆಗೆ ಬಾಧಕವಾಗದಂತೆ, ಅಂಥ ಮತಪತ್ರದ ಮೇಲೆ ಯಾವುದಾದರೂ ಮತವತ್ರವನ್ನು ದಾಖಲಿಸಿದ್ದರೆ ಅದನ್ನು ಎಣಿಕೆ ಮಾಡತಕ್ಕದ್ದಲ್ಲ

**59. ಅಂಧ ಅಥವಾ ದುರ್ಬಲ ಮತದಾರರ ಮತಗಳ ದಾಖಲಾತಿ.-** (1) ಪಿಸೈಡಿಂಗ್ ಅಧಿಕಾರಿಗೆ ಮತದಾರನು ಅಂಧತ್ವ ಅಥವಾ ದೈಹಿಕ ದುರ್ಬಲತೆಯಿಂದಾಗಿ ಮತಪತ್ರದ ಮೇಲಿನ ಚಿಹ್ನೆಗಳನ್ನು ಗುರುತಿಸಲು ಅಥವಾ ಸಹಾಯವಿಲ್ಲದೆ ಅದರ ಮೇಲೆ ಗುರುತು ಮಾಡಲು ಅಸಮರ್ಥನೆಂದು ಮನದಟ್ಟಾದರೆ, ಪ್ರಿಸೈಡಿಂಗ್ ಅಧಿಕಾರಿಯು, ಅವನ ಪರವಾಗಿ ಮತ್ತು ಅವನ ಇಚ್ಛಾನುಸಾರವಾಗಿ ಮತಪತ್ರದ ಮೇಲೆ ಮತವನ್ನು ದಾಖಲಿಸುವುದಕ್ಕಾಗಿ ಮತ್ತು ಅಗತ್ಯವಿದ್ದರೆ ಮತವನ್ನು ಗುಟ್ಟಾಗಿರುವ ಹಾಗೆ ಮತಪತ್ರವನ್ನು ಮಡಚುವುದಕ್ಕಾಗಿ ಹದಿನೆಂಟು ವರ್ಷಗಳ ವಯಸ್ಸಿಗಿಂತ ಕಡಿಮೆಯಿರದ ಒಬ್ಬ ಜೊತೆಗಾರನನ್ನು ಅವನೊಂದಿಗೆ ಮತದಾನದ ಅಂಕಣಕ್ಕೆ (ಕಂಪಾರ್ಟ್‌ಮೆಂಟ್‌ಗೆ) ಕಳುಹಿಸಲು ಮತದಾರನಿಗೆ ಅನುಮತಿಸತಕ್ಕದ್ದು:

ಪರಂತು, ಯಾವುದೇ ಮತದಾನ ಕೇಂದ್ರದಲ್ಲಿ ಅದೇ ದಿನದಂದು ಒಬ್ಬರಿಗಿಂತ ಹೆಚ್ಚು ಮತದಾರರ ಜೊತೆಗಾರನಂತೆ ಕಾರ್ಯನಿರ್ವಹಿಸಲು ಯಾರೇ ವ್ಯಕ್ತಿಗೆ ಅನುಮತಿ ನೀಡತಕ್ಕದ್ದಲ್ಲ.

ಮತ್ತು ಪರಂತು, ಯಾರೇ ವ್ಯಕ್ತಿಯನ್ನು ಈ ನಿಯಮದ ಮೇರೆಗೆ ಯಾವುದೇ ದಿನದಂದು ಮತದಾರನ ಜೊತೆಗಾರನಾಗಿ ಕಾರ್ಯನಿರ್ವಹಿಸಲು ಅನುಮತಿಸುವ ಮುಂಚೆ, ಮತದಾರನ ಪರವಾಗಿ ಅವನು ದಾಖಲಿಸಿದ ಮತಗಳ ಗೌಪ್ಯತೆಯನ್ನು ಕಾಪಾಡತಕ್ಕದ್ದೆಂದು ಮತ್ತು ಅವನು ಆ ದಿನದಂದು ಯಾವುದೇ ಮತದಾನ ಕೇಂದ್ರದಲ್ಲಿ ಯಾವುದೇ ಇತರ ಮತದಾರನ ಜೊತೆಗಾರನಾಗಿ ಈಗಾಗಲೇ ಕಾರ್ಯನಿರ್ವಹಿಸಲಾಗಿಲ್ಲ ಎಂಬ ಬಗ್ಗೆ ಘೋಷಣೆ ಮಾಡುವಂತೆ ಆತನನ್ನು ಆಗತ್ಯಪಡಿಸತಕ್ಕದ್ದು.

(2) ಪ್ರಿಸೈಡಿಂಗ್ ಅಧಿಕಾರಿಯು, ಈ ನಿಯಮದ ಮೇರೆಗೆ ಎಲ್ಲ ಪ್ರಕರಣಗಳನ್ನು ನಮೂನೆ-18ರಲ್ಲಿ ದಾಖಲಿಸಿಡತಕ್ಕದ್ದು.

**60. ಟೆಂಡರ್ಡ್ ಮತಗಳು.-** (1) 'ವ್ಯಕ್ತಿಯು ಬೇರೊಬ್ಬ ವ್ಯಕ್ತಿಯು ಅಂಥ ಮತದಾರನಾಗಿ ಅದಾಗಲೇ ಮತ ಚಲಾಯಿಸಿ ಹೋದ ತರುವಾಯ ಮತಪತ್ರಕ್ಕಾಗಿ ಕೇಳಿದರೆ ಅವನು, ಅವನ ಗುರುತಿಗೆ ಸಂಬಂಧಿಸಿದಂತೆ ಪ್ರಿಸೈಡಿಂಗ್ ಅಧಿಕಾರಿಯು ಕೇಳಬಹುದಾದಂಥ ಪ್ರಶ್ನೆಗಳಿಗೆ ತೃಪ್ತಿಕರವಾಗಿ ಉತ್ತರಿಸಿದ ಮೇಲೆ, ಈ ನಿಯಮದ ಉಪಬಂಧಗಳಿಗೊಳಪಟ್ಟು ಮತಪತ್ರಕ್ಕೆ, (ಇದರಲ್ಲಿ ಇನ್ನು ಮುಂದೆ ಈ ನಿಯಮಗಳಲ್ಲಿ 'ಟೆಂಡರ್ಡ್ ಮತಪತ್ರ' ವೆಂದು ಉಲ್ಲೇಖಿಸಲಾಗಿದೆ) ಯಾರೇ ಇತರ ಮತದಾರನ ಹಾಗೆ ಗುರುತು ಮಾಡಲು ಹಕ್ಕುಳ್ಳವನಾಗಿರತಕ್ಕದ್ದು.

(2) ಅಂಥ ಪ್ರತಿಯೊಬ್ಬ ವ್ಯಕ್ತಿಯು, ನೀಡಲಾದ ಮತಪತ್ರಗಳನ್ನು ಕೊಡುವುದಕ್ಕೆ ಮುಂಚೆ, ನಮೂನೆ-19 ರಲ್ಲಿ, ಅವನಿಗೆ ಸಂಬಂಧಪಟ್ಟ ನಮೂದಿನ ಎದುರು ಅವನ ಹೆಸರು ಮತ್ತು ಸಹಿ ಮಾಡತಕ್ಕದ್ದು.

(3) ಮತದಾನದಲ್ಲಿ ಬಳಸಲಾದ ಇತರ ಮತಪತ್ರಗಳಂತಯೇ ಮತಪತ್ರಗಳಾಗಿರತಕ್ಕದ್ದು,-

(ಎ) ನೀಡಲಾದ ಅಂಥ ಮತಪತ್ರವು ಅನುಕ್ರಮವಾಗಿ ಮತದಾನ ಕೇಂದ್ರದಲ್ಲಿ ಬಳಸುವುದಕ್ಕಾಗಿ ನೀಡಲಾದ ಮತಪತ್ರಗಳ ಬಂಡಲ್‌ನಲ್ಲಿ ಕೊನೆಯದಾಗಿರತಕ್ಕದ್ದು; ಮತ್ತು

(ಬಿ) ಹಾಗೆ ನೀಡಲಾದ ಮತಪತ್ರ ಮತ್ತು ಅದರ ಪಕ್ಕ ಪ್ರತಿಯ ಹಿಂಭಾಗದ ಮೇಲೆ ಪ್ರಿಸೈಡಿಂಗ್ ಅಧಿಕಾರಿಯು ತನ್ನ ಸ್ವಹಸ್ತದಲ್ಲಿ "ಟೆಂಡರ್ಡ್ ಮತಪತ್ರ" ಎಂಬ ಪದಗಳನ್ನು ಹಿಂಬರಹ ಮಾಡತಕ್ಕದ್ದು ಮತ್ತು ಅವನು ಸಹಿ ಮಾಡತಕ್ಕದ್ದು.

(4) ಮತದಾರನು, ಮತದಾನದ ಅಂಕಣದಲ್ಲಿ (ಕಂಪಾರ್ಟ್‌ಮೆಂಟ್) ಟೆಂಡರ್ಡ್ ಮತಪತ್ರವನ್ನು ಗುರುತು ಮಾಡಿದ ಮತ್ತು ಅದನ್ನು ಮಡಿಚಿದ ತರುವಾಯ, ಅದನ್ನು ಮತಪೆಟ್ಟಿಗೆಯೊಳಗೆ ಹಾಕುವುದಕ್ಕೆ, ಬದಲಾಗಿ ಅವನ್ನು ಪ್ರಿಸೈಡಿಂಗ್ ಅಧಿಕಾರಿಗೆ ನೀಡತಕ್ಕದ್ದು. ಅವರು ಆ ಉದ್ದೇಶಕ್ಕಾಗಿ ವಿಶೇಷವಾಗಿ ಇಡಲಾದ ಲಕೋಟೆಯಲ್ಲಿ ಅದನ್ನು ಇಡತಕ್ಕದು.

**61. ಮತದಾನದ ಮುಕ್ತಾಯ.-** (1) ಪ್ರಿಸೈಡಿಂಗ್ ಅಧಿಕಾರಿಯು, ಆ ಬಗ್ಗೆ ನಿಗದಿಪಡಿಸಿದ ವೇಳೆಯಲ್ಲಿ ಮತದಾನ ಕೇಂದ್ರವನ್ನು ಮುಚ್ಚತಕ್ಕದ್ದು ಮತ್ತು ತದನಂತರ ಮತದಾನ ಕೇಂದ್ರಕ್ಕ ಯಾರೇ ಮತದಾರನಿಗೆ ಪ್ರವೇಶ ನೀಡತಕ್ಕದ್ದಲ್ಲ:

ಪರಂತು, ಅದನ್ನು ಮುಚ್ಚುವ ಮುಂಚೆ ಮತದಾನ ಕೇಂದ್ರದಲ್ಲಿ ಹಾಜರಿರುವ ಎಲ್ಲಾ ಮತದಾರರಿಗೆ, ಅವರ ಮತಗಳನ್ನು ಚಲಾಯಿಸಲು ಅವಕಾಶ ನೀಡತಕ್ಕದ್ದು.

(2) ಅದನ್ನು ಮುಚ್ಚುವ ಮುಂಚೆ ಮತದಾನ ಕೇಂದ್ರದಲ್ಲಿ ಒಬ್ಬ ಮತದಾರನು ಹಾಜರಿದ್ದು ಯಾವುದೇ ಪ್ರಶ್ನೆಯನ್ನು ಎತ್ತಿದರೆ, ಅದನ್ನು ಪ್ರಿಸ್ಕೆಡಿಂಗ್ ಅಧಿಕಾರಿಯು ತೀರ್ಮಾನಿಸತಕ್ಕದ್ದು ಮತ್ತು ಅವನ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**62. ಮತದಾನದ ತರುವಾಯ ಮತವೆಟ್ಟಿಗೆಗಳನ್ನು ಮೊಹರು ಮಾಡುವುದು.-** (1) ಮತದಾನ ಮುಕ್ತಾಯದ ತರುವಾಯ, ಕಾರ್ಯಸಾಧ್ಯವಾದಷ್ಟು ಬೇಗನೆ, ಪ್ರಿಸೈಡಿಂಗ್ ಅಧಿಕಾರಿಯು ಮತಪಟ್ಟಿಗೆ ರಂಧ್ರವನ್ನು ಮುಚ್ಚತಕ್ಕದ್ದು ಮತ್ತು ರಂಧ್ರವನ್ನು ಮುಚ್ಚುವುದಕ್ಕಾಗಿ ಪೆಟ್ಟಿಗೆಯು ಯಾವುದೇ ಯಾಂತ್ರಿಕ ಸಾಧನವನ್ನು ಒಳಗೊಂಡಿರದಿದ್ದಲ್ಲಿ ಅವನು ರಂಧ್ರವನ್ನು ಮೊಹರು ಮಾಡತಕ್ಕದ್ದು ಮತ್ತು ಅವನ ಸೀಲ್(ಮುದ್ರೆ) ಹಾಕಲು ಯಾರೇ ಮತದಾನ ಏಜೆಂಟನಿಗೂ ಸಹ ಅವಕಾಶ ಮಾಡಿಕೊಡತಕ್ಕದ್ದು.

(2) ಆ ತರುವಾಯ ಮತಪೆಟ್ಟಿಗೆಯನ್ನು ಮೊಹರು ಮಾಡತಕ್ಕದ್ದು ಮತ್ತು ಭದ್ರಪಡಿಸತಕ್ಕದ್ದು.

(3) ಮೊದಲನೆ ಮತಪೆಟ್ಟಿಗೆ ಪೂರ್ತಿಯಾಗಿ ತುಂಬಿದ ಕಾರಣದಿಂದ ಎರಡನೇ ಪೆಟ್ಟಿಗೆಯನ್ನು ಉಪಯೋಗಿಸುವುದು ಅಗತ್ಯವಾಗಿದ್ದಲ್ಲಿ ಮೊದಲನೆ ಮತಪಟ್ಟಿಗೆಯನ್ನು ಯಾವುದೇ ಇತರೆ ಮತ ಪೆಟ್ಟಿಗೆಯನ್ನು ಉಪಯೋಗಿಸುವುದಕ್ಕೆ ಮುಂಚೆ (1) ಮತ್ತು (2)ನೇ ಉಪ-ನಿಯಮಗಳಲ್ಲಿ ಉಪಬಂಧಿಸಿದಂತೆ ಮುಚ್ಚತಕ್ಕದ್ದು ಮೊಹರು ಮಾಡತಕ್ಕದ್ದು ಮತ್ತು ಭದ್ರಪಡಿಸತಕ್ಕದ್ದು.

**63. ಮತಪತ್ರಗಳ ಲೆಕ್ಕ.-** (1) ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ಮುಕ್ತಾಯದಲ್ಲಿ, ನಮೂನೆ-20ರಲ್ಲಿ ಮತಪತ್ರ ಲೆಕ್ಕವನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರ ಮೇಲೆ "ಮತಪತ್ರ ಲೆಕ್ಕ" ಎಂಬ ಮೇಲ್ಬರಹ ಪದಗಳಿರುವಂತೆ ಪ್ರತ್ಯೇಕ ಲಕೋಟೆಯಲ್ಲಿ ಅದನ್ನು ಇಡತಕ್ಕದ್ದು.

(2) ಪ್ರಿಸೈಡಿಂಗ್ ಅಧಿಕಾರಿಯು, ಮತದಾನ ಮುಕ್ತಾಯವಾದ ಮೇಲೆ ಹಾಜರಿರುವ ಪ್ರತಿಯೊಬ್ಬ ಪೋಲಿಂಗ್ ಏಜೆಂಟನಿಗೆ, ಮತಪತ್ರ ಲೆಕ್ಕದಲ್ಲಿ ಮಾಡಿದ ನಮೂದುಗಳ ಯಥಾಪ್ರತಿಯನ್ನು ಅದಕ್ಕಾಗಿ ಸದರಿ ಪೋಲಿಂಗ್ ಏಜೆಂಟ್‌ನಿಂದ ಸ್ವೀಕೃತಿಯನ್ನು ಪಡೆದ ತರುವಾಯ ಮತಪತ್ರ ಲೆಕ್ಕವನ್ನು ನೀಡತಕ್ಕದ್ದು ಮತ್ತು ಅದನ್ನು ಯಥಾಪ್ರತಿಯೆಂದು ಸಹ ಅನುಪ್ರಮಾಣಿಸತಕ್ಕದ್ದು.

**64. ಹಾಳಾದ ಮತ್ತು ಹಿಂದಿರುಗಿಸಿದ ಮತಪತ್ರಗಳು.-** (1) ಮತದಾರನು ಮತಪತ್ರವನ್ನು ಮತಪತ್ರದಂತೆ ಅನುಕೂಲಕರವಾಗಿ ಬಳಸದೆ ಅದನ್ನು ಅಜಾಗರೂಕತೆಯಿಂದ ಬಳಸಿ ಪ್ರಿಸೈಡಿಂಗ್ ಅಧಿಕಾರಿಗೆ ಅದನ್ನು ಹಿಂದಿರುಗಿಸಿದ ಮೇಲೆ ಮತ್ತು ಆ ಅಜಾಗರೂಕತೆಯನ್ನು ಅವನಿಗೆ ಮನದಟ್ಟು ಮಾಡಿದ ಮೇಲೆ ಬೇರೊಂದು ಮತಪತ್ರವನ್ನು ನೀಡಬಹುದು ಮತ್ತು ಹಾಗೆ ಹಿಂದಿರುಗಿಸಿದ ಮತಪತ್ರ ಹಾಗೂ ಅಂಥ ಮತಪತ್ರದ ಪಕ್ಕ ಪ್ರತಿಯ ಮೇಲೆ "ಹಾಳಾದ-ರದ್ದುಗೊಳಿಸಿದ" ಎಂದು ಪ್ರಿಸೈಡಿಂಗ್ ಅಧಿಕಾರಿಯು ಗುರುತು ಮಾಡತಕ್ಕದ್ದು.

(2) ಮತದಾರನು ಮತಪತ್ರವನ್ನು ಪಡೆದುಕೊಂಡ ತರುವಾಯ, ಅದನ್ನು ಉಪಯೋಗಿಸಿಲ್ಲ ಎಂದು ತೀರ್ಮಾನಿಸಿದರೆ, ಅವನು ಅದನ್ನು ಪ್ರಿಸೈಡಿಂಗ್ ಅಧಿಕಾರಿಗೆ ಹಿಂದಿರುಗಿಸತಕ್ಕದ್ದು ಮತ್ತು ಹಾಗೆ ಹಿಂದಿರುಗಿಸಿದ ಮತಪತ್ರ ಮತ್ತು ಅಂಥ ಮತಪತ್ರದ ಪಕ್ಕ ಪ್ರತಿಯ ಮೇಲೆ ಪ್ರಿಸೈಡಿಂಗ್ ಅಧಿಕಾರಿಯು "ಹಿಂದಿರುಗಿಸಿರುವುದು-ರದ್ದುಪಡಿಸಿರುವುದು" ಎಂದು ಗುರುತು ಮಾಡತಕ್ಕದ್ದು.

(3) ಉಪ-ನಿಯಮ (1) ಅಥವಾ ಉಪ-ನಿಯಮ (2) ರ ಅಡಿಯಲ್ಲಿ ರದ್ದಾದ ಎಲ್ಲ ಮತಪತ್ರಗಳನ್ನು ಪ್ರತ್ಯೇಕ ಲಕೋಟೆಯಲ್ಲಿಡತಕ್ಕದ್ದು.

**65. ಇತರೆ ಪ್ಯಾಕೆಟ್‌ಗಳನ್ನು ಮೊಹರು ಮಾಡುವುದು.–** (1) ನಂತರ,ಪ್ರಿಸೈಡಿಂಗ್ ಅಧಿಕಾರಿಯು,-

(ಎ) ಗುರುತು ಮಾಡಲಾಗಿರುವ ಮತದಾರರ ಪಟ್ಟಿಯ ಪ್ರತಿ;
(ಬಿ) ಬಳಸಲಾದ ಮತಪತ್ರಗಳ ಪಕ್ಕ ಪ್ರತಿಗಳು;
(ಸಿ) ಪ್ರಿಸೈಡಿಂಗ್ ಅಧಿಕಾರಿಯು ಪೂರ್ಣವಾಗಿ ಸಹಿ ಮಾಡಿರುವ ಆದರೆ ಮತದಾರರಿಗೆ ನೀಡದಿರುವ ಮತಪತ್ರ;
(ಡಿ) ಮತದಾರರಿಗೆ ನೀಡದಿರುವ ಯಾವುದೇ ಇತರ ಮತಪತ್ರಗಳು;
(ಇ) 58ನೇ ನಿಯಮದ ಮೇರೆಗೆ ಮತದಾನ ಪ್ರಕ್ರಿಯೆಯ ಉಲ್ಲಂಘನೆಗಾಗಿ ರದ್ದುಪಡಿಸಿದ ಮತಪತ್ರಗಳು;
(ಎಫ್) ಯಾವುದೇ ಇತರೆ ರದ್ದುಪಡಿಸಿದ ಮತಪತ್ರಗಳು;
(ಜಿ) ಟೆಂಡರ್ಡ್ ಮತಪತ್ರಗಳನ್ನು ಒಳಗೊಂಡಿರುವ ಲಕೋಟೆ ಮತ್ತು ನಮೂನೆ-19 ರಲ್ಲಿನ ಪಟ್ಟಿ;
(ಎಚ್) ಆಕ್ಷೇಪಿತ ಮತಗಳ ಪಟ್ಟಿ; ಮತ್ತು
(ಐ) ಮೊಹರು ಮಾಡಿದ ಲಕೋಟೆಯಲ್ಲಿಡಬಹುದಾದ ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಿದ ಯಾವುದೇ ಇತರೆ ಪತ್ರಗಳು.

- ಇವುಗಳನ್ನು ಪ್ರತ್ಯೇಕ ಲಕೋಟೆಯನ್ನಾಗಿ ಮಾಡತಕ್ಕದ್ದು.

(2) ಅಂಥ ಪ್ರತಿಯೊಂದು ಪ್ಯಾಕೇಟ್ ಮೇಲೆ ಪ್ರಿಸೈಡಿಂಗ್ ಅಧಿಕಾರಿಯ ಸೀಲ್‌ನೊಂದಿಗೆ ಮೊಹರು ಮಾಡತಕ್ಕದ್ದು ಮತ್ತು ಮತದಾನ ಕೇಂದ್ರದಲ್ಲಿ ಹಾಜರಿರುವ ಉಮೇದುದಾರ ಅಥವಾ ಅವನ ಚುನಾವಣಾ ಏಜೆಂಟ್ ಅಥವಾ ಪೋಲಿಂಗ್ ಏಜೆಂಟ್‌ನಾಗಲಿ ಅದರ ಮೇಲೆ ತನ್ನ ಮೊಹರನ್ನು ಹಾಕಲು ಇಚ್ಛಿಸಬಹುದು.

**66. ರಿಟರ್ನಿಂಗ್ ಅಧಿಕಾರಿಗೆ ಮತ ಪೆಟ್ಟಿಗೆಗಳು, ಮೊದಲಾದವುಗಳನ್ನು ಕಳುಹಿಸುವುದು.-** (1) ಅನಂತರ ಪ್ರಿಸೈಡಿಂಗ್ ಅಧಿಕಾರಿಯು ರಿಟರ್ನಿಂಗ್ ಅಧಿಕಾರಿಯು ನಿರ್ದೇಶಿಸಬಹುದಾದಂಥ ಸ್ಥಳದಲ್ಲಿ ರಿಟರ್ನಿಂಗ್ ಅಧಿಕಾರಿಗೆ ಕೆಳಕಂಡವುಗಳನ್ನು ತಲುಪಿಸತಕ್ಕದ್ದು ಅಥವಾ ತಲುಪಿಸುವಂತೆ ಮಾಡತಕ್ಕದ್ದು,-

(ಎ) ಮತ ಪೆಟ್ಟಿಗೆಗಳು;
(ಬಿ) ಮತಪತ್ರದ ಲೆಕ್ಕ;

(ಸಿ) 65ನೇ ನಿಯಮದಲ್ಲಿ ಉಲ್ಲೇಖಿಸಿದ ಮೊಹರು ಮಾಡಿದ ಪ್ಯಾಕೆಟ್‌ಗಳು; ಮತ್ತು
(ಡಿ) ಮತದಾನದಲ್ಲಿ ಬಳಸಿದ ಎಲ್ಲ ಇತರೆ ಪತ್ರಗಳು.

(2) ರಿಟರ್ನಿಂಗ್ ಅಧಿಕಾರಿಯು ಮತಗಳ ಎಣಿಕೆ ಪ್ರಾರಂಭವಾಗುವವರೆಗೆ ಎಲ್ಲಾ ಮತಪೆಟ್ಟಿಗೆಗಳು, ಪ್ಯಾಕೆಟ್‌ಗಳು ಮತ್ತು ಇತರೆ ಪತ್ರಗಳ ಸುರಕ್ಷಿತ ಸಾಗಣೆಗಾಗಿ ಮತ್ತು ಅವುಗಳ ಸುರಕ್ಷಿತ ಅಭಿರಕ್ಷೆಗಾಗಿ ಸಾಕಷ್ಟು ವ್ಯವಸ್ಥೆಗಳನ್ನು ಮಾಡತಕ್ಕದ್ದು.

**67. ಮತ ಎಣಿಕೆ ಏಜೆಂಟ್ ನೇಮಕಾತಿ.**- (1) ಸ್ಪರ್ಧಿಸುವ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟನು ಅವನು ಅಭ್ಯರ್ಥಿಯಾಗಿರುವ ವಾರ್ಡಿನ ಮತಗಳ ಎಣಿಕೆಯ ಸಮಯದಲ್ಲಿ ಅವನ ಏಜೆಂಟಾಗಿ ಹಾಜರಿರಲು, ಎಣಿಕೆಗಾಗಿ ನಿಗದಿಪಡಿಸಿದ ಸ್ಥಳ ಅಥವಾ ಪ್ರತಿಯೊಂದು ಸ್ಥಳದಲ್ಲಿ, ಪ್ರತಿಯೊಂದು ಎಣಿಕೆ ಟೇಬಲ್‌ಗೆ ಸಂಬಂಧಿಸಿದಂತೆ ಒಬ್ಬರಿಗಿಂತ ಹೆಚ್ಚಿರದ ಮತ ಎಣಿಕೆ ಏಜೆಂಟರನ್ನು ನೇಮಕ ಮಾಡಬಹುದು.

(2) ಅಂಥ ಪ್ರತಿಯೊಂದು ನೇಮಕಾತಿಯನ್ನು ನಮೂನ-21ರಲ್ಲಿ ಮಾಡತಕ್ಕದ್ದು ಮತ್ತು ಅದರ ಒಂದು ಪ್ರತಿಯನ್ನು ರಿಟರ್ನಿಂಗ್ ಅಧಿಕಾರಿಗೆ ಕಳುಹಿಸತಕ್ಕದ್ದು, ಮತ್ತೊಂದು ಪ್ರತಿಯನ್ನು ಮತಗಳ ಎಣಿಕೆಗಾಗಿ ನಿಗದಿಪಡಿಸಿದ ಅವಧಿಯ ಮುಂಚೆ ಒಂದು ಗಂಟೆಯನ್ನು ಮೀರದಂತೆ ರಿಟರ್ನಿಂಗ್ ಅಧಿಕಾರಿಯ ಮುಂದೆ ಹಾಜರುಪಡಿಸುವುದಕ್ಕಾಗಿ ಮತ ಎಣಿಕೆ ಏಜೆಂಟ್‌ಗೆ ನೀಡತಕ್ಕದ್ದು.

(3) ಯಾರೇ ಮತ ಎಣಿಕೆ ಏಜೆಂಟ್‌ನನ್ನು ಅದರಲ್ಲಿರುವ ಘೋಷಣೆಗೆ ಕ್ರಮಬದ್ಧವಾಗಿ ಭರ್ತಿ ಮಾಡಿದ ಮತ್ತು ಸಹಿ ಮಾಡಿದ ಹಾಗೂ ಮತ ಎಣಿಕೆಗಾಗಿ ನಿಗದಿಪಡಿಸಿದ ಸ್ಥಳಕ್ಕೆ ಪ್ರವೇಶಿಸಲು ಅಧಿಕಾರ ಪತ್ರವನ್ನು ರಿಟರ್ನಿಂಗ್ ಅಧಿಕಾರಿಯಿಂದ ಸ್ವೀಕರಿಸಿದ ತರುವಾಯ (2)ನೇ ಉಪ-ನಿಯಮದ ಮೇರೆಗೆ ಅವನ ನೇಮಕಾತಿಯ ಎರಡನೆ ಪ್ರತಿಯನ್ನು ಅವನು ರಿಟರ್ನಿಂಗ್ ಅಧಿಕಾರಿಗೆ ತಲುಪಿಸಿದ ಹೊರತು, ಮತ ಎಣಿಕೆಗಾಗಿ ನಿಗಧಿಪಡಿಸಿದ ಸ್ಥಳಕ್ಕೆ ಪ್ರವೇಶ ನೀಡತಕ್ಕದ್ದಲ್ಲ.

(4) ಮತ ಎಣಿಕೆ ಏಜೆಂಟ್ ನೇಮಕಾತಿಯ ರದ್ದತಿಯನ್ನು ರಿಟರ್ನಿಂಗ್ ಅಧಿಕಾರಿಯ ಬಳಿ ಇಟ್ಟಿರುವ ನಮೂನೆ-22 ರಲ್ಲಿ ಮಾಡತಕ್ಕದ್ದು.

(5) ಮತಗಳ ಎಣಿಕೆಯು ಪ್ರಾರಂಭವಾಗುವುದಕ್ಕೆ ಮುಂಚೆ, ಯಾವುದೇ ಅಂಥ ರದ್ದತಿಯ ಸಂದರ್ಭದಲ್ಲಿ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟ್ (2)ನೇ ಉಪ-ನಿಯಮದ ಅನುಸಾರವಾಗಿ ಹೊಸ ನೇಮಕಾತಿಯನ್ನು ಮಾಡಬಹುದು.

**68. ಮತಗಳ ಎಣಿಕೆಗಾಗಿ ಸಮಯ ಮತ್ತು ಸ್ಥಳ.-** ರಿಟರ್ನಿಂಗ್ ಅಧಿಕಾರಿಯು, ಮತದಾನಕ್ಕಾಗಿ ನಿಗದಿಪಡಿಸಿದ ದಿನಾಂಕಕ್ಕೆ ಕನಿಷ್ಠಪಕ್ಷ ಒಂದು ವಾರಕ್ಕೂ ಮುಂಚಿತವಾಗಿ ಮತಗಳ ಎಣಿಕೆ ಮಾಡುವ ಸ್ಥಳ ಅಥವಾ ಸ್ಥಳಗಳನ್ನು ಹಾಗೂ ಮತ ಎಣಿಕೆ ಪ್ರಾರಂಭವಾಗುವ ದಿನಾಂಕ ಮತ್ತು ಸಮಯವನ್ನು ಗೊತ್ತುಪಡಿಸತಕ್ಕದ್ದು ಮತ್ತು ಪ್ರತಿಯೊಬ್ಬ ಉಮೇದುದಾರ ಅಥವಾ ಅವನ ಚುನಾವಣಾ ಏಜೆಂಟ್‌ಗೆ ಲಿಖಿತದಲ್ಲಿ ಅದರ ಬಗ್ಗೆ ಸೂಚನೆ ನೀಡತಕ್ಕದ್ದು:

ಪರಂತು, ಯಾವುದೇ ಕಾರಣಕ್ಕಾಗಿ ರಿಟರ್ನಿಂಗ್ ಅಧಿಕಾರಿಗೆ ಹಾಗೆ ಮಾಡುವುದು ಅಗತ್ಯವೆಂದು ಕಂಡುಬಂದರೆ, ಪ್ರತಿಯೊಬ್ಬ ಉಮೇದುವಾರ ಅಥವಾ ಅವನ ಚುನಾವಣಾ ಏಜೆಂಟ್‌ಗೆ ಲಿಖಿತದಲ್ಲಿ ಆ ಬಗ್ಗೆ, ಸೂಚನೆ ನೀಡಿದ ತರುವಾಯ ಅವನು ಹಾಗೆ ನಿಗದಿಪಡಿಸಿದ ದಿನಾಂಕ, ಸಮಯ ಮತ್ತು ಸ್ಥಳವನ್ನು ಅಥವಾ ಅವುಗಳಲ್ಲಿ ಯಾವುದನ್ನೆ ಬದಲಾಯಿಸಬಹುದು.

**69. ಮತ ಎಣಿಕೆಗಾಗಿ ನಿಗಧಿಪಡಿಸಿದ ಸ್ಥಳಕ್ಕೆ ಪ್ರವೇಶ-** (1) ರಿಟರ್ನಿಂಗ್ ಅಧಿಕಾರಿಯು,-

(ಎ) ಎಣಿಕೆಯಲ್ಲಿ ಅವನಿಗೆ ಸಹಾಯ ಮಾಡಲು ನೇಮಕ ಮಾಡಿದ. ಮತ ಎಣಿಕೆ ಮೇಲ್ವಿಚಾರಕರು ಮತ್ತು ಮತ ಎಣಿಕೆ ಸಹಾಯಕರೆಂದು ಕರೆಯಲಾಗುವಂಥ ವ್ಯಕ್ತಿಗಳನ್ನು;

(ಬಿ) ರಾಜ್ಯ ಚುನಾವಣಾ ಆಯೋಗವು ಅಧಿಕೃತಗೊಳಿಸಲಾದ ವ್ಯಕ್ತಿಗಳನ್ನು;

(ಸಿ) ಚುನಾವಣೆಗೆ ಸಂಬಂಧಿಸಿದಂತೆ ಕರ್ತವ್ಯದ ಮೇಲಿರುವ ಸರ್ಕಾರಿ ನೌಕರರನ್ನು; ಮತ್ತು

(ಡಿ) ಉಮೇದುವಾರನನ್ನು, ಅವರ ಚುನಾವಣಾ ಏಜೆಂಟರು ಮತ್ತು ಮತಎಣಿಕೆ ಏಜೆಂಟರನ್ನು

- ಹೊರತುಪಡಿಸಿ ಎಲ್ಲಾ ವ್ಯಕ್ತಿಗಳನ್ನು ಮತ ಎಣಿಕೆಗೆ ನಿಗದಿಪಡಿಸಿದಂಥ ಸ್ಥಳದಿಂದ ಹೊರ ಹಾಕತಕ್ಕದ್ದು.

(2) ಚುನಾವಣೆಯಲ್ಲಿ ಅಥವಾ ಆ ಬಗ್ಗೆ ಅಭ್ಯರ್ಥಿಯ ಮೂಲಕ ಅಥವಾ ಅವರ ಪರವಾಗಿ: ನಿಯೋಜಿತನಾಗಿರುವ ಅಥವಾ ಉಮೇದುವಾರನಿಗಾಗಿ ಅನ್ಯಥಾ ಕಾರ್ಯನಿರ್ವಹಿಸುತ್ತಿರುವ ಯಾರೇ ವ್ಯಕ್ತಿಯನ್ನು (1) ನೇ ಉಪ-ನಿಯಮದ (ಎ) ಖಂಡದ ಮೇರೆಗೆ ನೇಮಕ ಮಾಡಿಕೊಳ್ಳತಕ್ಕದಲ್ಲ.

(3) ರಿಟರ್ನಿಂಗ್ ಅಧಿಕಾರಿಯು ಯಾವುದೇ ನಿರ್ದಿಷ್ಟ ಮತ ಎಣಿಕೆ ಟೇಬಲ್ ಅಥವಾ ಮತ ಎಣಿಕೆ ಟೇಬಲ್‌ಗಳ ಗುಂಪಿನಲ್ಲಿ ಯಾವ ಮತ ಎಣಕೆ ಏಜೆಂಟನು ಮತ ಎಣಿಕೆಯನ್ನು ವೀಕ್ಷಿಸಬೇಕೆಂಬುದನ್ನು ತೀರ್ಮಾನಿಸತಕ್ಕದ್ದು.

(4) ಯಾರೇ ವ್ಯಕ್ತಿಯು ಮತಗಳ ಎಣಿಕೆ ಅವಧಿಯಲ್ಲಿ ದುರ್ವರ್ತನೆ ತೋರುವನೋ ಅಥವಾ ರಿಟರ್ನಿಂಗ್ ಅಧಿಕಾರಿಯ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ತಪ್ಪುವನೋ ಆ ವ್ಯಕ್ತಿಯನ್ನು ಮತ ಎಣಿಕೆ ಮಾಡುತ್ತಿರುವ ಸ್ಥಳದಿಂದ ರಿಟರ್ನಿಂಗ್ ಅಧಿಕಾರಿಯು ಅಥವಾ ಕರ್ತವ್ಯದ ಮೇಲಿರುವ ಯಾರೇ ಪೊಲೀಸ್ ಅಧಿಕಾರಿಯು ಅಥವಾ ರಿಟರ್ನಿಂಗ್ ಅಧಿಕಾರಿಯು ಅವನ ಪರವಾಗಿ ಅಧಿಕೃಗೊಳಿಸಲಾದ ಯಾರೇ ವ್ಯಕ್ತಿಯು ಹೊರಹಾಕಬಹುದು.

**70. ಮತದಾನದ ಗೋಪ್ಯತೆಯನ್ನು ಕಾಪಾಡುವುದು.-** ರಿಟರ್ನಿಂಗ್ ಅಧಿಕಾರಿಯು ಮತ ಎಣಿಕೆ ಪ್ರಾರಂಭಕ್ಕೂ ಮುಂಚೆ, ಹಾಜರಿರಬಹುಬಾದಂತಹ ವ್ಯಕ್ತಿಗಳಿಗೆ ಅಧಿನಿಯಮದ 53ನೇ ಪ್ರಕರಣದ ಉಪಬಂಧಗಳನ್ನು ಓದಿ ಹೇಳತಕ್ಕದ್ದು.

**71. ಅಂಚೆ ಮೂಲಕ ಸ್ವೀಕರಿಸಿದ ಮತಗಳ ಎಣಿಕೆ.-** (1) ರಿಟರ್ನಿಂಗ್ ಅಧಿಕಾರಿಯು ಈ ನಿಯಮದಲ್ಲಿ ಉಪಬಂಧಿಸಿದ ರೀತಿಯಲ್ಲಿ ಮೊದಲಿಗೆ ಅಂಚೆ ಮತಪತ್ರಗಳನ್ನು ತೆಗೆದುಕೊಳ್ಳತಕ್ಕದ್ದು.

(2) ಆ ಬಗ್ಗೆ ನಿಗದಿಪಡಿಸಿದ ಅವಧಿಯು ಮುಕ್ತಾಯವಾದ ತರುವಾಯ ರಿಟರ್ನಿಂಗ್ ಅಧಿಕಾರಿಯು ಸ್ವೀಕರಿಸಿದ ನಮೂನೆ-16ಬಿ ಯಲ್ಲಿನ ಯಾವುದೇ ಲಕೋಟೆಯನ್ನು ತೆರೆಯತಕ್ಕದ್ದಲ್ಲ ಮತ್ತು ಅಂಥ ಯಾವುದೇ ಲಕೋಟೆಯಲ್ಲಿರುವ ಯಾವುದೇ ಮತವನ್ನು ಎಣಿಕೆ ಮಾಡತಕ್ಕದ್ದಲ್ಲ.

(3) ಇತರೆ ಲಕೋಟೆಗಳನ್ನು ಒಂದಾದ ನಂತರ ಮತ್ತೊಂದನ್ನು ತೆರೆಯತಕ್ಕದ್ದು ಹಾಗೂ ಪ್ರತಿಯೊಂದು ಲಕೋಟೆ ತೆರೆದಾಗ, ರಿಟರ್ನಿಂಗ್ ಅಧಿಕಾರಿಯು ಮೊದಲು ಅದರಲ್ಲಿರುವ ನಮೂನೆ-16ರಲ್ಲಿನ ಘೋಷಣೆಯನ್ನು ಪರಿಶೀಲಿಸತಕ್ಕದ್ದು.

(4) ಸದರಿ ಘೋಷಣೆಯು ಕಂಡುಬರದಿದ್ದರೆ ಅಥವಾ ಕ್ರಮಬದ್ಧವಾಗಿ ಸಹಿ ಮಾಡಿರದಿದ್ದರೆ ಅಥವಾ ಅನುಪ್ರಮಾಣಿಸಿರದಿದ್ದರೆ ಅಥವಾ ಅನ್ಯಥಾ ಗಮನಾರ್ಹವಾಗಿ ದೋಷಯುಕ್ತವಾಗಿದ್ದರೆ ಅಥವಾ ಅದರಲ್ಲಿ ನಮೂದಿಸಿದಂತೆ ಮತ ಪತ್ರದ ಕ್ರಮಸಂಖ್ಯೆಯು, ನಮೂನೆ-16ಎ ಯಲ್ಲಿನ ಲಕೋಟೆಯ ಮೇಲೆ ಹಿಂಬರಹ ಮಾಡಲಾದ ಕ್ರಮಸಂಖ್ಯೆಗಿಂತ ಭಿನ್ನವಾಗಿದ್ದರೆ, ಆ ಲಕೋಟೆಯನ್ನು ತೆರೆಯತಕ್ಕದ್ದಲ್ಲ ಮತ್ತು ಅದರ ಮೇಲೆ ಸೂಕ್ತವಾದ ಹಿಂಬರಹ ಮಾಡಿದ ತರುವಾಯ ರಿಟರ್ನಿಂಗ್ ಅಧಿಕಾರಿಯು, ಅದರಲ್ಲಿರುವ ಮತಪತ್ರವನ್ನು ತಿರಸ್ಕರಿಸತಕ್ಕದ್ದು.

(5) ಹಾಗೆ ಹಿಂಬರಹ ಮಾಡಲಾದ ಪ್ರತಿಯೊಂದು ಲಕೋಟೆಯನ್ನು ಮತ್ತು ಅದರೊಂದಿಗೆ ಸ್ವೀಕರಿಸಲಾದ ಘೋಷಣೆಯನ್ನು ನಮೂನೆ-16ಬಿ ಯಲ್ಲಿನ ಲಕೋಟೆಯಲ್ಲಿ ಪುನಃ ಇಡತಕ್ಕದ್ದು ಮತ್ತು ನಮೂನೆ-16ಬಿ ಯಲ್ಲಿ ಅಂಥ ಎಲ್ಲ ಲಕೋಟೆಗಳನ್ನು ಪ್ರತ್ಯೇಕ ಪ್ಯಾಕೆಟ್‌ನಲ್ಲಿ ಇಡತಕ್ಕದ್ದು, ಅದಕ್ಕೆ ಮೊಹರು ಮಾಡತಕ್ಕದ್ದು ಹಾಗೂ ಅದರ ಮೇಲೆ ವಾರ್ಡಿನ ಹೆಸರು, ಮತ ಎಣಿಕೆ ದಿನಾಂಕ ಮತ್ತು ಅದರ ಒಳಾಂಶಗಳ ಸಂಕ್ಷಿಪ್ತ ವಿವರಣೆಯನ್ನು ದಾಖಲಿಸತಕ್ಕದ್ದು.

(6) ರಿಟರ್ನಿಂಗ್ ಅಧಿಕಾರಿಯು ತನಗೆ ಕ್ರಮಬದ್ಧವಾಗಿದೆ ಎಂದು ಕಂಡುಬಂದ ನಮೂನೆ-16 ರಲ್ಲಿನ ಎಲ್ಲ ಘೋಷಣೆಗಳನ್ನು ನಂತರ ಪ್ರತ್ಯೇಕ ಪ್ಯಾಕೆಟಿನಲ್ಲಿಡತಕ್ಕದ್ದು, ಅದನ್ನು ನಮೂನೆ-17ಎ ರಲ್ಲಿನ ಯಾವುದೇ ಲಕೋಟೆಯನ್ನು ತೆರೆಯುವುದಕ್ಕೆ ಮುಂಚೆ ಮೊಹರು ಮಾಡತಕ್ಕದ್ದು ಮತ್ತು ಅದರ ಮೇಲೆ (5)ನೇ ಉಪ ನಿಯಮದಲ್ಲಿ ಉಲ್ಲೇಖಿಸಲಾದ ವಿವರಗಳನ್ನು ದಾಖಲಿಸತಕ್ಕದ್ದು.

(7) ಈ ನಿಯಮದ ಈ ಹಿಂದೆ ಹೇಳಿದ ಉಪಬಂಧಗಳ ಮೇರೆಗೆ ಈಗಾಗಲೇ ವ್ಯವಹರಿಸಿರದ ನಮೂನೆ-16ಎ ಯಲ್ಲಿನ ಲಕೋಟೆಗಳನ್ನು ಒಂದಾದ ಮೇಲೆ ಮತ್ತೊಂದರಂತೆ ತೆರೆಯತಕ್ಕದ್ದು ಮತ್ತು ರಿಟರ್ನಿಂಗ್ ಅಧಿಕಾರಿಯು ಪ್ರತಿಯೊಂದು ಮತಪತ್ರವನ್ನು ಪರಿಶೀಲಿಸತಕ್ಕದ್ದು ಮತ್ತು ಅದರ ಮೇಲೆ ದಾಖಲಾದ ಮತದ ಸಿಂಧುತ್ವವನ್ನು ತೀರ್ಮಾನಿಸತಕ್ಕದ್ದು.

(8) ಅಂಚೆ ಮತಪತ್ರವನ್ನು.-

(i) ಅದು ಯಾವುದೇ ಗುರುತನ್ನು (ಮತ ದಾಖಲಿಸುವ ಗುರುತನ್ನು ಹೊರತುಪಡಿಸಿ) ಅಥವಾ ಮತದಾರನನ್ನು ಗುರುತಿಸಬಹುದಾದಂಥ ಬರಹವನ್ನು ಹೊಂದಿದ್ದರೆ;

(ii) ಅದರ ಮೇಲೆ ಯಾವುದೇ ಮತವನ್ನು ದಾಖಲಿಸಿರದಿದ್ದರೆ;

(iii) ಆಯ್ಕೆಮಾಡಬೇಕಾಗಿರುವ ಅಭ್ಯರ್ಥಿಗಳಿಗಿಂತ ಹೆಚ್ಚು ಅಭ್ಯರ್ಥಿಗಳಿಗೆ ಅದರ ಮೇಲೆ ಮತಗಳನ್ನು ಹಾಕಿದ್ದರೆ;

(iv) ಅದು ಖೋಟಾ ಮತಪತ್ರವಾಗಿದ್ದರೆ;

(v) ಅದು ನೈಜವಾದ ಮತಪತ್ರವೆಂದು ಗುರುತಿಸುವುದನ್ನು ದೃಢಪಡಿಸಿಕೊಳ್ಳಲಾಗದ ಹಾಗೆ ಅದು ಹಾನಿಯಾಗಿದ್ದರೆ, ವಿರೂಪವಾಗಿದ್ದರೆ; ಅಥವಾ

(vi) ರಿಟರ್ನಿಂಗ್ ಅಧಿಕಾರಿಯು ಮತದಾರನಿಗೆ ಅದರೊಂದಿಗೆ ಕಳುಹಿಸಿದ ಲಕೋಟೆಯಲ್ಲಿ ಅದನ್ನು ಹಿಂತಿರುಗಿಸದಿದ್ದರೆ

- ತಿರಸ್ಕರಿಸತಕ್ಕದ್ದು.

(9) ಅಂಚೆ ಮತಪತ್ರದ ಮೇಲೆ ದಾಖಲಿಸಿದ ಮತವನ್ನು ಯಾವ ಅಭ್ಯರ್ಥಿಗೆ ಮತವನ್ನು ನೀಡಲಾಗಿದೆಯೆಂಬುದರ ಬಗ್ಗೆ ಸಂದೇಹ ಉಂಟುಮಾಡುವಂಥ ರೀತಿಯಲ್ಲಿ ಮತವನ್ನು ಸೂಚಿಸುವ ಗುರುತನ್ನು ಮತಪತ್ರದ ಮೇಲೆ ಹಾಕಿದ್ದರೆ ತಿರಸ್ಕರಿಸತಕ್ಕದ್ದು.

(10) ಅಂಚೆ ಮತಪತ್ರದ ಮೇಲೆ ದಾಖಲಿಸಿದ ಮತವನ್ನು ಮತವು ನಿರ್ದಿಷ್ಟ ಅಭ್ಯರ್ಥಿಗಾಗಿ ಇದೆ ಎಂಬ ಉದ್ದೇಶವು ಆ ಪತ್ರಕ್ಕೆ ಗುರುತು ಮಾಡಿದ ರೀತಿಯಿಂದ ಸ್ಪಷ್ಟವಾಗಿ ಕಂಡುಬಂದರೆ, ಮತವನ್ನು ಸೂಚಿಸಿರುವ ಗುರುತು ಅಸ್ಪಷ್ಟವಾಗಿದೆ ಅಥವಾ ಒಂದಕ್ಕಿಂತ ಹೆಚ್ಚು ಸಲ ಮಾಡಲಾಗಿದೆ ಎಂಬ ಕಾರಣದಿಂದ ಮಾತ್ರ ತಿರಸ್ಕರಿಸತಕ್ಕದ್ದಲ್ಲ.

(11) ರಿಟರ್ನಿಂಗ್ ಅಧಿಕಾರಿಯು, ಪ್ರತಿಯೊಬ್ಬ ಅಭ್ಯರ್ಥಿಗೆ ಅಂಚೆ ಮತಪತ್ರದ ಮೂಲಕ ನೀಡಲಾದ ಎಲ್ಲ ಸಿಂಧುವಾದ ಮತಗಳನ್ನು ಎಣಿಕೆ ಮಾಡತಕ್ಕದ್ದು. ನಮೂನೆ-23 ರಲ್ಲಿ ಫಲಿತಾಂಶದ ಹಾಳೆಯಲ್ಲಿ ಅದರ ಒಟ್ಟು ಮತಗಳನ್ನು ದಾಖಲಿಸತಕ್ಕದ್ದು ಮತ್ತು ಅದನ್ನು ಪ್ರಕಟಿಸತಕ್ಕದ್ದು.

(12) ತದನಂತರ ಎಲ್ಲ ಸಿಂಧುವಾದ ಮತಪತ್ರಗಳು ಮತ್ತು ಎಲ್ಲ ತಿರಸ್ಕರಿಸಿದ ಮತಪತ್ರಗಳನ್ನು ಪ್ರತ್ಯೇಕವಾಗಿ ಕಟ್ಟಿಡತಕ್ಕದ್ದು ಮತ್ತು ಒಂದು ಲಕೋಟೆಯಲ್ಲಿ ಜೊತೆಗಿಡತಕ್ಕದ್ದು, ರಿಟರ್ನಿಂಗ್ ಅಧಿಕಾರಿಯು ಮತ್ತು ಅದರ ಮೇಲೆ ತಮ್ಮ ಮೊಹರುಗಳನ್ನು ಹಾಕಲು 'ಇಚ್ಛಿಸಬಹುದಾದಂಥ ಉಮೇದುವಾರರು, ಅವರ ಚುನಾವಣಾ ಏಜೆಂಟರು ಮೊಹರಿನಿಂದ ಅದನ್ನು ಸೀಲ್ ಮಾಡತಕ್ಕದ್ದು ಮತ್ತು ಹಾಗೆ ಸೀಲ್ ಮಾಡಲಾದ ಲಕೋಟೆಗಳ ಮೇಲೆ ವಾರ್ಡಿನ ಹೆಸರು, ಮತ ಎಣಿಕೆ ದಿನಾಂಕ ಮತ್ತು ಅದರ ಒಳಾಂಶಗಳ ಸಂಕ್ಷಿಪ್ತ ವಿವರಣೆಯನ್ನು ದಾಖಲಿಸತಕ್ಕದ್ದು.

**72. ಮತ ಪೆಟ್ಟಿಗೆಗಳನ್ನು ಪರಿಶೀಲಿಸುವುದು ಮತ್ತು ತೆರೆಯುವುದು.-** (1) ರಿಟರ್ನಿಂಗ್ ಅಧಿಕಾರಿಯು, ಒಂದು ವಾರ್ಡಿನ ಒಂದಕ್ಕಿಂತ ಹೆಚ್ಚು ಮತದಾನ ಕೇಂದ್ರದಲ್ಲಿ ಬಳಸಿದ ಮತ ಪೆಟ್ಟಿಗೆಗಳನ್ನು ಏಕಕಾಲಿಕವಾಗಿ ತೆರೆಯತಕ್ಕದ್ದು ಅಥವಾ ತೆರೆಯುವಂತೆ ಮಾಡತಕ್ಕದ್ದು ಮತ್ತು ನಮೂನೆ-20ರ ಭಾಗ-II ರಲ್ಲಿ ಎಣಿಕೆ ಮಾಡಲಾದ ಅಥವಾ ದಾಖಲಿಸಿದಂಥ ಪೆಟ್ಟಿಗೆಗಳಲ್ಲಿ ಕಂಡುಬಂದ ಮತಪತ್ರಗಳ ಒಟ್ಟು ಸಂಖ್ಯೆಯನ್ನು ದಾಖಲಿಸತಕ್ಕದ್ದು.

(2) ಈ ಹಿಂದೆ ಹೇಳಲಾದಂತೆ ದಾಖಲಿಸಿರುವಂಥ ಮತಪತ್ರಗಳ ಒಟ್ಟು ಸಂಖ್ಯೆ ಮತ್ತು 4ನೇ ಬಾಬುವಿನಲ್ಲಿ ತೋರಿಸಲಾದಂತೆ ರದ್ದಾದ ಮತಪತ್ರಗಳ ಸಂಖ್ಯೆಯನ್ನು ಕಳೆದು ನಮೂನೆ-20ರ ಭಾಗ-Iರ 3ನೇ ಬಾಬುವಿನಲ್ಲಿ ತೋರಿಸಲಾದಂತೆ ಮತದಾರರಿಗೆ ನೀಡಲಾದ ಮತಪತ್ರಗಳ ಒಟ್ಟು ಸಂಖ್ಯೆ ಮತ್ತು ಆ ಭಾಗದ 5ನೇ ಬಾಬುವಿನಲ್ಲಿ ತೋರಿಸಲಾದಂತೆ ಟೆಂಡರ್ಡ್ ಮತಪತ್ರಗಳಾಗಿ ಬಳಸಿದ ಮತಪತ್ರಗಳ ಸಂಖ್ಯೆ ಇವುಗಳ ನಡುವೆ ವ್ಯತ್ಯಾಸ ಏನಾದರೂ ಇದ್ದರೆ ನಮೂನೆ-20 ರ ಭಾಗ-II ರಲ್ಲಿ ಸಹ ದಾಖಲಿಸತಕ್ಕದ್ದು.

(3) ಮತ ಎಣಿಕೆ ಮೇಜಿನ ಮೇಲೆ ಯಾವುದೇ ಮತ ಪಟ್ಟಿಗೆಯನ್ನು ತೆರೆಯುವುದಕ್ಕೆ ಮುಂಚೆ, ಆ ಮೇಜಿನ ಬಳಿ ಹಾಜರಿರುವ ಮತ ಎಣಿಕೆ ಏಜೆಂಟನು ಅದರ ಮೇಲೆ ಹಾಕಿರಬಹುದಾದ ಪೇಪರ್ ಸೀಲ್ ಅಥವಾ ಅಂಥ ಇತರೆ ಸೀಲ್‌ನ್ನು ಪರಿಶೀಲಿಸಲು ಮತ್ತು ಅದು ಸರಿಯಾಗಿದೆ ಎಂದು ಮನದಟ್ಟು ಮಾಡಿಕೊಳ್ಳಲು ಅವಕಾಶ ಮಾಡಿಕೊಡತಕ್ಕದ್ದು.

(4) ರಿಟರ್ನಿಂಗ್ ಅಧಿಕಾರಿಯು ಮತಪೆಟ್ಟಿಗೆಯು ವ್ಯತ್ಯಸ್ಥವಾಗಿಲ್ಲವೆಂಬುದನ್ನು ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

(5) ರಿಟರ್ನಿಂಗ್ ಅಧಿಕಾರಿಯು ಯಾವುದೇ ಮತಪೆಟ್ಟಿಗೆಯು ವ್ಯತ್ಯಸ್ಥವಾಗಿದೆ ಎಂದು ಮನದಟ್ಟು ಮಾಡಿಕೊಂಡರೆ, ಆತನು ಆ ಪೆಟ್ಟಿಗೆಯಲ್ಲಿರುವ ಮತಪತ್ರಗಳನ್ನು ಎಣಿಸತಕ್ಕದ್ದಲ್ಲ ಮತ್ತು ಆ ಮತದಾನ ಕೇಂದ್ರಕ್ಕೆ ಸಂಬಂಧಿಸಿದಂತೆ 36ನೇ ನಿಯಮದಲ್ಲಿ ಹೇಳಲಾದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

**73. ಮತಗಳ ಎಣಿಕೆ.-** (1) ಈ ಬಗ್ಗೆ ರಾಜ್ಯ ಚುನಾವಣಾ ಆಯೋಗವು ನೀಡಬಹುದಾದಂಥ ಸಾಮಾನ್ಯ ಅಥವಾ ವಿಶೇಷ ನಿರ್ದೇಶನಗಳು ಯಾವುದಾದರೂ ಇದ್ದರೆ ಅವುಗಳಿಗೊಳಪಟ್ಟು ಒಂದು ವಾರ್ಡಿನಲ್ಲಿ ಬಳಸಿದ ಎಲ್ಲ ಪೆಟ್ಟಿಗೆಗಳಿಂದ ತೆಗೆದುಕೊಂಡ ಮತಪತ್ರಗಳನ್ನು ಒಟ್ಟಿಗೆ ಬೆರೆಸತಕ್ಕದ್ದು ಮತ್ತು ನಂತರ ಅನುಕೂಲಕರವಾದ ಕಟ್ಟುಗಳಲ್ಲಿ ವ್ಯವಸ್ಥೆ ಮಾಡತಕ್ಕದ್ದು ಮತ್ತು ಪರಿಶೀಲಿಸತಕ್ಕದ್ದು.

(2) ರಿಟರ್ನಿಂಗ್ ಅಧಿಕಾರಿಯು, ಮತಪತ್ರವನ್ನು,-

(i) ಮತದಾರನನ್ನು ಗುರುತಿಸಬಹುದಾದಂಥ ಯಾವುದೇ ಗುರುತು ಅಥವಾ ಬರಹವನ್ನು ಅದು ಹೊಂದಿದ್ದರೆ;

(ii) ಮತವನ್ನು ಸೂಚಿಸುವ ಯಾವುದೇ ಗುರುತನ್ನು ಅದು ಹೊಂದಿರದಿದ್ದರೆ, ಮತಪತ್ರದ ಮೇಲೆ ಅಭ್ಯರ್ಥಿಯ ಚಿಹ್ನೆಯ ಮೇಲೆ ಅಥವಾ ಪಕ್ಕದಲ್ಲಿ ಅಲ್ಲದೆ ಬೇರೆ ಕಡೆ ಗುರುತನ್ನು ಅದು ಹೊಂದಿದ್ದರೆ ಅಥವಾ ಆ ಉದ್ದೇಶಕ್ಕಾಗಿ ಒದಗಿಸಿದ ಸಾಧನದಿಂದಲ್ಲದೆ ಬೇರೆಯದರಿಂದ ಮಾಡಿದ ಗುರುತನ್ನು ಅದು ಹೊಂದಿದ್ದರೆ;

(iii) ಆಯ್ಕೆ ಮಾಡಬೇಕಾಗಿರುವ ಉಮೇದುದಾರರಿಗಿಂತ ಹೆಚ್ಚಿನ ಉಮೇದುದಾರರಿಗೆ ಅದರ ಮೇಲೆ ಮತಗಳನ್ನು ನೀಡಿದ್ದರೆ;

(iv) ಯಾವ ಅಭ್ಯರ್ಥಿಗೆ ಮತವನ್ನು ನೀಡಲಾಗಿದೆ ಎಂಬುದರ ಬಗ್ಗೆ ಸಂಶಯ ಉಂಟುಮಾಡುವ ರೀತಿಯಲ್ಲಿ ಅದರ ಮೇಲೆ ಮತ ಸೂಚಿಸುವ ಗುರುತನ್ನು ಹಾಕಿದ್ದರೆ;

(v) ಅದು ಖೋಟಾ ಮತಪತ್ರವಾಗಿದ್ದರೆ;

(vi) ಅದು ನೈಜವಾದ ಮತಪತ್ರವೆಂದು ಗುರುತಿಸುವುದನ್ನು ದೃಢಪಡಿಸಿಕೊಳ್ಳಲಾಗದ ಹಾಗೆ ಅದು ಹಾನಿಯಾಗಿದ್ದರೆ ಅಥವಾ ವಿರೂಪವಾಗಿದ್ದರೆ;

(vii) ನಿರ್ದಿಷ್ಟ ಮತದಾನ ಕೇಂದ್ರದಲ್ಲಿ ಬಳಸುವುದಕ್ಕಾಗಿ ಅಧಿಕೃತಗೊಳಿಸಲಾದ ಮತಪತ್ರಗಳ ಕ್ರಮಸಂಖ್ಯೆ ಅಥವಾ ಕ್ರಮಸಂಖ್ಯೆಗಳಿಗಿಂತ ಭಿನ್ನವಾದ ಕ್ರಮಸಂಖ್ಯೆ ಅಥವಾ ಸಂದರ್ಭಾನುಸಾರ ವಿನ್ಯಾಸವನ್ನು ಅದು ಹೊಂದಿದ್ದರೆ; ಅಥವಾ

(viii) 57ನೇ ನಿಯಮದ (1)ನೇ ಉಪ-ನಿಯಮದ ಉಪಬಂಧಗಳ ಮೇರೆಗೆ ಅದು ಹೊಂದಿರಬೇಕಾಗಿರುವ ಗುರುತು ಮತ್ತು ಸಹಿ ಎರಡನ್ನು ಅದು ಹೊಂದಿರದಿದ್ದರೆ

-ತಿರಸ್ಕರಿಸತಕ್ಕದ್ದು.

ಪರಂತು, ರಿಟರ್ನಿಂಗ್ ಅಧಿಕಾರಿಯು (vii)ನೇ ಖಂಡ ಅಥವಾ (viii)ನೇ ಖಂಡದಲ್ಲಿ ನಮೂದಿಸಲಾದಂಥ ಯಾವುದೇ ದೋಷವು ಪ್ರಿಸೈಡಿಂಗ್ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿ ಕಡೆಯಿಂದ ಯಾವುದೇ ತಪ್ಪಿನಿಂದ ಅಥವಾ ವಿಫಲತೆಯಿಂದಾಗಿದೆ ಎಂದು ಮನದಟ್ಟಾದಲ್ಲಿ, ಮತಪತ್ರವನ್ನು ಅಂಥ ದೋಷದ ಕಾರಣದಿಂದ ಮಾತ್ರವೇ ತಿರಸ್ಕರಿಸತಕ್ಕದ್ದಲ್ಲ.

ಮತ್ತು ಪರಂತು ಮತಪತ್ರವನ್ನು ಆ ಮತವು ನಿರ್ದಿಷ್ಟ ಅಭ್ಯರ್ಥಿಗಾಗಿ ಎಂಬ ಉದ್ದೇಶವು ಗುರುತು ಮಾಡಿದ ಪತ್ರದಿಂದ ಸ್ಪಷ್ಟವಾಗಿ ಕಂಡುಬಂದರೆ ಮತ ಸೂಚಿಸಿರುವ ಗುರುತು ಅಸ್ಪಷ್ಟವಾಗಿದೆ ಅಥವಾ ಒಂದಕ್ಕಿಂತ ಹೆಚ್ಚು ಸಲ ಗುರುತು ಮಾಡಲಾಗಿದೆ ಎಂಬ ಕಾರಣದಿಂದ ಮಾತ್ರವೇ ತಿರಸ್ಕರಿಸತಕ್ಕದ್ದಲ್ಲ

(3) ಉಪ-ನಿಯಮ (2)ರ ಅಡಿಯಲ್ಲಿ ಯಾವುದೇ ಮತಪತ್ರವನ್ನು ತಿರಸ್ಕರಿಸುವ ಮುಂಚೆ, ರಿಟರ್ನಿಂಗ್ ಅಧಿಕಾರಿಯು ಹಾಜರಿರುವ ಪ್ರತಿಯೊಬ್ಬ ಮತ ಎಣಿಕೆ ಏಜೆಂಟ್‌ಗೆ ಮತಪತ್ರವನ್ನು ಪರಿಶೀಲಿಸುವ ಯುಕ್ತ ಅವಕಾಶವನ್ನು ನೀಡತಕ್ಕದ್ದು ಆದರೆ ಅದನ್ನು ಅಥವಾ ಇತರ ಯಾವುದೇ ಮತಪತ್ರವನ್ನು ಬಳಸಲು ಅವರಿಗೆ ಅವಕಾಶ ನೀಡತಕ್ಕದ್ದಲ್ಲ.

(4) ರಿಟರ್ನಿಂಗ್ ಅಧಿಕಾರಿಯು ಅವರು ತಿರಸ್ಕರಿಸಿದ ಪ್ರತಿಯೊಂದು ಮತಪತ್ರದ ಮೇಲೆ "ತಿರಸ್ಕರಿಸಲಾಗಿದೆ" ಎಂಬ ಪದವನ್ನು ಹಿಂಬರಹ ಮಾಡತಕ್ಕದ್ದು ಮತ್ತು ತಿರಸ್ಕರಣೆಯ ಕಾರಣಗಳನ್ನು ಸಂಕ್ಷಿಪ್ತ ರೂಪದಲ್ಲಿ ಅವರ ಸ್ವಹಸ್ತಾಕ್ಷರದಿಂದಾಗಲಿ ಅಥವಾ ರಬ್ಬರ್ ಸ್ಟ್ಯಾಂಪ್‌ನಿಂದಾಗಲಿ ಹಿಂಬರಹ ಮಾಡತಕ್ಕದ್ದು ಮತ್ತು ಹಿಂಬರಹಕ್ಕೆ ಚಿಕ್ಕ ರುಜು ಮಾಡತಕ್ಕದ್ದು.

(5) ಈ ನಿಯಮದ ಮೇರೆಗೆ ತಿರಸ್ಕರಿಸಿದ ಎಲ್ಲ ಮತಪತ್ರಗಳನ್ನು ಒಟ್ಟಿಗೆ ಕಟ್ಟಿಡತಕ್ಕದ್ದು.

(6) ಈ ನಿಯಮದ ಮೇರೆಗೆ ತಿರಸ್ಕರಿಸದೆ ಇರುವ ಪ್ರತಿಯೊಂದು ಮತಪತ್ರವನ್ನು ಎಣಿಕೆ ಮಾಡತಕ್ಕದ್ದು.

ಪರಂತು, ಟೆಂಡರ್ಡ್ ಮತಪತ್ರವಿರುವ ಯಾವುದೇ ಲಕೋಟೆಯನ್ನು ತೆರೆಯತಕ್ಕದ್ದಲ್ಲ ಮತ್ತು ಅಂಥ ಯಾವುದೇ ಮತಪತ್ರವನ್ನು ಎಣಿಕೆ ಮಾಡತಕ್ಕದ್ದಲ್ಲ.

(7) ವಾರ್ಡಿನಲ್ಲಿ ಬಳಸದ ಎಲ್ಲ ಮತಪೆಟ್ಟಿಗೆಗಳಲ್ಲಿರುವ ಎಲ್ಲ ಮತಪತ್ರಗಳನ್ನು ಎಣಿಕೆಯನ್ನು ಪೂರ್ಣಗೊಳಿಸಿದ ತರುವಾಯ, ರಿಟರ್ನಿಂಗ್ ಅಧಿಕಾರಿಯು, ನಮೂನೆ-23 ರಲ್ಲಿ ಫಲಿತಾಂಶ ಹಾಳೆಯಲ್ಲಿ ನಮೂದುಗಳನ್ನು ಮಾಡತಕ್ಕದ್ದು ಮತ್ತು ವಿವರಗಳನ್ನು ಪ್ರಕಟಿಸತಕ್ಕದ್ದು

**74. ಮತ ಎಣಿಕೆಯು ನಿರಂತರವಾಗಿರುವುದು.- (1)** ರಿಟರ್ನಿಂಗ್ ಅಧಿಕಾರಿಯು ಕಾರ್ಯಸಾಧ್ಯವಾದಷ್ಟು ಮಟ್ಟಿಗೆ ಮತ ಎಣಿಕೆಯನ್ನು ನಿರಂತರವಾಗಿ ಮುಂದುವರಿಸತಕ್ಕದ್ದು ಮತ್ತು ಯಾವುದೇ ವಿರಾಮದ ಅವಧಿಯಲ್ಲಿ ಮತ ಎಣಿಕೆಯನ್ನು ನಿಲ್ಲಿಸಿದಾಗ, ಚುನಾವಣೆಗೆ ಸಂಬಂಧಿಸಿದ ಮತಪ್ರಪತ್ರಗಳು, ಪ್ಯಾಕೆಟ್‌ಗಳು ಮತ್ತು ಎಲ್ಲ ಇತರ ಪತ್ರಗಳಿಗೆ ತಮ್ಮ ಸ್ವಂತ ಸೀಲ್‌ನಿಂದ ಮತ್ತು ಅವರ ಮೊಹರು ಸೀಲ್‌ಗಳಿಂದ ಹಾಕಲು ಇಚಿಸಬಹುದಾದಂಥ ಅಭ್ಯರ್ಥಿಗಳು ಅಥವಾ ಚುನಾವಣಾ ಏಜೆಂಟರುಗಳ ಮೊಹರು ಮಾಡಿ ಇಡತಕ್ಕದ್ದು ಮತ್ತು ಅಂಥ ವಿರಾಮದ ಅವಧಿಯಲ್ಲಿ ಅವುಗಳ ಸುರಕ್ಷಾ ಅಭಿರಕ್ಷೆಗಾಗಿ ಸಾಕಷ್ಟು ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳತಕ್ಕದ್ದು.

**75. ಮತಗಳ ಮರು ಎಣಿಕೆ**.- (1) ಎಣಿಕೆ ಪೂರ್ಣಗೊಂಡ ತರುವಾಯ, ರಿಟರ್ನಿಂಗ್ ಅಧಿಕಾರಿಯು, ಪ್ರತಿಯೊಬ್ಬ ಅಭ್ಯರ್ಥಿಗೆ ಹಾಕಲಾದ ಮತಗಳ ಒಟ್ಟು ಸಂಖ್ಯೆಯನ್ನು ನಮೂನೆ-23 ರಲ್ಲಿ ಫಲಿತಾಂಶ ಹಾಳೆಯಲ್ಲಿ ದಾಖಲಿಸತಕ್ಕದ್ದು ಮತ್ತು ಅದನ್ನು ಪ್ರಕಟಿಸತಕ್ಕದ್ದು.

(2) ಅಂಥ ಪ್ರಕಟಣೆಯನ್ನು ಮಾಡಿದ ತರುವಾಯ, ಅಭ್ಯರ್ಥಿ ಅಥವಾ ಅವನ ಗೈರುಹಾಜರಿಯಲ್ಲಿ ಅವನ ಚುನಾವಣಾ ಏಜೆಂಟ್ ಅಥವಾ ಆವನ ಯಾರೇ ಚುನಾವಣಾ ಏಜೆಂಟ್ ಯಾವ ಕಾರಣಗಳ ಮೇಲೆ ಅವರು ಮರು ಎಣಿಕೆಗೆ ಕೇಳುವರೋ ಆ ಕಾರಣಗಳನ್ನು ತಿಳಿಸಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಮತಗಳ ಮರು ಎಣಿಕೆಗೆ ರಿಟರ್ನಿಂಗ್ ಅಧಿಕಾರಿಗೆ ಲಿಖಿತದಲ್ಲಿ ಅರ್ಜಿ ಸಲ್ಲಿಸಬಹುದು.

(3) ಅಂಥ ಅರ್ಜಿಯನ್ನು ಸಲ್ಲಿಸಿದ ಮೇಲೆ ರಿಟರ್ನಿಂಗ್ ಅಧಿಕಾರಿಯು, ಆ ವಿಷಯವನ್ನು ತೀರ್ಮಾನಿಸತಕ್ಕದ್ದು ಮತ್ತು ಪೂರ್ಣವಾಗಿ ಅಥವಾ ಭಾಗಶಃವಾಗಿ ಅರ್ಜಿಯನ್ನು ಅನುಮತಿಸಬಹುದು ಅಥವಾ ಅದು ಕ್ಷುಲ್ಲಕವಾದುದು ಅಥವಾ ಅಸಮಂಜಸವಾದುದೆಂದು ಅವರಿಗೆ ಕಂಡುಬಂದರೆ ಸಂಪೂರ್ಣವಾಗಿ ತಿರಸ್ಕರಿಸಬಹುದು.

(4) ಉಪ-ನಿಯಮ (3)ರ ಅಡಿಯಲ್ಲಿ ರಿಟರ್ನಿಂಗ್ ಅಧಿಕಾರಿಯ ಪ್ರತಿಯೊಂದು ತೀರ್ಮಾನ ಮತ್ತು ಅದಕ್ಕೆ ಸಂಬಂಧಿಸಿದ ಕಾರಣಗಳು ಲಿಖಿತದಲ್ಲಿರತಕ್ಕದ್ದು.

(5) ಉಪ-ನಿಯಮ (3)ರ ಅಡಿಯಲ್ಲಿ ರಿಟರ್ನಿಂಗ್ ಅಧಿಕಾರಿಯು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಮತಗಳ ಮರು ಎಣಿಕೆಗೆ ಅವಕಾಶ ಮಾಡಿಕೊಡಲು ತೀರ್ಮಾನಿಸಿದರೆ, ಅವನು-

(i) ಮತ ಎಣಿಕೆಗಾಗಿ ಅನ್ವಯವಾಗುವ ನಿಯಮಗಳ ಅನುಸಾರವಾಗಿ ಮತ ಎಣಿಕೆಯನ್ನು ಮಾಡತಕ್ಕದ್ದು;

(ii) ಅಂಥ ಮರು ಎಣಿಕೆಯ ತರುವಾಯ ಅವಶ್ಯವಾದಷ್ಟು ಮಟ್ಟಿಗೆ ನಮೂನೆ-23ರಲ್ಲಿ ಫಲಿತಾಂಶ ಹಾಳೆಯನ್ನು ತಿದ್ದುಪಡಿ ಮಾಡತಕ್ಕದ್ದು; ಮತ್ತು

(iii) ಅವನು ಹಾಗೆ ಮಾಡಲಾದ ತಿದ್ದುಪಡಿಗಳನ್ನು ಪ್ರಕಟಿಸತಕ್ಕದ್ದು.

(6) ಪ್ರತಿಯೊಬ್ಬ ಅಭ್ಯರ್ಥಿಗೆ ಹಾಕಲಾದ ಒಟ್ಟು ಮತಗಳನ್ನು (1) ನೇ ಉಪ-ನಿಯಮದ ಅಥವಾ (5)ನೇ ಉಪ-ನಿಯಮದ ಮೇರೆಗೆ ಪ್ರಕಟಿಸಿದ ತರುವಾಯ, ರಿಟರ್ನಿಂಗ್ ಅಧಿಕಾರಿಯು ನಮೂನೆ-23ರಲ್ಲಿ ಫಲಿತಾಂಶ ಹಾಳೆಯನ್ನು ಪೂರ್ಣಗೊಳಿಸಿ ಸಹಿ ಮಾಡತಕ್ಕದ್ದು ಮತ್ತು ಆ ತರುವಾಯ ಮರು ಎಣಿಕೆಗಾಗಿ ಯಾವುದೇ ಅರ್ಜಿಯನ್ನು ಸ್ವೀಕರಿಸತಕ್ಕದ್ದಲ್ಲ.

ಪರಂತು, ಎಣಿಕೆಯ ಮುಕ್ತಾಯದಲ್ಲಿ ಹಾಜರಿದ್ದ ಅಭ್ಯರ್ಥಿಗಳು ಮತ್ತು ಚುನಾವಣಾ ಏಜೆಂಟರುಗಳಿಗೆ (2)ನೇ ಉಪ-ನಿಯಮದ ಮೂಲಕ ಪ್ರದತ್ತವಾದ ಹಕ್ಕನ್ನು ಚಲಾಯಿಸಲು ಯುಕ್ತ ಅವಕಾಶವನ್ನು ನೀಡುವವರೆಗೂ ಮತ ಎಣಿಕೆ ಪೂರ್ಣಗೊಂಡ ಮೇಲೆ ಈ ಉಪ-ನಿಯಮದ ಮೇರೆಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳತಕ್ಕದ್ದಲ್ಲ.

**76. ಬಳಸಿದ ಮತ ಪತ್ರಗಳನ್ನು ಮೊಹರು ಮಾಡುವುದು.-** ಸಿಂಧುವಾದ ಮತಪತ್ರಗಳು ಮತ್ತು ತಿರಸ್ಕೃತ ಮತಪತ್ರಗಳನ್ನು ಆ ತರುವಾಯ ಪ್ರತ್ಯೇಕವಾಗಿ ಕಟ್ಟಿಡತಕ್ಕದ್ದು ಮತ್ತು ಪ್ರತ್ಯೇಕ ಪ್ಯಾಕೆಟಿನಲ್ಲಿ (ಲಕೋಟೆಯಲ್ಲಿ) ಇಡಲಾದ ಬಂಡಲ್‌ಗಳಿಗೆ ರಿಟರ್ನಿಂಗ್ ಅಧಿಕಾರಿ ಮತ್ತು ಅದರ ಮೇಲೆ ಅವರ ಮೊಹರುಗಳನ್ನು ಹಾಕಲು ಇಚ್ಛಿಸಬಹುದಾದಂಥ ಅಭ್ಯರ್ಥಿಗಳು, ಅವರ ಚುನಾವಣ ಏಜೆಂಟರುಗಳು ಅಥವಾ ಮತ ಎಣಿಕೆ ಏಜೆಂಟರುಗಳ ಮೊಹರುಗಳಿಂದ ಮೊಹರು ಮಾಡತಕ್ಕದ್ದು ಮತ್ತು ಹಾಗೆ ಮೊಹರು ಮಾಡಲಾದ ಪ್ಯಾಕೆಟ್‌ಗಳ (ಲಕೋಟೆಗಳ) ಮೇಲೆ ಈ ಕೆಳಕಂಡ ವಿವರಗಳನ್ನು ದಾಖಲಿಸತಕ್ಕದ್ದು ಎಂದರೆ-

(i) ವಾರ್ಡಿನ ಹೆಸರು; ಮತ್ತು
(ii) ಮತ ಎಣಿಕೆ ದಿನಾಂಕ.

**77. ಚುನಾವಣಾ ಫಲಿತಾಂಶದ ಘೋಷಣೆ ಮತ್ತು ಚುನಾವಣೆಯ ವಿವರಪಟ್ಟಿಕೆ.-** ರಿಟರ್ನಿಂಗ್ ಅಧಿಕಾರಿಯು 20ನೇ ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವುದೇ ನಿರ್ದಿಷ್ಟ ಪ್ರಕರಣಕ್ಕೆ ಅವು ಅನ್ವಯಿಸಿದರೆ ಮತ್ತು ಅನ್ವಯವಾಗುವಷ್ಟರಮಟ್ಟಿಗೆ ಆ ನಂತರ.-

(ಎ) ನಮೂನೆ-24ರಲ್ಲಿ, ಸಿಂಧುವಾದ ಹೆಚ್ಚಿನ ಸಂಖ್ಯೆಯ ಮತಗಳನ್ನು ಯಾರಿಗೆ ನೀಡಲಾಗಿದೆಯೋ ಆ ಅಭ್ಯರ್ಥಿಯನ್ನು ಆಯ್ಕೆಯಾಗಿರುವುದಾಗಿ ಘೋಷಿಸತಕ್ಕದು ಮತ್ತು ಸರ್ಕಾರಕ್ಕೆ, ರಾಜ್ಯ ಚುನಾವಣಾ ಆಯೋಗಕ್ಕೆ ಮತ್ತು ಮುಖ್ಯ ಆಯುಕ್ತರಿಗೆ ಸಹಿ ಮಾಡಿದ ಅದರ ಪ್ರತಿಯನ್ನು ಕಳುಹಿಸತಕ್ಕದ್ದು; ಮತ್ತು

(ಬಿ) ನಮೂನೆ-25ರಲ್ಲಿ ಚುನಾವಣಾ ವಿವರಪಟ್ಟಿಗಳನ್ನು ಪೂರ್ಣಗೊಳಿಸಿ ಪ್ರಮಾಣಿಸತಕ್ಕದ್ದು ಮತ್ತು ಸರ್ಕಾರಕ್ಕೆ, ರಾಜ್ಯ ಚುನಾವಣಾ ಆಯೋಗಕ್ಕೆ ಮತ್ತು ಆಯುಕ್ತರಿಗೆ ಸಹಿ ಮಾಡಿದ ಅದರ ಪ್ರತಿಯನ್ನು ಕಳುಹಿಸತಕ್ಕದ್ದು.

**78. ಚನಾಯಿತ ಅಭ್ಯರ್ಥಿಗೆ ಚುನಾವಣಾ ಪ್ರಮಾಣಪತ್ರವನ್ನು ನೀಡುವುದು**.- 32 ಮತ್ತು 77ನೇ ನಿಯಮಗಳ ಉಪಬಂಧಗಳ ಮೇರೆಗೆ ರಿಟರ್ನಿಂಗ್ ಅಧಿಕಾರಿಯು ಚುನಾಯಿತ ಅಭ್ಯರ್ಥಿಯನ್ನು ಘೋಷಿಸಿದ ತರುವಾಯ ಆದಷ್ಟು ಬೇಗನೆ, ರಿಟರ್ನಿಂಗ್ ಅಧಿಕಾರಿಯು, ನಮೂನೆ-26ರಲ್ಲಿ ಚುನಾವಣಾ ಪ್ರಮಾಣಪತ್ರವನ್ನು ಅಂಥ ಅಭ್ಯರ್ಥಿಗೆ ನೀಡತಕ್ಕದ್ದು ಮತ್ತು ಅವರು ಕ್ರಮಬದ್ಧವಾಗಿ ಸಹಿ ಮಾಡಿದ ಅದರ ಸ್ವೀಕೃತಿಯನ್ನು ಅಭ್ಯರ್ಥಿಯಿಂದ ಪಡೆದುಕೊಳ್ಳತಕ್ಕದ್ದು ಮತ್ತು ಕೂಡಲೇ ಆಯುಕ್ತರಿಗೆ ಸ್ವೀಕೃತಿಯನ್ನು ಕಳುಹಿಸತಕ್ಕದ್ದು.

## ಅಧ್ಯಾಯ-IV
## ವಿದ್ಯುನ್ಮಾನ ಮತಯಂತ್ರಗಳ ಮೂಲಕ ಚುನಾವಣೆ ನಡೆಸುವ ಸಂದರ್ಭದಲ್ಲಿ

**79. ವಿದ್ಯುನ್ಮಾನ ಮತಯಂತ್ರಗಳ ವಿನ್ಯಾಸ.-** (1) ಈ ಅಧ್ಯಾಯದ ಉಪಬಂಧಗಳು, ಚುನಾವಣೆಗಳನ್ನು ನಡೆಸಿದ ಸಮಯದಲ್ಲಿ ಬಳಸಿದ ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಿರುವಲ್ಲೆಲ್ಲಾ ಅನ್ವಯವಾಗತಕ್ಕದ್ದು.

(2) ಪ್ರತಿಯೊಂದು ವಿದ್ಯುನ್ಮಾನ ಮತಯಂತ್ರವು ಎರಡು ಯುನಿಟ್‌ಗಳನ್ನು ಒಳಗೊಂಡಿರತಕ್ಕದ್ದು (ಇದರಲ್ಲಿ ಇನ್ನು ಮುಂದೆ ಮತಯಂತ್ರವೆಂದು ಉಲ್ಲೇಖಿಸಲಾಗಿದೆ) ಅದರಲ್ಲಿ

ಒಂದು ಕಂಟ್ರೋಲ್ ಯೂನಿಟ್ ಮತ್ತು ಮತ್ತೊಂದು ಬ್ಯಾಲೆಟ್ ಯೂನಿಟ್ ಇರತಕ್ಕದ್ದು ಮತ್ತು ರಾಜ್ಯ ಚುನಾವಣಾ ಆಯೋಗವು ಅನುಮೋದಿಸಬಹುದಾದಂತಹ ವಿನ್ಯಾಸದಲ್ಲಿ ಇರತಕ್ಕದ್ದು.

**80. ರಿಟರ್ನಿಂಗ್ ಅಧಿಕಾರಿಯಿಂದ ಮತಯಂತ್ರದ ಸಿದ್ಧತೆ.-** (1) ಮತಯಂತ್ರದ ಬ್ಯಾಲೆಟ್ ಯೂನಿಟ್, ಕನ್ನಡ ಭಾಷೆ ಮತ್ತು ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂತಹ ಇತರೆ ಭಾಷೆಗಳಲ್ಲಿ ಅಂತಹ ವಿವರಗಳನ್ನು ಒಳಗೊಂಡಿರತಕ್ಕದ್ದು.

(2) ಅಭ್ಯರ್ಥಿಗಳ ಹೆಸರುಗಳನ್ನು ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಅವು ಕಾಣಿಸುವಂತಹ ಪಟ್ಟಿಯಲ್ಲಿ ಅವುಗಳನ್ನು ತೋರಿಸಿರುವಂತಹ ಅದೇ ಕ್ರಮಾದೇಶದಲ್ಲಿ ಬ್ಯಾಲೆಟ್ ಯುನಿಟ್‌ನಲ್ಲಿ ವ್ಯವಸ್ಥೆಗೊಳಿಸತಕ್ಕದ್ದು.

(3) ಒಂದು ವೇಳೆ ಎರಡು ಅಥವಾ ಹೆಚ್ಚಿನ ಅಭ್ಯರ್ಥಿಗಳು ಒಂದೇ ಹೆಸರನ್ನು ಹೊಂದಿದ್ದರೆ, ಅವರನ್ನು ಅವರ ತಂದೆಯ ಹೆಸರನ್ನು ಅಥವಾ ವಾಸಸ್ಥಳವನ್ನು ಸೇರಿಸುವ ಮೂಲಕ ಅಥವಾ ಯಾವುದೇ ಇತರ ರೀತಿಯಲ್ಲಿ ಗುರುತಿಸತಕ್ಕದ್ದು.

(4) ಈ ನಿಯಮದ ಹಿಂದೆ ಹೇಳಿದ ಉಪಬಂಧಗಳಿಗೊಳಪಟ್ಟು ರಿಟರ್ನಿಂಗ್ ಅಧಿಕಾರಿಯು-

(ಎ) ಬ್ಯಾಲೆಟ್ ಯುನಿಟ್‌ನಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರುಗಳು ಮತ್ತು ಚಿಹ್ನೆಯನ್ನು ಒಳಗೊಂಡಿರುವ ಗುರುತು ಚೀಟಿಯನ್ನು ಅಂಟಿಸತಕ್ಕದು ಮತ್ತು ಆತನ ಮೊಹರಿನೊಂದಿಗೆ ಮತ್ತು ಅಂತಹ ಸ್ಪರ್ಧಿಸುವ ಅಭ್ಯರ್ಥಿಗಳ ಅಥವಾ ಅವನ್ನು ಅಂಟಿಸಲು ಬಯಸುವಂಥ ಅಲ್ಲಿ ಹಾಜರಿರುವ ಅವರ ಚುನಾವಣಾ ಏಜೆಂಟರುಗಳ ಮೊಹರಿನೊಂದಿಗೆ ಆ ಬ್ಯಾಲೆಟಿಂಗ್ ಯೂನಿಟ್ ಅನ್ನು ಭದ್ರಪಡಿಸತಕ್ಕದ್ದು.

(ಬಿ) ಸ್ಪರ್ಧಿಸುವ ಅಭ್ಯರ್ಥಿಗಳ ಸಂಖ್ಯೆಯನ್ನು ಹೊಂದಿಸತಕ್ಕದ್ದು (ಸೆಟ್ ಮಾಡತಕ್ಕದ್ದು) ಮತ್ತು ಕಂಟ್ರೋಲ್ ಯುನಿಟ್‌ನಲ್ಲಿ ಅಭ್ಯರ್ಥಿ ಹೊಂದಿಕೆ (ಸೆಟ್) ವಿಭಾಗವನ್ನು ಮುಕ್ತಾಯಗೊಳಿಸತಕ್ಕದ್ದು ಮತ್ತು ಅದನ್ನು ಆತನ ಮೊಹರಿನೊಂದಿಗೆ ಮತ್ತು ಅಂತಹ ಸ್ಪರ್ಧಿಸುವ ಅಭ್ಯರ್ಥಿಗಳ ಅಥವಾ ಅದನ್ನು ಅಂಟಿಸಲು ಬಯಸುವಂಥ ಅಲ್ಲಿ ಹಾಜರಿರುವ ಅವರ ಚುನಾವಣಾ ಏಜೆಂಟ್‌ಗಳ ಮೊಹರಿನೊಂದಿಗೆ ಭದ್ರಪಡಿಸತಕ್ಕದ್ದು.

**81. ಮತದಾನ ಕೇಂದ್ರಗಳಲ್ಲಿ ವ್ಯವಸ್ಥೆಗಳು.-** (1) ಪ್ರತಿಯೊಂದು ಮತದಾನ ಕೇಂದ್ರದ ಹೊರಗೆ,-

(ಎ) ಮತದಾನ ಕೇಂದ್ರದಲ್ಲಿ ಮತ ಚಲಾಯಿಸಲು ಹಕ್ಕುಳ್ಳವರಾಗಿರುವಂಥ ಮತದಾರರು ಮತದಾನ ಕ್ಷೇತ್ರವನ್ನು ನಿರ್ದಿಷ್ಟಪಡಿಸುವ ಸೂಚನಾ ಪತ್ರ ಮತ್ತು ಮತದಾನ ಕ್ಷೇತ್ರದ ಒಂದಕ್ಕಿಂತ ಹೆಚ್ಚಿನ ಮತದಾನ ಕೇಂದ್ರವನ್ನು ಹೊಂದಿದ್ದರೆ ಹಾಗೆ ಹಕ್ಕುಳ್ಳವರಾಗಿರುವ ಮತದಾರರ ವಿವರಗಳು; ಮತ್ತು

(ಬಿ) ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯ ಒಂದು ಪ್ರತಿಯನ್ನು ಎದ್ದುಕಾಣುವಂತೆ ಪ್ರದರ್ಶಿಸತಕ್ಕದ್ದು;

(2) ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚಿನ ಮತದಾನದ ಅಂಕಣಗಳನ್ನು (ಪೋಲಿಂಗ್ ಕಂಪಾರ್ಟ್‌ಮೆಂಟ್‌ಗಳನ್ನು) ರಚಿಸತಕ್ಕದ್ದು. ಅದರಲ್ಲಿ ಮತದಾರರು ವೀಕ್ಷಣೆಯಿಂದ ಮುಕ್ತವಾಗಿ (ಗೌಪ್ಯವಾಗಿ) ಅವರ ಮತಗಳನ್ನು ಚಲಾಯಿಸಬಹುದು.

(3) ರಿಟರ್ನಿಂಗ್ ಅಧಿಕಾರಿಯು, ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಒಂದು ಮತಯಂತ್ರ ಮತ್ತು ಮತದಾರರ ಪಟ್ಟಿಗೆ ಸಂಬಂಧಿಸಿದ ಭಾಗದ ಪ್ರತಿಗಳು ಮತ್ತು ಮತದಾನ ನಡೆಸಲು ಅಗತ್ಯವಿರುವಂತಹ ಇತರೆ ಚುನಾವಣಾ ಸಾಮಗ್ರಿಗಳನ್ನು ಒದಗಿಸತಕ್ಕದ್ದು.

(4) ಉಪ-ನಿಯಮ (3)ರ ಉಪಬಂಧಗಳಿಗೆ ಬಾಧಕವಾಗದಂತೆ ರಿಟರ್ನಿಂಗ್ ಅಧಿಕಾರಿಯು ರಾಜ್ಯ ಚುನಾವಣಾ ಆಯೋಗದ ಪೂರ್ವಾನುಮೋದನೆಯೊಂದಿಗೆ, ಒಂದೇ (ಅದೇ) ಆವರಣದಲ್ಲಿ ಇರುವ ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಮತದಾನ ಕೇಂದ್ರಗಳಿಗಾಗಿ ಒಂದೇ ಸಾಮಾನ್ಯ ಮತಯಂತ್ರವನ್ನು ಒದಗಿಸಬಹುದು.

**82. ಮತದಾನ ಕೇಂದ್ರಗಳಿಗೆ ಪ್ರವೇಶ.-** 41ನೇ ನಿಯಮದ ಮೇರೆಗೆ ನಿರ್ದಿಷ್ಟಪಡಿಸಲಾದ ಉಪಬಂಧಗಳನ್ನು ಅನುಸರಿಸತಕ್ಕದ್ದು.

**83. ಮತದಾನಕ್ಕಾಗಿ ಮತಯಂತ್ರಗಳನ್ನು ಸಿದ್ಧಪಡಿಸುವುದು.-** (1) ಮತದಾನ ಕೇಂದ್ರದಲ್ಲಿ ಬಳಸಿದ ಪ್ರತಿಯೊಂದು ಮತಯಂತ್ರದ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್ ಈ ಕೆಳಕಂಡ ವಿವರಗಳೊಂದಿಗೆ ಗುರುತಿಸಿದ ಲೇಬಲ್ ಅನ್ನು ಹೊಂದಿರತಕ್ಕದ್ದು ಎಂದರೆ:-

(ಎ) ಕ್ರಮ ಸಂಖ್ಯೆ ಯಾವುದಾದರೂ ಇದ್ದರೆ ಮತ್ತು ಮತಕ್ಷೇತ್ರದ ಹೆಸರು;

(ಬಿ) ಸಂದರ್ಭಾನುಸಾರ, ಮತದಾನ ಕೇಂದ್ರ ಅಥವಾ ಕೇಂದ್ರಗಳ ಕ್ರಮ ಸಂಖ್ಯೆ ಮತ್ತು ಹೆಸರು;

(ಸಿ) ಯುನಿಟ್‌ನ ಕ್ರಮಸಂಖ್ಯೆ; ಮತ್ತು

(ಡಿ) ಮತದಾನದ ದಿನಾಂಕ.

(2) ಮತದಾನವನ್ನು ಪ್ರಾರಂಭಿಸುವುದಕ್ಕೆ ಮುಂಚೆ, ಪ್ರಿಸೈಡಿಂಗ್ ಅಧಿಕಾರಿಯು, ಮತಯಂತ್ರದಲ್ಲಿ ಯಾವುದೇ ಮತವು ಈಗಾಗಲೇ ದಾಖಲೆಯಾಗಿಲ್ಲ ಮತ್ತು (4)ನೇ ಉಪ-ನಿಯಮದಲ್ಲಿ ಉಲ್ಲೇಖಿಸಿದ ಪೇಪರ್ ಸೀಲ್ ಅನ್ನು ಹೊಂದಿದೆ ಎಂದು ಪೋಲಿಂಗ್ ಎಜೆಂಟ್‌ಗಳಿಗೆ ಮತ್ತು ಹಾಜರಿರುವ ಇತರ ವ್ಯಕ್ತಿಗಳಿಗೆ ಪ್ರದರ್ಶಿಸತಕ್ಕದ್ದು.

(3) ಮತಯಂತ್ರದ ಕಂಟ್ರೋಲ್ ಯೂನಿಟ್ ಅನ್ನು ಭದ್ರಗೊಳಿಸುವುದಕ್ಕಾಗಿ ಪೇಪರ್ ಸೀಲ್ ಅನ್ನು ಬಳಸತಕ್ಕದ್ದು ಮತ್ತು ಪ್ರಿಸೈಡಿಂಗ್ ಅಧಿಕಾರಿಯು ಪೇಪರ್ ಸೀಲ್‌ನ ಮೇಲೆ ಆತನ ಸಹಿಯನ್ನು ಹಾಕತಕ್ಕದ್ದು ಮತ್ತು ಸಹಿಯನ್ನು ಮಾಡಲು ಇಚ್ಛಿಸುವಂತಹ ಮತದಾನ ಏಜೆಂಟ್‌ಗಳ ಸಹಿಯನ್ನು ಅದರ ಮೇಲೆ ಪಡೆಯತಕ್ಕದ್ದು.

(4) ಪ್ರಿಸೈಡಿಂಗ್ ಅಧಿಕಾರಿಯು, ಹಾಗೆ ಸಹಿ ಮಾಡಿದ ಪೇಪರ್ ಸೀಲ್ ಅನ್ನು ಮತಯಂತ್ರದ ಕಂಟ್ರೋಲ್ ಯೂನಿಟ್ ಅದಕ್ಕಾಗಿ ಇರುವ ಸ್ಥಳದಲ್ಲಿ ಅಂಟಿಸತಕ್ಕದ್ದು ಮತ್ತು ಭದ್ರಪಡಿಸತಕ್ಕದ್ದು ಹಾಗೂ ಅದನ್ನು ಮೊಹರು ಮಾಡತಕ್ಕದ್ದು.

(5) ಕಂಟ್ರೋಲ್ ಯೂನಿಟ್ ಅನ್ನು ಭದ್ರಪಡಿಸುವುದಕ್ಕಾಗಿ ಬಳಸಿದ ಮೊಹರನ್ನು ಮೊಹರು ಮಾಡಿದ ನಂತರ ಆ ಮೊಹರನ್ನು ಒಡೆಯದೆ "ರಿಸಲ್ಟ್ ಬಟನ್" ಅನ್ನು ಒತ್ತಲು ಸಾಧ್ಯವಾಗದ ರೀತಿಯಲ್ಲಿ ಅಂಟಿಸತಕ್ಕದ್ದು.

(6) ಕಂಟ್ರೋಲ್ ಯೂನಿಟ್ ಅನ್ನು ಮುಚ್ಚತಕ್ಕದ್ದು ಹಾಗೂ ಭದ್ರಪಡಿಸತಕ್ಕದ್ದು ಮತ್ತು ಪ್ರಿಸೈಡಿಂಗ್ ಅಧಿಕಾರಿ ಮತ್ತು ಮತದಾನ ಏಜೆಂಟ್‌ಗಳಿಗೆ ಪೂರ್ಣವಾಗಿ ಕಾಣುವಂತೆ ಇಡತಕ್ಕದ್ದು ಮತ್ತು ಬ್ಯಾಲೆಟ್ ಯೂನಿಟ್ ಅನ್ನು ಮತದಾನ ಅಂಕಣದಲ್ಲಿ (ಪೋಲಿಂಗ್ ಕಂಪಾರ್ಟ್‌ಮೆಂಟ್) ಇಡತಕ್ಕದ್ದು.

**84. ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿ,-** ಮತದಾನವು ಪ್ರಾರಂಭವಾಗುವುದಕ್ಕೆ ಮುಂಚೆ, ಪ್ರಿಸೈಡಿಂಗ್ ಅಧಿಕಾರಿಯು, ಮತದಾನದ ಸಮಯದಲ್ಲಿ ಬಳಸಬೇಕಾದ ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿಯು-

(ಎ) 47ನೇ ನಿಯಮದ ಅನುಸಾರವಾಗಿ ಮಾಡಿದವುಗಳಲ್ಲದೆ ಇತರೆ ಯಾವುದೇ ನಮೂದುಗಳನ್ನು; ಮತ್ತು

(ಬಿ) 49ನೇ ನಿಯಮದ (2)ನೇ ಉಪ-ನಿಯಮದ (ಬಿ) ಖಂಡದ ಅನುಸಾರವಾಗಿ ಮಾಡಿದ ಗುರುತುಗಳಲ್ಲದೆ ಇತರ ಯಾವುದೇ ಗುರುತನ್ನು ಒಳಗೊಂಡಿಲ್ಲ ಎಂದು ಹಾಜರಿರುವ ಮತದಾನ ಏಜೆಂಟರುಗಳಿಗೆ ಮತ್ತು ಇತರರಿಗೆ ಪ್ರದರ್ಶಿಸತಕ್ಕದ್ದು.

**85. ಮಹಿಳಾ ಮತದಾರರಿಗೆ ಸೌಲಭ್ಯಗಳು.-** 42ನೇ ನಿಯಮದ ಮೇರೆಗೆ ನಿರ್ದಿಷ್ಟಪಡಿಸಲಾದ ಉಪಬಂಧಗಳು ಅನ್ವಯವಾಗತಕ್ಕದ್ದು.

**86. ಮತದಾರರನ್ನು ಗುರುತಿಸುವುದು.-** (1) ನಿಯಮ-43ರಲ್ಲಿ ನಿರ್ದಿಷ್ಟಪಡಿಸಲಾದ ಉಪಬಂಧಗಳನ್ನು ಅನುಸರಿಸತಕ್ಕದ್ದು.

(2) ಜನತಾ ಪ್ರಾತಿನಿಧ್ಯ ಅಧಿನಿಯಮ, 1950 (1950ರ ಕೇಂದ್ರ ಅಧಿನಿಯಮ 43)ರ ಅಡಿಯಲ್ಲಿ ರಚಿಸಲಾದ ಮತದಾರರ ನೋಂದಣಿ ನಿಯಮಗಳು, 1960ರ ಉಪಬಂಧಗಳ ಮೇರೆಗೆ ಗುರುತಿನ ಚೀಟಿಗಳನ್ನು ನೀಡಲಾದಂಥ ಮತದಾರರು ಇರುವ ಮತದಾನ ಕೇಂದ್ರದಲ್ಲಿ ಮತದಾರನು ತನ್ನ ಗುರುತಿನ ಚೀಟಿಯನ್ನು ಪಿಸೈಡಿಂಗ್ ಅಧಿಕಾರಿ ಅಥವಾ ಈ ಬಗ್ಗೆ ಅವನಿಂದ ಅಧಿಕೃತನಾದ ಪೋಲಿಂಗ್ ಅಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು.

**87. ಚುನಾವಣಾ ಕರ್ತವ್ಯದಲ್ಲಿರುವ ಸರ್ಕಾರಿ ನೌಕರರಿಗಾಗಿ ಸೌಲಭ್ಯಗಳು.-** 44ನೇ ನಿಯಮದ ಮೇರೆಗೆ ನಿರ್ದಿಷ್ಟಪಡಿಸಲಾದ ಉಪಬಂಧಗಳು ಅನ್ವಯವಾಗತಕ್ಕದ್ದು.

**88. ಗುರುತನ್ನು ಪ್ರಶ್ನಿಸುವುದು.-** 55ನೇ ನಿಯಮದ ಮೇರೆಗೆ ನಿರ್ದಿಷ್ಟಪಡಿಸಲಾದ ಉಪಬಂಧಗಳು ಅನ್ವಯವಾಗತಕ್ಕದ್ದು.

**89. ಮತ್ತೊಬ್ಬ ವ್ಯಕ್ತಿಯಂತೆ ನಟಿಸುವುದರ ವಿರುದ್ಧ ರಕ್ಷಣೆಗಳು.-** (1) ನಿಯಮ-56ರಲ್ಲಿ ನಿರ್ದಿಷ್ಟಪಡಿಸಲಾದ ಉಪಬಂಧಗಳು ಅನ್ವಯವಾಗತಕ್ಕದ್ದು.

(2) ಒಂದು ವೇಳೆ ಯಾರೇ ಮತದಾರನು 86ನೇ ನಿಯಮದ (3)ನೇ ಉಪ-ನಿಯಮದ ಮೂಲಕ ಅಗತ್ಯಪಡಿಸಲಾದಂತೆ ಆತನ ಗುರುತಿನ ಚೀಟಿಯನ್ನು ಹಾಜರುಪಡಿಸಲು ವಿಫಲನಾದರೆ ಅಥವಾ ನಿರಾಕರಿಸಿದರೆ, ಆತನಿಗೆ ಮತ ಚಲಾಯಿಸಲು ಅವಕಾಶ ನೀಡತಕ್ಕದ್ದಲ್ಲ.

(3) ಮತದಾನವು ಸಂಸದೀಯ ಚುನಾವಣಾ ಕ್ಷೇತ್ರ ಮತ್ತು/ಅಥವಾ ವಿಧಾನಸಭಾ ಚುನಾವಣಾ ಕ್ಷೇತ್ರ ಮತ್ತು ವಾರ್ಡಿನಲ್ಲಿ ಏಕಕಾಲದಲ್ಲಿ ಚುನಾವಣೆ ನಡೆದಿದ್ದರೆ, ಮತದಾರನ ಎಡಗೈ ಬೆರಳಿಗೆ ಅಳಿಸಲಾಗದ ಶಾಯಿಯಿಂದ ಗುರುತು ಮಾಡಲಾಗಿರುವಂಥ ಅಥವಾ ಅಂತಹ ಒಂದು ಚುನಾವಣೆಯಲ್ಲಿ ಆತನ ಗುರುತಿನ ಚೀಟಿಯನ್ನು ಹಾಜರುಪಡಿಸಿರುವಂಥ ಮತದಾರನನ್ನು, ಉಪ-ನಿಯಮ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದಾಗೂ ಇತರ ಚುನಾವಣೆಯಲ್ಲಿ ಆತನು ಮತ ಚಲಾಯಿಸಲು ಅನುಮತಿಸತಕ್ಕದ್ದು.

**90. ಮತ ಯಂತ್ರಗಳ ಮೂಲಕ ಮತ ಚಲಾಯಿಸುವುದಕ್ಕಾಗಿ ಕಾರ್ಯವಿಧಾನ.-** (1) ಮತದಾರನಿಗೆ ಮತ ಚಲಾಯಿಸಲು ಅನುಮತಿ ನೀಡುವ ಮುಂಚೆ, ಪೋಲಿಂಗ್ ಅಧಿಕಾರಿಯು.-

(ಎ) ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿಯಲ್ಲಿ ನಮೂದಿಸಿದಂತೆ ಮತದಾರರ ಪಟ್ಟಿಯ ಸಂಖ್ಯೆಯನ್ನು ನಮೂನೆ-27ರಲ್ಲಿ ಮತದಾರರ ರಿಜಿಸ್ಟರ್‌ನಲ್ಲಿ ದಾಖಲಿಸತಕ್ಕದ್ದು.

(ಬಿ) ಸದರಿ ಮತದಾರರ ರಿಜಿಸ್ಟರ್‌ನಲ್ಲಿ ಮತದಾರನ ಸಹಿ ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆಯತಕ್ಕದ್ದು; ಮತ್ತು

(ಸಿ) ಆತನಿಗೆ ಮತ ಚಲಾಯಿಸಲು ಅವಕಾಶ ನೀಡಲಾಗಿದೆ ಎಂದು ತೋರಿಸಲು ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿಯಲ್ಲಿ ಆ ಮತದಾರನ ಹೆಸರನ್ನು ಗುರುತು ಮಾಡತಕ್ಕದ್ದು.

ಪರಂತು, ಯಾರ ಮತದಾರನನ್ನು ಮತದಾರರ ರಿಜಿಸ್ಟರಲ್ಲಿ ಆತನ ಸಹಿಯನ್ನು ಅಥವಾ ಹೆಬ್ಬೆರಳಿನ ಗುರುತನ್ನು ಹಾಕದ ಹೊರತು ಮತ ಚಲಾಯಿಸಲು ಅನುಮತಿಸತಕ್ಕದ್ದಲ್ಲ.

(2) ಉಪ-ನಿಯಮ (1) ರಲ್ಲಿ ಏನೇ ಒಳಗೊಂಡಿದ್ದಾಗ್ಯೂ ಯಾರೇ ಪ್ರಿಸೈಡಿಂಗ್ ಅಧಿಕಾರಿ ಅಥವಾ ಪೋಲಿಂಗ್ ಅಧಿಕಾರಿ ಅಥವಾ ಯಾರೇ ಇತರ ಅಧಿಕಾರಿಯು ಮತದಾರರ ರಿಜಿಸ್ಟರಲ್ಲಿ ಮತದಾರನ ಹೆಬ್ಬೆರಳ ಗುರುತನ್ನು ದೃಢೀಕರಿಸುವುದು ಅವಶ್ಯಕವಾಗಿರತಕ್ಕದ್ದು.

**91. ಮತದಾನ ಕೇಂದ್ರದೊಳಗೆ ಮತದಾರರು ಮತದಾನದ ಗೌಪ್ಯತೆಯನ್ನು ಕಾಪಾಡುವುದು ಮತ್ತು ಮತದಾನ ಪ್ರಕ್ರಿಯೆ.-** (1) ನಿಯಮ 90ರ ಮೇರೆಗೆ ಮತ ಚಲಾಯಿಸಲು ಅನುಮತಿ ನೀಡಲಾಗಿರುವಂಥ ಪ್ರತಿಯೊಬ್ಬ ಮತದಾರನು ಮತದಾನ ಕೇಂದ್ರದೊಳಗೆ ಮತದಾನದ ಗೌಪ್ಯತೆಯನ್ನು ಕಾಪಾಡತಕ್ಕದು ಮತ್ತು ಆ ಉದ್ದೇಶಕ್ಕಾಗಿ ಇದರಲ್ಲಿ ಇನ್ನು ಮುಂದೆ ಹೇಳಲಾದ ಮತದಾನದ ಪ್ರಕ್ರಿಯೆಯನ್ನು ಪಾಲಿಸತಕ್ಕದ್ದು.

(2) ಮತ ಚಲಾಯಿಸಲು ಅನುಮತಿ ನೀಡಿದ ಕೂಡಲೆ ಮತದಾರನು ಪ್ರಿಸೈಡಿಂಗ್ ಅಧಿಕಾರಿ ಅಥವಾ ಮತಯಂತ್ರದ ಕಂಟ್ರೋಲ್ ಯುನಿಟ್‌ನ ಪ್ರಭಾರದಲ್ಲಿರುವ ಪೋಲಿಂಗ್ ಅಧಿಕಾರಿಯ ಕಡೆಗೆ ಹೋಗತಕ್ಕದ್ದು ಅವರು ಕಂಟ್ರೋಲ್ ಯುನಿಟ್‌ನಲ್ಲಿನ ಯುಕ್ತ ಗುಂಡಿಯನ್ನು ಒತ್ತುವ ಮೂಲಕ ಮತದಾರನ ಮತವನ್ನು ಸಕ್ರಿಯಗೊಳಿಸತಕ್ಕದ್ದು.

(3) ಆಮೇಲೆ ಮತದಾರನು ಕೂಡಲೇ.-

(ಎ) ಮತದಾನದ ಅಂಕಣದ ಕಡೆಗೆ ಹೋಗತಕ್ಕದ್ದು;

(ಬಿ) ಅವನು ಯಾರಿಗೆ ಮತ ನೀಡಲು ಉದ್ದೇಶಿಸಿರುವನೋ ಆ ಅಭ್ಯರ್ಥಿಯ ಹೆಸರು ಮತ್ತು ಚಿಹ್ನೆಯ ಎದುರು ಬ್ಯಾಲೆಟ್ ಯುನಿಟ್‌ನಲ್ಲಿರುವ ಗುಂಡಿಯನ್ನು ಒತ್ತುವುದುರ ಮೂಲಕ ಆತನ ಮತವನ್ನು ಚಲಾಯಿಸತಕ್ಕದ್ದು; ಮತ್ತು

(ಸಿ) ಮತದಾನದ ಅಂಕಣದಿಂದ ಹೊರಬರುವುದು ಮತ್ತು ಮತದಾನ ಕೇಂದ್ರವನ್ನು ಬಿಡುವುದು;

(4) ಪ್ರತಿಯೊಬ್ಬ ಮತದಾರನು ಅನುಚಿತ ವಿಳಂಬವಿಲ್ಲದ ಮತದಾನ ಮಾಡತಕ್ಕದ್ದು.

(5) ಇನ್ನೊಬ್ಬ ಮತದಾರನು ಮತದಾನದ ಅಂಕಣದೊಳಗೆ ಇರುವಾಗ ಯಾರೇ ಮತದಾರನನ್ನು ಮತದಾನದ ಅಂಕಣವನ್ನು ಪ್ರವೇಶಿಸಲು ಅವಕಾಶ ನೀಡತಕ್ಕದ್ದಲ್ಲ.

(6) ನಿಯಮ 90 ಅಥವಾ ನಿಯಮ 94ರ ಮೇರೆಗೆ ಮತವನ್ನು ಚಲಾಯಿಸಲು ಅನುಮತಿ ಹೊಂದಿದ ಮತದಾರನ್ನು (3)ನೇ ಉಪ-ನಿಯಮದಲ್ಲಿ ಹೇಳಲಾದ ಮತದಾನ ಪ್ರಕ್ರಿಯೆಯನ್ನು ಅನುಸರಿಸುವುದಕ್ಕಾಗಿ ಪ್ರಿಸೈಡಿಂಗ್ ಅಧಿಕಾರಿಯು ನೀಡಿದ ಎಚ್ಚರಿಕೆಯ ತರುವಾಯ ನಿರಾಕರಿಸಿದರೆ ಪ್ರಿಸೈಡಿಂಗ್ ಅಧಿಕಾರಿ ಅಥವಾ ಪ್ರಿಸೈಡಿಂಗ್ ಅಧಿಕಾರಿಯ ನಿರ್ದೇಶನದ ಮೇರೆಗೆ ಪೋಲಿಂಗ್ ಅಧಿಕಾರಿಯು ಅಂಥ ಮತದಾರನಿಗೆ ಮತ ಚಲಾಯಿಸಲು ಅನುಮತಿಸತಕ್ಕದ್ದಲ್ಲ.

(7) ಉಪ ನಿಯಮ 6ರ ಮೇರೆಗೆ ಮತದಾರನಿಗೆ ಮತವನ್ನು ಚಲಾಯಿಸಲು ಅನುಮತಿಯನ್ನು ನೀಡದಿದ್ದಾಗ ನಮೂನೆ-27ರ ಮತದಾರರ ರಿಜಿಸ್ಟರ್‌ನಲ್ಲಿ ಮತದಾರರ ಹೆಸರಿನ ಎದುರು ಮತದಾನ ಪ್ರಕ್ರಿಯೆಯನ್ನು ಉಲ್ಲಂಘಿಸಿದ್ದಾನೆಂಬ ಷರಾವನ್ನು ಪ್ರಿಸೈಡಿಂಗ್ ಅಧಿಕಾರಿಯು ತನ್ನ ಸಹಿ ಹಾಕುವುದರ ಮೂಲಕ ಬರೆಯತಕ್ಕದ್ದು.

**92. ಅಂಧ ಅಥವಾ ದುರ್ಬಲ ಅಥವಾ ದಿವ್ಯಾಂಗ ಮತದಾರರ ಮತಗಳನ್ನು ದಾಖಲು ಮಾಡುವುದು-** (1) ಅಂಧತ್ವ ಅಥವಾ ಇತರ ದೈಹಿಕ ದುರ್ಬಲತೆಯಿಂದಾಗಿ ಮತದಾರನು ಮತಯಂತ್ರದ ಬ್ಯಾಲೆಟ್ ಯುನಿಟ್‌ನ ಮೇಲಿರುವ ಚಿಹ್ನೆಗಳನ್ನು ಗುರುತಿಸಲು ಅಥವಾ ಸಹಾಯವಿಲ್ಲದೆ ಅದರ ಮೇಲಿನ ಯುಕ್ತ ಗುಂಡಿಯನ್ನು ಒತ್ತಲು ಅಸಮರ್ಥನಾಗಿರುವನೆಂದು ಪ್ರಿಸೈಡಿಂಗ್ ಅಧಿಕಾರಿಗೆ ಮನವರಿಕೆಯಾದರೆ, ಪ್ರಿಸೈಡಿಂಗ್ ಅಧಿಕಾರಿಯು ಆತನ ಪರವಾಗಿ ಮತ್ತು ಅವನ ಇಚ್ಛೆಗೆ ಅನುಸಾರವಾಗಿ ಮತವನ್ನು ದಾಖಲಿಸುವುದಕ್ಕಾಗಿ ಮತದಾನದ ಅಂಕಣದೊಳಗೆ ಹದಿನೆಂಟು ವರ್ಷಗಳ ವಯಸ್ಸಿಗೆ ಕಡಿಮೆಯಿರದ ಒಬ್ಬ ಜೊತೆಗಾರನನ್ನು ಅವನೊಂದಿಗೆ ಕರೆದುಕೊಂಡು ಹೋಗಲು ಅನುಮತಿ ನೀಡತಕ್ಕದ್ದು:

ಪರಂತು, ಯಾರೇ ವ್ಯಕ್ತಿಯನ್ನು ಅದೇ ದಿನದಂದು ಯಾವುದೇ ಮತದಾನ ಕೇಂದ್ರದಲ್ಲಿ ಒಂದಕ್ಕಿಂತ ಹೆಚ್ಚಿನ ಮತದಾರನಿಗೆ ಜೊತೆಗಾರನಾಗಿ ಕಾರ್ಯನಿರ್ವಹಿಸಲು ಅನುಮತಿಸತಕ್ಕದ್ದಲ್ಲ.

ಮತ್ತು ಪರಂತು, ಈ ನಿಯಮದ ಮೇರೆಗೆ ಯಾವುದೇ ದಿನದಂದು ಒಬ್ಬ ಮತದಾರನ ಜೊತೆಗಾರನಾಗಿ ಕಾರ್ಯನಿರ್ವಹಿಸಲು ಯಾರೇ ವ್ಯಕ್ತಿಗೆ ಅನುಮತಿ ನೀಡುವ ಮುಂಚೆ ಆ ವ್ಯಕ್ತಿಯು ಮತದಾರನ ಪರವಾಗಿ ಅವನು ದಾಖಲಿಸಿದ ಮತವನ್ನು ರಹಸ್ಯವಾಗಿ ಇಡತಕ್ಕದ್ದು ಮತ್ತು ಆ ದಿನದಂದು ಯಾವುದೇ ಇತರ ಮತದಾನ ಕೇಂದ್ರದಲ್ಲಿ ಯಾರೇ ಇತರ ಮತದಾರನ ಜೊತೆಗಾರನಾಗಿ ಈಗಾಗಲೇ ಕಾರ್ಯನಿರ್ವಹಿಸಿಲ್ಲ ಎಂಬುದಾಗಿ ಘೋಷಿಸುವಂತೆ ಆತನನ್ನು ಅಗತ್ಯಪಡಿಸತಕ್ಕದ್ದು.

(2) ಪಿಸೈಡಿಂಗ್ ಅಧಿಕಾರಿಯು. ಈ ನಿಯಮದ ಮೇರೆಗೆ ಎಲ್ಲಾ ಪ್ರಕರಣಗಳನ್ನು ನಮೂನೆ-18ರಲ್ಲಿ ದಾಖಲೆ ಇಡತಕ್ಕದ್ದು.

**93. ಮತದಾರನು ಮತ ಚಲಾಯಿಸದಿರಲು ನಿರ್ಧರಿಸುವುದು.-** ಒಂದು ವೇಳೆ ಮತದಾರನು 90ನೇ ನಿಯಮದ (1)ನೇ ಉಪ-ನಿಯಮದ ಮೇರೆಗೆ ಅಗತ್ಯಪಡಿಸಲಾದಂತೆ ನಮೂನೆ-27ರಲ್ಲಿ ಮತದಾರರ ರಿಜಿಸ್ಟರ್‌ನಲ್ಲಿ ಆತನ ಮತದಾರರ ಪಟ್ಟಿಯ ಸಂಖ್ಯೆಯನ್ನು ದಾಖಲಿಸಿದ ಮತ್ತು ಅದರ ಮೇಲೆ ಆತನ ಸಹಿ ಅಥವಾ ಹೆಬ್ಬೆರಳ ಗುರುತನ್ನು ಹಾಕಿದ ನಂತರ ಆತನು ಮತವನ್ನು ಚಲಾಯಿಸದಿರಲು ನಿರ್ಧರಿಸಿದರೆ, ಪ್ರಿಸೈಡಿಂಗ್ ಅಧಿಕಾರಿಯು ನಮೂನೆ-27ರಲ್ಲಿ ಸದರಿ ನಮೂದಿನ ಎದುರು ಈ ಬಗ್ಗೆ ಒಂದು ಷರಾವನ್ನು ಬರೆಯತಕ್ಕದ್ದು ಮತ್ತು ಅಂತಹ ಷರಾದ ಎದುರು ಮತದಾರನ ಸಹಿ ಅಥವಾ ಹೆಬ್ಬೆರಳ ಗುರುತನ್ನು ಪಡೆಯತಕ್ಕದ್ದು.

**94. ಟೆಂಡರ್ಡ್ ಮತಗಳು-** (1) ಒಂದು ವೇಳೆ ತಾನೇ ನಿರ್ದಿಷ್ಟ ಮತದಾರ ಎಂದು ಹೇಳಿಕೊಳ್ಳುವ ಒಬ್ಬ ಅಂಥ ಮತದಾರನೆಂದು ಈಗಾಗಲೇ ಒಬ್ಬ ವ್ಯಕ್ತಿಯು ಮತ ಚಲಾಯಿಸಿದ ನಂತರ, ಮತದಾನ ಮಾಡಲು ಕೇಳಿಕೊಂಡರೆ, ಆತನು ಪ್ರಿಸೈಡಿಂಗ್ ಅಧಿಕಾರಿಯು ಕೇಳಬಹುದಾದಂತಹ, ಆತನ ಗುರುತಿಗೆ ಸಂಬಂಧಿಸಿದ ಅಂತಹ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರವನ್ನು ನೀಡಿದ ಮೇಲೆ, ಬ್ಯಾಲೆಟ್ ಯುನಿಟ್‌ನ ಮೂಲಕ ಮತ ಚಲಾಯಿಸಲು ಅನುಮತಿಸುವ ಬದಲು ರಾಜ್ಯ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಬಹುದಾದಂತಹ ವಿನ್ಯಾಸದಲ್ಲಿರುವಂಥ ಮತ್ತು ವಿವರಗಳು ಕನ್ನಡ ಮತ್ತು ಇತರೆ ಭಾಷೆಗಳಲ್ಲಿರುವಂಥ ಟೆಂಡರ್ಡ್ ಮತ ಪತ್ರವನ್ನು ಒದಗಿಸತಕ್ಕದ್ದು.

(2) ಅಂಥ ಪ್ರತಿಯೊಬ್ಬ ಮತದಾರನು ಟೆಂಡರ್ಡ್ ಮತಪತ್ರವನ್ನು ಆತನಿಗೆ ಒದಗಿಸುವುದಕ್ಕೆ ಮುಂಚೆ, ನಮೂನ 19-ಎ ನಲ್ಲಿ ಅವನಿಗೆ ಸಂಬಂಧಿಸಿದ ನಮೂದಿನ ಎದುರು ಆತನ ಹೆಸರನ್ನು ಬರೆಯತಕ್ಕದ್ದು.

(3) ಮತ ಪತ್ರವನ್ನು ಸ್ವೀಕರಿಸಿದ ಕೂಡಲೇ ಪ್ರತಿಯೊಬ್ಬ ಮತದಾರನ್ನು,-

(ಎ) ಮತದಾನ ಅಂಕಣದ ಕಡೆಗೆ ಹೋಗತಕ್ಕದ್ದು;

(ಬಿ) ಆತನು ಯಾವ ಅಭ್ಯರ್ಥಿಗೆ ಮತವನ್ನು ಹಾಕಲು ಉದ್ದೇಶಿಸಿರುವನೋ ಆ ಅಭ್ಯರ್ಥಿಯ `ಚಿಹ್ನೆಯ ಮೇಲೆ ಅಥವಾ ಸಮೀಪದಲ್ಲಿ ಆ ಉದ್ದೇಶಕ್ಕಾಗಿ ಒದಗಿಸಲಾದ ಉಪಕರಣ ಅಥವಾ ಸಾಧನದಿಂದ 'X' ಗುರುತನ್ನು ಹಾಕುವ ಮೂಲಕ ಮತಪತ್ರದ ಮೇಲೆ ಆತನ ಮತವನ್ನು ದಾಖಲಿಸತಕ್ಕದ್ದು;

(ಸಿ) ಆತನ ಮತವನ್ನು ಮರೆಮಾಚುವ ಹಾಗೆ ಮತಪತ್ರವನ್ನು ಮಡಚತಕ್ಕದ್ದು;

(ಡಿ) ಅಗತ್ಯಪಡಿಸಿದರೆ, ಪ್ರಿಸೈಡಿಂಗ್ ಅಧಿಕಾರಿಗೆ ಮತಪತ್ರದ ಮೇಲಿನ ವಿಶೇಷ ಗುರುತನ್ನು ತೋರಿಸತಕ್ಕದ್ದು;

(ಇ) ಅದನ್ನು ಪ್ರಿಸೈಡಿಂಗ್ ಅಧಿಕಾರಿಗೆ ನೀಡತಕ್ಕದ್ದು. ಅವರು ಅದನ್ನು ಈ ಉದ್ದೇಶಕ್ಕಾಗಿ ವಿಶೇಷವಾಗಿ ಇಡಲಾದ ಲಕೋಟೆಯಲ್ಲಿ ಇಡತಕ್ಕದ್ದು; ಮತ್ತು

(ಎಫ್) ಮತದಾನ ಕೇಂದ್ರದಿಂದ ತೆರಳತಕ್ಕದ್ದು.

(4) ಒಂದು ವೇಳೆ ಅಂಧತ್ವ ಅಥವಾ ದೈಹಿಕ ದುರ್ಬಲತೆಯನ್ನು ಹೊಂದಿರುವಂಥ ಮತದಾರನು, ಸಹಾಯವಿಲ್ಲದೆ ತನ್ನ ಮತವನ್ನು ದಾಖಲು ಮಾಡಲು ಅಸಮರ್ಥನಾದರೆ, ಪ್ರಿಸೈಡಿಂಗ್ ಅಧಿಕಾರಿಯು, ಆತನ ಇಚ್ಛೆಗೆ ಅನುಸಾರವಾಗಿ ಮತವನ್ನು ದಾಖಲಿಸುವ ಷರತ್ತಿಗೊಳಪಟ್ಟು ಮತ್ತು 92ನೇ ನಿಯಮದ ಮೇರೆಗೆ ನಿರ್ದಿಷ್ಟಪಡಿಸಲಾದಂತೆ ಪ್ರಕ್ರಿಯೆಯನ್ನು ಅನುಸರಿಸುವುದಕ್ಕಾಗಿ ಒಬ್ಬ ಸಂಗಡಿಗನನ್ನು ಅವನೊಂದಿಗೆ ಕರೆದುಕೊಂಡು ಹೋಗಲು ಅನುಮತಿ ನೀಡತಕ್ಕದ್ದು.

**95. ಮತದಾನದ ಸಂದರ್ಭದಲ್ಲಿ ಮತದಾನದ ಅಂಕಣಕ್ಕೆ ಪ್ರಿಸೈಡಿಂಗ್ ಅಧಿಕಾರಿಯ ಪ್ರವೇಶ.**- (1) ಪ್ರಿಸೈಡಿಂಗ್ ಅಧಿಕಾರಿಯು, ಅವನು ಹಾಗೆ ಮಾಡುವುದು ಅವಶ್ಯಕವೆಂದು ಪರಿಗಣಿಸಿದಾಗಲೆಲ್ಲಾ ಮತದಾನದ ಸಂದರ್ಭದಲ್ಲಿ ಮತದಾನದ ಅಂಕಣಕ್ಕೆ ಪ್ರವೇಶಿಸಬಹುದು ಮತ್ತು ಬ್ಯಾಲೆಟ್ ಯೂನಿಟ್ ಅನ್ನು ವ್ಯತ್ಯಸ್ತಗೊಳಿಸಿಲ್ಲ ಅಥವಾ ಯಾವುದೇ ರೀತಿಯಲ್ಲಿ ಹಸ್ತಕ್ಷೇಪ ಮಾಡಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳಲು ಅವಶ್ಯಕವಾಗಬಹುದಾದಂತಹ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(2) ಮತದಾನದ ಅಂಕಣಕ್ಕೆ ಪ್ರವೇಶಿಸಿದಂಥ ಮತದಾರನು, ಬ್ಯಾಲೆಟ್ ಯೂನಿಟ್ ಅನ್ನು ವ್ಯತ್ಯಾಸ್ತಗೊಳಿಸುತ್ತಿರುವನೆಂದು ಅಥವಾ ಅನ್ಯಥಾ ಹಸ್ತಕ್ಷೇಪ ಮಾಡುತ್ತಿರುವ ಬಗ್ಗೆ ಮತದಾನದ ಅಂಕಣದೊಳಗೆ ಅನುಚಿತವಾಗಿ ದೀರ್ಘ ಕಾಲ ಉಳಿದಿರುವನೆಂದು ಪ್ರಿಸೈಡಿಂಗ್ ಅಧಿಕಾರಿಯು ಸಂಶಯಗೊಳ್ಳಲು ಕಾರಣಗಳಿದ್ದರೆ, ಅವರು ಮತದಾನದ ಅಂಕಣದೊಳಗೆ ಪ್ರವೇಶಿಸತಕ್ಕದ್ದು ಮತ್ತು ಮತದಾನವು ಸುಸೂತ್ರವಾಗಿ ಮತ್ತು ಕ್ರಮಬದ್ಧವಾಗಿ ನಡೆಯುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಅವಶ್ಯಕವಾಗಬಹುದಾದಂತಹ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

(3) ಈ ನಿಯಮದ ಮೇರೆಗೆ ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ಅಂಕಣಕ್ಕೆ ಯಾವಾಗಲಾದರೂ ಪ್ರವೇಶಿಸಿದರೆ, ಹಾಜರಿರುವ ಪೋಲಿಂಗ್ ಏಜೆಂಟರು ಅವರು ಹಾಗೆ ಇಚ್ಛಿಸಿದರೆ ಅವನು ಅವರನ್ನು ತನ್ನ ಜೊತೆಗೆ ಇರಲು ಅನುಮತಿಸತಕ್ಕದ್ದು.

**96. ಮತದಾನದ ಮುಕ್ತಾಯ.-** 61ನೇ ನಿಯಮದ ಮೇರೆಗೆ ನಿರ್ದಿಷ್ಟಪಡಿಸಲಾದ ಉಪಬಂಧಗಳು ಅನ್ವಯವಾಗತಕ್ಕದ್ದು.

**97. ದಾಖಲಿಸಿದ ಮತಗಳ ಲೆಕ್ಕ.-** (1) ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ಮುಕ್ತಾಯದಲ್ಲಿ ನಮೂನೆ-20ಎ (ಇವಿಎಂ)ನಲ್ಲಿ ದಾಖಲಿಸಿದ ಮತಗಳ ಲೆಕ್ಕವನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ಪ್ರತ್ಯೇಕ ಲಕೋಟೆಯಲ್ಲಿಟ್ಟು ಅದರ ಮೇಲೆ "ದಾಖಲಿಸಿದ ಮತಗಳ ಲೆಕ್ಕ" ಎಂದು ಮೇಲುಬರಹ ಮಾಡತಕ್ಕದ್ದು.

(2) ಪ್ರಿಸೈಡಿಂಗ್ ಅಧಿಕಾರಿಯು ಮತದಾನದ ಮುಕ್ತಾಯದಲ್ಲಿ ಹಾಜರಿರುವ ಪ್ರತಿಯೊಬ್ಬ ಮತದಾನ ಏಜೆಂಟನಿಗೆ ಅದಕ್ಕಾಗಿ ಸದರಿ ಪೋಲಿಂಗ್ ಏಜೆಂಟನಿಂದ ಸ್ವೀಕೃತಿಯನ್ನು ಪಡೆದ ನಂತರ ನಮೂನೆ-20ಎ (ಇವಿಎಂ)ನಲ್ಲಿ ಮಾಡಲಾದ ನಮೂದುಗಳ ನೈಜ ಪ್ರತಿಯನ್ನು ಒದಗಿಸತಕ್ಕದ್ದು ಮತ್ತು ಅದನ್ನು ನೈಜ ಪ್ರತಿಯೆಂದು ದೃಢೀಕರಿಸತಕ್ಕದ್ದು.

**98. ಮತದಾನದ ತರುವಾಯ ಮತಯಂತ್ರವನ್ನು ಮೊಹರು ಮಾಡುವುದು.-** (1) ಮತದಾನದ ಮುಕ್ತಾಯವಾದ ತರುವಾಯ ಸಾಧ್ಯವಾದಷ್ಟು ಬೇಗನೆ ಪ್ರಿಸೈಡಿಂಗ್ ಅಧಿಕಾರಿಯು ಹೆಚ್ಚಿನ ಯಾವುದೇ ಮತಗಳನ್ನು ದಾಖಲಿಸಲಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಕಂಟ್ರೋಲ್ ಯೂನಿಟ್ ಅನ್ನು ಮುಚ್ಚತಕ್ಕದ್ದು ಮತ್ತು ಕಂಟ್ರೋಲ್ ಯೂನಿಟ್‌ನಿಂದ ಬ್ಯಾಲೆಟ್ ಯೂನಿಟ್ ಅನ್ನು ಬೇರ್ಪಡಿಸತಕ್ಕದ್ದು.

(2) ಆ ತರುವಾಯ ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್ ಅನ್ನು ಮೊಹರು ಮಾಡತಕ್ಕದು ಮತ್ತು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂತಹ ರೀತಿಯಲ್ಲಿ ಪ್ರತ್ಯೇಕವಾಗಿ ಭದ್ರಪಡಿಸತಕ್ಕದ್ದು ಮತ್ತು ಅವುಗಳನ್ನು ಭದ್ರಪಡಿಸಲು ಬಳಸಿದ ಮೊಹರುಗಳನ್ನು ಒಡೆಯದೆ ಯೂನಿಟ್‌ಗಳನ್ನು ತೆರೆಯಲು ಸಾಧ್ಯವಾಗದ ರೀತಿಯಲ್ಲಿ ಅಂಟಿಸತಕ್ಕದ್ದು.

(3) ಮತದಾನ ಕೇಂದ್ರದಲ್ಲಿ ಹಾಜರಿರುವ ಪೋಲಿಂಗ್ ಏಜೆಂಟರುಗಳು ಮೊಹರುಗಳನ್ನು ಹಾಕಲು ಇಚ್ಛಿಸಿದರೆ ಅವರಿಗೆ ಹಾಗೆ ಮಾಡಲು ಅವಕಾಶ ನೀಡತಕ್ಕದ್ದು.

**99. ಇತರ ಪ್ಯಾಕೆಟ್‌ಗಳನ್ನು ಮೊಹರು ಮಾಡುವುದು-** (1) ಪ್ರಿಸೈಡಿಂಗ್ ಅಧಿಕಾರಿಯು-

(ಎ) ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿ;
(ಬಿ) ನಮೂನೆ-27 ರಲ್ಲಿ ಮತದಾರರ ರಿಜಿಸ್ಟರ್;
(ಸಿ) ಟೆಂಡರ್ಡ್ ಮತಪತ್ರಗಳನ್ನು ಒಳಗೊಂಡಿರುವ ಲಕೋಟೆ ಮತ್ತು ನಮೂನೆ-19ಎ ನಲ್ಲಿನ ಪಟ್ಟಿ;
(ಡಿ) ಆಕ್ಷೇಪಿತ ಮತದಾರರ ಪಟ್ಟಿ; ಮತ್ತು
(ಇ) ಮೊಹರು ಮಾಡಿದ ಲಕೋಟೆಯಲ್ಲಿ ಇಡಬೇಕಾದ ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಿದ ಯಾವುದೇ ಇತರೆ ಕಾಗದ ಪತ್ರಗಳು

- ಇವುಗಳನ್ನು ಪ್ರತ್ಯೇಕ ಪ್ಯಾಕೆಟ್‌ಗಳನ್ನಾಗಿ ಮಾಡತಕ್ಕದ್ದು.

(2) ಪ್ರತಿಯೊಂದು ಪ್ಯಾಕೆಟ್ ಅನ್ನು ಪ್ರಿಸೈಡಿಂಗ್ ಅಧಿಕಾರಿಯ ಸೀಲ್‌ನೊಂದಿಗೆ ಮೊಹರು ಮಾಡತಕ್ಕದ್ದು ಮತ್ತು ಅಭ್ಯರ್ಥಿಯ ಅಥವಾ ಮತದಾನ ಕೇಂದ್ರದಲ್ಲಿ ಹಾಜರಿರುವ ಮತ್ತು ಅವುಗಳ ಮೇಲೆ ತನ್ನ ಮೊಹರನ್ನು ಹಾಕಲು ಇಚ್ಛಿಸುವ ಆತನ ಚುನಾವಣಾ ಏಜೆಂಟ್ ಅಥವಾ ಪೋಲಿಂಗ್ ಏಜೆಂಟ್‌ನ ಯಾರಾದರೊಬ್ಬರು ಮೊಹರು ಮಾಡತಕ್ಕದ್ದು.

**100. ಮತಯಂತ್ರಗಳು ಮುಂತಾದವುಗಳನ್ನು ರಿಟರ್ನಿಂಗ್ ಅಧಿಕಾರಿಗೆ ರವಾನಿಸುವುದು.-** (1) ಪ್ರಿಸೈಡಿಂಗ್ ಅಧಿಕಾರಿಯು, ರಿಟರ್ನಿಂಗ್ ಅಧಿಕಾರಿಯು ನಿರ್ದೇಶಿಸಬಹುದಾದಂಥ ಸ್ಥಳದಲ್ಲಿ ರಿಟರ್ನಿಂಗ್ ಅಧಿಕಾರಿಗೆ,-

(ಎ) ಮತಯಂತ್ರ;
(ಬಿ) ನಮೂನೆ -20ಎ (ಇವಿಎಂ) ನಲ್ಲಿ ದಾಖಲಿಸಿದ ಮತಗಳ ಲೆಕ್ಕ;

(ಸಿ) 99ನೇ ನಿಯಮದಲ್ಲಿ ಉಲ್ಲೇಖಿಸಲಾದ ಮೊಹರು ಮಾಡಿದ ಪ್ಯಾಕೆಟ್‌ಗಳು;
(ಡಿ) ಮತದಾನದಲ್ಲಿ ಬಳಸಲಾದ ಎಲ್ಲಾ ಕಾಗದ ಪತ್ರಗಳು
- ಇವುಗಳನ್ನು ನೀಡತಕ್ಕದ್ದು ಅಥವಾ ನೀಡುವಂತೆ ಮಾಡತಕ್ಕದ್ದು.

(2) ರಿಟರ್ನಿಂಗ್ ಅಧಿಕಾರಿಯು ಮತಗಳ ಎಣಿಕೆ ಪ್ರಾರಂಭವಾಗುವವರೆಗೆ ಮತಯಂತ್ರಗಳು, ಪ್ಯಾಕೆಟ್‌ಗಳು ಮತ್ತು ಇತರೆ ಕಾಗದ ಪತ್ರಗಳನ್ನು ಸುರಕ್ಷಿತವಾಗಿ ಸಾಗಿಸುವುದಕ್ಕಾಗಿ ಮತ್ತು ಸುರಕ್ಷಿತ ಅಭಿರಕ್ಷೆಗಾಗಿ ಸಾಕಷ್ಟು ವ್ಯವಸ್ಥೆಗಳನ್ನು ಮಾಡತಕ್ಕದ್ದು.

**101. ಮತದಾನವನ್ನು ಮುಂದಕ್ಕೆ ಹಾಕುವ ಪ್ರಕ್ರಿಯೆ.-** (1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನವನ್ನು 33ನೇ ನಿಯಮದ ಮೇರೆಗೆ ಮುಂದೂಡಿದ್ದರೆ, 97,98,99 ಮತ್ತು 100ನೇ ನಿಯಮಗಳ ಉಪಬಂಧಗಳು, ಕಾರ್ಯಸಾಧ್ಯವಾಗುವಷ್ಟರಮಟ್ಟಿಗೆ 61ನೇ ನಿಯಮದಲ್ಲಿ ಆ ಬಗ್ಗೆ ನಿಗದಿಪಡಿಸಿದ ವೇಳೆಯಲ್ಲಿ ಮತದಾನವು ಮುಕ್ತಾಯಗೊಂಡಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

(2) ನಿಯಮ 34ರ ಮೇರೆಗೆ ಮತದಾನವನ್ನು ಮುಂದೂಡಲು ಶಿಫಾರಸ್ಸು ಮಾಡಿದಾಗ, ಹಾಗೆ ಮುಂದೂಡಲಾದ ಮತದಾನದಲ್ಲಿ ಈಗಾಗಲೇ ಮತ ಚಲಾಯಿಸಿರುವಂಥ ಮತದಾರನ್ನು ಮತ್ತೆ ಮತ ಚಲಾಯಿಸಲು ಅನುಮತಿಸತಕ್ಕದ್ದಲ್ಲ.

(3) ರಿಟರ್ನಿಂಗ್ ಅಧಿಕಾರಿಯು, ಅಂಥ ಮುಂದೂಡಿದ ಮತದಾನವು ನಡೆದಂಥ ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಗೆ ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿಯನ್ನು ಒಳಗೊಂಡ ಮೊಹರು ಮಾಡಿದ ಪ್ಯಾಕೆಟ್ ಅನ್ನು ನಮೂನೆ-27 ರಲ್ಲಿ ಮತದಾರರ ರಿಜಿಸ್ಟರ್ ಅನ್ನು ಮತ್ತು ಒಂದು ಹೊಸ ಮತಯಂತ್ರವನ್ನು ಒದಗಿಸತಕ್ಕದ್ದು.

(4) ಪ್ರಿಸೈಡಿಂಗ್ ಅಧಿಕಾರಿಯು ಹಾಜರಿರುವ ಪೋಲಿಂಗ್ ಏಜೆಂಟರ ಸಮ್ಮುಖದಲ್ಲಿ ಮೊಹರು ಮಾಡಿದ ಪ್ಯಾಕೆಟ್ ಅನ್ನು ತೆರೆಯತಕ್ಕದ್ದು ಮತ್ತು ಮುಂದೂಡಲಾದ ಮತದಾನದಲ್ಲಿ ಮತ ಚಲಾಯಿಸಲು ಅನುಮತಿಸಿದಂಥ ಮತದಾರರ ಹೆಸರುಗಳನ್ನು ಗುರುತು ಮಾಡುವುದಕ್ಕಾಗಿ ಗುರುತು ಮಾಡಲಾದ ಮತದಾರರ ಪಟ್ಟಿಯ ಪ್ರತಿಯನ್ನು ಬಳಸತಕ್ಕದ್ದು.

(5) ನಿಯಮ 2 ಮತ್ತು 79, 80, 81, 82, 83, 84, 85, 86, 87, 88, 89, 90, 91, 92, 93, 94, 95, 96, 97, 98, 99 ಮತ್ತು 100ನೇ ನಿಯಮದ ಉಪಬಂಧಗಳು ಮುಂದೂಡಿದ ಮತದಾನವನ್ನು ನಡೆಸುವ ಸಂದರ್ಭದಲ್ಲಿ ಅದನ್ನು ಹಾಗೆ ಮುಂದೂಡುವ ಮೊದಲು ಹೇಗೊ ಹಾಗೆ ಅನ್ವಯವಾಗತಕ್ಕದ್ದು.

**102. ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡ ಸಂದರ್ಭದಲ್ಲಿ ಮತಯಂತ್ರವನ್ನು ಮುಚ್ಚುವುದು.-** ಮತದಾನ ಕೇಂದ್ರದಲ್ಲಿ ಮತಗಟ್ಟೆಯನ್ನು ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳವನ್ನು ಬಲವಂತವಾಗಿ ವಶಪಡಿಸಿಕೊಳ್ಳಲಾಗುತ್ತಿದೆಯೆಂದು ಪ್ರಿಸೈಡಿಂಗ್ ಅಧಿಕಾರಿಯು ಅಭಿಪ್ರಾಯಪಟ್ಟಲ್ಲಿ ಆತನು ಹೆಚ್ಚಿನ ಮತಗಳು ದಾಖಲು ಮಾಡಲು ಸಾಧ್ಯವಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಮತಯಂತ್ರದ ಕಂಟ್ರೋಲ್ ಯೂನಿಟ್ ಅನ್ನು ಕೂಡಲೇ ಮುಚ್ಚತಕ್ಕದ್ದು ಮತ್ತು ಕಂಟ್ರೋಲ್ ಯೂನಿಟ್ ನಿಂದ ಬ್ಯಾಲೆಟ್ ಯೂನಿಟ್ ಅನ್ನು ಬೇರ್ಪಡಿಸತಕ್ಕದ್ದು.

**103. ವಿದ್ಯುನ್ಮಾನ ಮತಯಂತ್ರಗಳನ್ನು ಬಳಸಿರುವಲ್ಲಿ ಮತಗಳ ಎಣಿಕೆ.-** ಮತಯಂತ್ರವನ್ನು ಬಳಸಿರುವ ಕಡೆಗಳಲ್ಲಿ ಮತದಾನ ಕೇಂದ್ರದಲ್ಲಿ ಮತಗಳ ಎಣಿಕೆಗೆ ಸಂಬಂಧಿಸಿದಂತೆ, 2ನೇ ನಿಯಮದ ಮತ್ತು 67, 68, 69 ಮತ್ತು 70ನೇ ನಿಯಮಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**104. ಮತಯಂತ್ರಗಳ ಪರಿಶೀಲನೆ ಮತ್ತು ತಪಾಸಣೆ.-** (1) ರಿಟರ್ನಿಂಗ್ ಅಧಿಕಾರಿಯು, ಒಂದಕ್ಕಿಂತ ಹೆಚ್ಚು ಮತದಾನ ಕೇಂದ್ರಗಳಲ್ಲಿ ಬಳಸಲಾದ ಮತಯಂತ್ರಗಳ ಕಂಟ್ರೋಲ್ ಯುನಿಟ್‌ಗಳನ್ನು ಪರಿಶೀಲನೆ ಮತ್ತು ತಪಾಸಣೆಗೆ ಒಳಪಡಿಸತಕ್ಕದ್ದು ಮತ್ತು ಅಂತಹ ಯುನಿಟ್‌ಗಳಲ್ಲಿ ದಾಖಲಾದ ಮತಗಳನ್ನು ಏಕಕಾಲದಲ್ಲಿ ಎಣಿಸತಕ್ಕದ್ದು.

(2) ಉಪ ನಿಯಮದ (1) ರ ಮೇರೆಗೆ ಮತಯಂತ್ರದ ಯಾವುದೇ ಕಂಟ್ರೋಲ್ ಯುನಿಟ್‌ನಲ್ಲಿ ದಾಖಲಾದ ಮತಗಳನ್ನು ಎಣಿಸುವ ಮುಂಚೆ ಮತ ಎಣಿಕೆಯ ಮೇಜಿನಲ್ಲಿ ಹಾಜರಿರುವ ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟ್ ಅಥವಾ ಎಣಿಕ ಏಜೆಂಟ್‌ನಿಗೆ ಅದರ ಮೇಲೆ ಹಾಕಿರುವ ಪೇಪರ್ ಸೀಲ್ ಅಥವಾ ಅಂಥ ಇತರ ಅತಿ ಮಹತ್ವದ ಮೊಹರನ್ನು ಪರಿಶೀಲಿಸಲು ಮತ್ತು ಅದು ಭದ್ರವಾಗಿದೆಯೆಂದು ಅವರು ಮನದಟ್ಟು ಮಾಡಿಕೊಳ್ಳಲು ಅವಕಾಶ ನೀಡತಕ್ಕದ್ದು.

(3) ರಿಟರ್ನಿಂಗ್ ಅಧಿಕಾರಿಯು ಯಾವುದೇ ಮತಯಂತ್ರದೊಂದಿಗೆ ವ್ಯತ್ಯಸ್ತಗೊಳಿಸಿಲ್ಲವೆಂದು ಸ್ವತಃ ಮನದಟ್ಟು ಮಾಡಿಕೊಳ್ಳತಕ್ಕದ್ದು.

(4) ರಿಟರ್ನಿಂಗ್ ಅಧಿಕಾರಿಗೆ ಯಾವುದೇ ಮತಯಂತ್ರವನ್ನು ವ್ಯತ್ಯಸ್ತಗೊಳಿಸಲಾಗಿದೆ ಎಂದು ಮನದಟ್ಟಾದರೆ, ಆತನು ಆ ಮತಯಂತ್ರದಲ್ಲಿ ದಾಖಲಾದ ಮತಗಳನ್ನು ಎಣಿಸತಕ್ಕದ್ದಲ್ಲ ಮತ್ತು ಆ ಮತಯಂತ್ರವನ್ನು ಬಳಸಿರುವಂಥ ಮತದಾನ ಕೇಂದ್ರಕ್ಕೆ ಸಂಬಂಧಿಸಿದಂತೆ ಅನ್ವಯಿಸಬಹುದಾದ 35ನೇ ನಿಯಮ ಅಥವಾ 36ನೇ ನಿಯಮದಲ್ಲಿ ಹೇಳಲಾದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

**105. ಮತಗಳ ಎಣಿಕೆ.-** (1) ರಿಟರ್ನಿಂಗ್ ಅಧಿಕಾರಿಯು ಮತಯಂತ್ರವನ್ನು ವ್ಯತ್ಯಸ್ತಗೊಳಿಸಲಾಗಿಲ್ಲ ಎಂದು ಮನವರಿಕೆ ಮಾಡಿಕೊಂಡ ನಂತರ ಆತನು ಕಂಟ್ರೋಲ್ ಯುನಿಟ್‌ನಲ್ಲಿ ಒದಗಿಸಲಾವ "ರಿಸಲ್ಟ್" ಎಂದು ಗುರುತು ಮಾಡಿದ ಯುಕ್ತ ಗುಂಡಿಯನ್ನು ಒತ್ತುವ ಮೂಲಕ ಅದರಲ್ಲಿ ದಾಖಲಾದ ಮತಗಳನ್ನು ಎಣಿಸತಕ್ಕದ್ದು ಇದರಿಂದ ಯುನಿಟ್‌ನಲ್ಲಿ ಆ ಉದ್ದೇಶಕ್ಕಾಗಿ ಒದಗಿಸಲಾದ ಡಿಸ್‌ಪ್ಲೆ ಪ್ಯಾನೆಲ್ ಮೇಲೆ ಅಂತಹ ಪ್ರತಿಯೊಬ್ಬ ಅಭ್ಯರ್ಥಿಗೆ ಸಂಬಂಧಿಸಿದಂತೆ ಚಲಾಯಿಸಲಾದ ಒಟ್ಟು ಮತಗಳು ಮತ್ತು ಪ್ರತಿಯೊಬ್ಬ ಅಭ್ಯರ್ಥಿಗೆ ದಾಖಲಾದ ಮತಗಳನ್ನು ಪ್ರದರ್ಶಿಸತಕ್ಕದ್ದು.

(2) ಕಂಟ್ರೋಲ್ ಯುನಿಟ್ ಮೇಲೆ ಪ್ರದರ್ಶಿಸಲಾಗಿರುವ ಪ್ರತಿಯೊಬ್ಬ ಅಭ್ಯರ್ಥಿಯು ಪಡೆದ ಮತಗಳನ್ನು ರಿಟರ್ನಿಂಗ್ ಅಧಿಕಾರಿಯು,-

(ಎ) ನಮೂನೆ-20ಎ (ಇವಿಎಂ)ನ ಭಾಗ-II ರಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ದಾಖಲಾದಂಥ ಮತಗಳ ಸಂಖ್ಯೆ;

(ಬಿ) ಇತರೆ ಸಂಬಂಧದಲ್ಲಿ ನಮೂನೆ-20ಎ (ಇವಿಎಂ)ನ ಭಾಗ-II ನ್ನು ಪೂರ್ತಿ ಮಾಡತಕ್ಕದ್ದು ಮತ್ತು ಎಣಿಕೆ ಮೇಲ್ವಿಚಾರಕರು ಸಹಿ ಮಾಡತಕ್ಕದ್ದು ಮತ್ತು ಹಾಜರಿರುವ ಅಭ್ಯರ್ಥಿಗಳು ಅಥವಾ ಅವರ ಚುನಾವಣಾ ಏಜೆಂಟರು ಅಥವಾ ಮತ ಎಣಿಕೆ ಏಜೆಂಟರು ಸಹಿ ಮಾಡಿರತಕ್ಕದ್ದು; ಮತ್ತು

(ಸಿ) ನಮೂನೆ-23ಎ (ಇವಿಎಂ) ನಲ್ಲಿ ಫಲಿತಾಂಶದ ಹಾಳೆಯಲ್ಲಿ ಮಾಡಿದ ಸಂವಾದಿ ನಮೂದುಗಳನ್ನು ಮಾಡತಕ್ಕದ್ದು ಮತ್ತು ಫಲಿತಾಂಶದ ಹಾಳೆಯಲ್ಲಿ ಹಾಗೆ ನಮೂದಿಸಿರುವ ವಿವರಗಳನ್ನು ಪ್ರಕಟಿಸತಕ್ಕದ್ದು.

**106. ಮತಯಂತ್ರಗಳನ್ನು ಮೊಹರು ಮಾಡುವುದು.-** (1) ಕಂಟ್ರೋಲ್ ಯುನಿಟ್‌ನಲ್ಲಿ ದಾಖಲಿಸಿದ ಮತಗಳ ಫಲಿತಾಂಶವನ್ನು ಅಭ್ಯರ್ಥಿವಾರು ಖಚಿತಪಡಿಸುವುದು ಮತ್ತು 71(11), 73(7) ಮತ್ತು 75(1), 75(5), 75(6) ನೇ ನಿಯಮದ ಮೇರೆಗೆ ನಮೂನೆ-20ಎ (ಇವಿಎಂ) ಮತ್ತು ನಮೂನೆ-23ಎ (ಇವಿಎಂ) ರ ಭಾಗ-II ರಲ್ಲಿ ನಮೂದಿಸಿದ ನಂತರ ರಿಟರ್ನಿಂಗ್ ಅಧಿಕಾರಿಯು, ಯೂನಿಟ್ ಅನ್ನು

ಆತನ ಮೊಹರಿನೊಂದಿಗೆ ಮತ್ತು ಅಂತಹ ಅಭ್ಯರ್ಥಿಗಳ ಅಥವಾ ಅದರ ಮೇಲೆ ಮೊಹರನ್ನು ಹಾಕಲು ಬಯಸುವಂತಹ, ಹಾಜರಿರುವ ಅವರ ಚುನಾವಣಾ ಏಜೆಂಟರುಗಳ ಮೊಹರುಗಳೊಂದಿಗೆ ಮರು ಮೊಹರು ಮಾಡತಕ್ಕದ್ದು ಆದಾಗ್ಯೂ ಯುನಿಟ್‌ನಲ್ಲಿ ದಾಖಲಿಸಿದ ಮತದಾನದ ಫಲಿತಾಂಶವನ್ನು ಅಳಿಸತಕ್ಕದ್ದಲ್ಲ ಮತ್ತು ಯುನಿಟ್‌ನಲ್ಲಿ ಅಂತಹ ಫಲಿತಾಂಶವನ್ನು ಉಳಿಸಿಕೊಂಡಿರತಕ್ಕದ್ದು.

(2) ಹಾಗೆ ಮೊಹರು ಮಾಡಲಾದ ಕಂಟ್ರೋಲ್ ಯೂನಿಟ್ ಅನ್ನು ವಿಶೇಷವಾಗಿ ಸಿದ್ಧಪಡಿಸಿದ ಪೆಟ್ಟಿಗೆಗಳಲ್ಲಿ ಇಡತಕ್ಕದ್ದು ಅದರ ಮೇಲೆ ರಿಟರ್ನಿಂಗ್ ಅಧಿಕಾರಿಯು ಈ ಕೆಳಕಂಡ ವಿವರಗಳನ್ನು ದಾಖಲಿಸತಕ್ಕದ್ದು ಎಂದರೆ:-

(ಎ) ವಾರ್ಡಿನ ಹೆಸರು;
(ಬಿ) ಕಂಟ್ರೋಲ್ ಯೂನಿಟ್ ಅನ್ನು ಬಳಸಿದಂಥ ಮತದಾನ ಕೇಂದ್ರ ಅಥವಾ ಕೇಂದ್ರಗಳು ವಿವರಗಳು;
(ಸಿ) ಕಂಟ್ರೋಲ್ ಯುನಿಟ್ಟಿನ ಕ್ರಮಸಂಖ್ಯೆ;
(ಡಿ) ಮತದಾನದ ದಿನಾಂಕ; ಮತ್ತು
(ಇ) ಮತ ಎಣಿಕೆ ದಿನಾಂಕ.

(3) ನಿಯಮ 74, 75 ಮತ್ತು 76ರ ಉಪಬಂಧಗಳು, ಸಾಧ್ಯವಾದಷ್ಟು ಮಟ್ಟಿಗೆ ಮತಯಂತ್ರಗಳ ಮೂಲಕ ಮತದಾನಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಮತ್ತು ಆ ನಿಯಮಗಳಲ್ಲಿನ ಯಾವುದೇ ಉಲ್ಲೇಖವು -

(ಎ) ಮತಪತ್ರವನ್ನು ಉಲ್ಲೇಖಿಸಲಾದ ಅಂಥ ಮತಯಂತ್ರವನ್ನು ಒಳಗೊಂಡಿರುವಂತೆ ಅರ್ಥೈಸತಕ್ಕದ್ದು;

(ಬಿ) ಯಾವುದೇ ನಿಯಮವನ್ನು IIನೇ ಅಧ್ಯಾಯದಲ್ಲಿನ ಸಂವಾದಿ ನಿಯಮಕ್ಕೆ ಅಥವಾ ಸಂದರ್ಭಾನುಸಾರ, ನಿಯಮ 104 ಅಥವಾ 105ಕ್ಕೆ ಉಲ್ಲೇಖಿಸಿರುವಂತೆ ಅರ್ಥೈಸತಕ್ಕದ್ದು;

**107. ಚುನಾವಣೆಗೆ ಸಂಬಂಧಪಟ್ಟ ಮತಯಂತ್ರಗಳು ಮತ್ತು ಕಾಗದ ಪತ್ರಗಳ ಅಭಿರಕ್ಷೆ.** (1) ಚುನಾವಣೆಯಲ್ಲಿ ಬಳಸಿದ ಎಲ್ಲಾ ಮತಯಂತ್ರಗಳನ್ನು ಆಯುಕ್ತರು ಅಥವಾ ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದ ಅಂಥ ಅಭಿರಕ್ಷೆಯಲ್ಲಿ ಇಡತಕ್ಕದ್ದು.

(2) ಚುನಾವಣೆಯಲ್ಲಿ ಬಳಸಿದ ಎಲ್ಲಾ ಮತಯಂತ್ರಗಳನ್ನು ಸಂಬಂಧಪಟ್ಟ ಜಿಲ್ಲಾ ಚುನಾವಣಾಧಿಕಾರಿಯ ಅಭಿರಕ್ಷೆಯಲ್ಲಿ ಇಡತಕ್ಕದ್ದು.

(3) ಜಿಲ್ಲಾ ಚುನಾವಣಾ ಅಧಿಕಾರಿಯು,-

(ಎ) ಅವುಗಳಿಗೆ ಪಕ್ಕಾ ಪ್ರತಿಯೊಂದಿಗೆ ಸೇರಿಸಿದ ಬಳಸದೇ ಇರುವ ಅಂಚೆ ಮತಪತ್ರಗಳ ಪ್ಯಾಕೆಟ್‌ಗಳು.

(ಬಿ) ಸಿಂಧುವಾದುದಾಗಲಿ, ಟೆಂಡರ್ಡ್ ಆಗಲಿ ಅಥವಾ ತಿರಸ್ಕೃತವಾದುದಾಗಿರಲಿ, ಬಳಸಲಾದ ಅಂಚೆ ಮತಪತ್ರಗಳ ಪ್ಯಾಕೆಟ್‌ಗಳು;

(ಸಿ) ಬಳಸಲಾದ ಅಂಚೆ ಮತಪತ್ರಗಳ ಪಕ್ಕಾ ಪ್ರತಿಗಳ ಪ್ಯಾಕೆಟ್‌ಗಳು:

(ಡಿ) ಮತದಾರರ ಪಟ್ಟಿಯ ಗುರುತು ಮಾಡಲಾದ ಪ್ರತಿಯ ಪ್ಯಾಕೆಟ್‌ಗಳು ಅಥವಾ ಸಂದರ್ಭಾನುಸಾರ;

(ಇ) ಮತದಾರರ ಚೀಟಿಗಳನ್ನೂ ಒಳಗೊಂಡಂತೆ, ನಮೂನೆ-27 ರಲ್ಲಿ ಮತದಾರರ ರಿಜಿಸ್ಟರ್ ಅನ್ನು ಒಳಗೊಂಡಿರುವ ಪ್ಯಾಕೆಟ್‌ಗಳು; ಮತ್ತು

(ಎಫ್) ಮತದಾರರ ಘೋಷಣೆಗಳು ಮತ್ತು ಅವರ ಸಹಿಗಳ ದೃಢೀಕೃತ ಪ್ಯಾಕೆಟ್‌ಗಳನ್ನು;

- ಸುರಕ್ಷಿತ ಅಭಿರಕ್ಷೆಯಲ್ಲಿಡತಕ್ಕದ್ದು.

**108. ಕೇಂದ್ರ ನಿಯಮಗಳು, ಶಾಸನಬದ್ಧ ಆದೇಶಗಳು ಮೊದಲಾದವುಗಳನ್ನು ಅನ್ವಯಿಸುವುದು.-** ಈ ಹಿಂದೆ ಹೇಳಲಾದ ಉಪಬಂಧಗಳಿಗೆ ಬಾಧಕವಾಗದಂತೆ, ಈ ನಿಯಮಗಳಲ್ಲಿ ಯಾವುದೇ ನಿರ್ದಿಷ್ಟ ಉಪಬಂಧಗಳನ್ನು ಮಾಡದಿರುವ ಕಡೆಗಳಲ್ಲಿ ಜನತಾ ಪ್ರಾತಿನಿಧ್ಯ ಅಧಿನಿಯಮ, 1951 ರ ಮೇರೆಗೆ ರಚಿಸಲಾದ ಚುನಾವಣೆಯನ್ನು ನಡೆಸುವ ನಿಯಮಗಳು, 1961 ರ ಉಪಬಂಧಗಳು ಮತ್ತು ಭಾರತ ಚುನಾವಣಾ ಆಯೋಗವು ಹೊರಡಿಸಿದ ಸೂಚನೆಗಳು, ಶಾಸನಾತ್ಮಕ ಆದೇಶಗಳು ಮತ್ತು ಸ್ಪಷ್ಟೀಕರಣಗಳು ಈ ನಿಯಮಗಳ ಮೇರೆಗಿನ ಪ್ರಕರಣಗಳಿಗೆ ಯಥೋಚಿತ ವ್ಯತ್ಯಾಸಗಳೊದಿಗೆ ಅನ್ವಯವಾಗತಕ್ಕದ್ದು.

## ಅಧ್ಯಾಯ-V

**109. ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು.-** ಕೌನ್ಸಿಲರುಗಳ ಚುನಾವಣೆಗೆ ಸಂಬಂಧಪಟ್ಟ ಉಪಬಂಧಗಳು, ಕೌನ್ಸಿಲರುಗಳ ಆಕಸ್ಮಿಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**110. ಚುನಾವಣೆಗೆ ಸಂಬಂಧಪಟ್ಟ ಮತಪೆಟ್ಟಿಗೆಗಳು ಮತ್ತು ಕಾಗದ ಪತ್ರಗಳ ಅಭಿರಕ್ಷೆ.-** (1) ಚುನಾವಣೆಯಲ್ಲಿ ಬಳಸಲಾದ ಎಲ್ಲಾ ಮತಪೆಟ್ಟಿಗೆಗಳನ್ನು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂತೆ ಅಭಿರಕ್ಷೆಯಲ್ಲಿ ಇಡತಕ್ಕದ್ದು.

(2) ರಿಟರ್ನಿಂಗ್ ಅಧಿಕಾರಿಯು ಈ ಮುಂದಿನವುಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿ ಇಡತಕ್ಕದ್ದು, ಎಂದರೆ:-

(i) ಅವುಗಳಿಗೆ ಪಕ್ಕಾ ಪ್ರತಿಗಳೊಂದಿಗೆ ಸೇರಿಸಿದ ಬಳಸಿಲ್ಲದ ಮತಪತ್ರಗಳ ಪ್ಯಾಕೆಟ್‌ಗಳು;

(ii) ಸಿಂಧುವಾದುದಾಗಿರಲಿ, ಟೆಂಡರ್ ದ್ದಾಗಿರಲಿ ಅಥವಾ ಸ್ವೃತವಾದುದಾಗಿರಲಿ ಬಳಸಿಲ್ಲದ ಮತಪತ್ರಗಳ ಪ್ಯಾಕೆಟ್‌ಗಳು;

(iii) ಬಳಸಿದ ಮತಪತ್ರಗಳ ಪಕ್ಕಾ ಪ್ರತಿಗಳ ಪ್ಯಾಕೆಟ್‌ಗಳು;

(iv) ಮತದಾರರ ಪಟ್ಟಿಯ ಗುರುತು ಮಾಡಲಾದ ಪ್ರತಿಯ ಪ್ಯಾಕೆಟ್‌ಗಳು;

(v) ಮತದಾರರ ಘೋಷಣೆಗಳು ಮತ್ತು ಅವರ ಸಹಿಗಳ ದೃಢೀಕೃತ ಪ್ಯಾಕೆಟ್‌ಗಳು;

ಮತ್ತು

(vi) ಚುನಾವಣೆಗೆ ಸಂಬಂಧಪಟ್ಟ ಎಲ್ಲಾ ಇತರ ಕಾಗದ ಪತ್ರಗಳು.

**111. ಚುನಾವಣಾ ಕಾಗದಪತ್ರಗಳನ್ನು ಹಾಜರುಪಡಿಸುವುದು ಮತ್ತು ಪರಿಶೀಲಿಸುವುದು.-** (1) ರಿಟರ್ನಿಂಗ್ ಅಧಿಕಾರಿಯ ಅಭಿರಕ್ಷೆಯಲ್ಲಿರುವಾಗ,-

(ಎ) ಅವುಗಳಿಗೆ ಪಕ್ಕಾ ಪ್ರತಿಗಳೊಂದಿಗೆ ಸೇರಿಸಿದ ಬಳಸಿಲ್ಲದ ಮತಪತ್ರಗಳ ಪ್ಯಾಕೆಟ್‌ಗಳು:

(ಬಿ) ಸಿಂಧುವಾದುದಾಗಿರಲಿ, ಟೆಂಡರ್ಡ್ ಆಗಿರಲಿ ಅಥವಾ ತಿರಸ್ಕೃತವಾದುದಾಗಿರಲಿ, ಬಳಸಿದ ಮತಪತ್ರಗಳ ಪ್ಯಾಕೆಟ್‌ಗಳು;

(ಸಿ) ಬಳಸಿದ ಮತಪತ್ರಗಳ ಪಕ್ಕಾ ಪ್ರತಿಗಳ ಪ್ಯಾಕೆಟ್‌ಗಳು;

(ಡಿ) ಮತದಾರರ ಪಟ್ಟಿಯ ಗುರುತು ಮಾಡಲಾದ ಪ್ರತಿಯ ಪ್ಯಾಕೆಟ್‌ಗಳು: ಮತ್ತು

(ಇ) ಮತದಾರರ ಘೋಷಣೆಗಳ ಮತ್ತು ಅವರ ಸಹಿಗಳನ್ನು ಅನುಪಮಾಣೀಕರಿಸಿದ ಪ್ಯಾಕೆಟ್‌ಗಳನ್ನು

- ಸಕ್ಷಮ ನ್ಯಾಯಾಲಯ ಅಥವಾ ನ್ಯಾಯಾಧಿಕರಣದ ಆದೇಶಗಳ ಮೇರೆಗೆ ಹೊರತುಪಡಿಸಿ ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರವು ಅವುಗಳನ್ನು ತೆರೆಯತಕ್ಕದ್ದಲ್ಲ ಮತ್ತು ಅವುಗಳ ಒಳಾಂಶಗಳನ್ನು ಪರಿಶೀಲಿಸಿತಕ್ಕದ್ದಲ್ಲ ಅಥವಾ ಅದರ ಮುಂದೆ ಹಾಜರುಪಡಿಸತಕ್ಕದ್ದಲ್ಲ.

(2) ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಶುಲ್ಕದ ಸಂದಾಯಕ್ಕೊಳಪಟ್ಟು-

(ಎ) ಚುನಾವಣೆಗೆ ಸಂಬಂಧಪಟ್ಟ ಎಲ್ಲಾ ಇತರೆ ಕಾಗದಪತ್ರಗಳು ಸಾರ್ವಜನಿಕ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು; ಮತ್ತು

(ಬಿ) ಅವುಗಳ ಪ್ರತಿಗಳನ್ನು ಅರ್ಜಿ ಸಲ್ಲಿಸಿದ ಮೇಲೆ ಒದಗಿಸತಕ್ಕದ್ದು.

(3) 78ನೇ ನಿಯಮದ ಮೇರೆಗೆ ರಿಟರ್ನಿಂಗ್ ಅಧಿಕಾರಿಗೆ ಕಳುಹಿಸಿದ ವಿವರಪಟ್ಟಿಕೆಗಳ ಪ್ರತಿಗಳನ್ನು, ರಿಟರ್ನಿಂಗ್ ಅಧಿಕಾರಿಯು ಒದಗಿಸತಕ್ಕದ್ದು.

**112. ಚುನಾವಣಾ ಕಾಗದ ಪತ್ರಗಳ ವಿಲೆ.-** ರಾಜ್ಯ ಚುನಾವಣಾ ಆಯೋಗ ಅಥವಾ ಸಕ್ಷಮ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ತದ್ವಿರುದ್ಧವಾಗಿ ನೀಡಿದ ಯಾವುದೇ ನಿರ್ದೇಶನಗಳಿಗೊಳಪಟ್ಟು,-

(ಎ) ಬಳಸಿಲ್ಲದ ಮತಪತ್ರಗಳ ಪ್ಯಾಕೆಟ್ ಗಳನ್ನು ಆರು ತಿಂಗಳ ಅವಧಿಯವರೆಗೆ ಇಟ್ಟುಕೊಂಡಿರತಕ್ಕದ್ದು ಮತ್ತು ಅದಾದ ನಂತರ ರಾಜ್ಯ ಚುನಾವಣಾ ಆಯೋಗವು, ನಿರ್ದೇಶಿಸಬಹುದಾದಂಥ ರೀತಿಯಲ್ಲಿ ನಾಶಪಡಿಸತಕ್ಕದ್ದು ಮತ್ತು

(ಬಿ) 110 ನೇ ನಿಯಮದ (1) ನೇ ಉಪ-ನಿಯಮದಲ್ಲಿ ಉಲ್ಲೇಖಿಸಿದ ಇತರ ಪ್ಯಾಕೆಟ್‌ಗಳನ್ನು, ಒಂದು ವರ್ಷದ ಅವಧಿಯವರೆಗೆ ಇಟ್ಟುಕೊಂಡಿರತಕ್ಕದ್ದು ಮತ್ತು ಅವುಗಳನ್ನು ತರುವಾಯ ನಾಶಪಡಿಸತಕ್ಕದ್ದು:

ಪರಂತು, ಬಳಸಲಾದ ಮತಪತ್ರಗಳ ಪಕ್ಕಾ ಪ್ರತಿಗಳನ್ನು ಒಳಗೊಂಡಿರುವ ಪ್ಯಾಕೆಟ್‌ಗಳನ್ನು ರಾಜ್ಯ ಚುನಾವಣಾ ಆಯೋಗದ ಪೂರ್ವಾನುಮೋದನೆ ಹೊರತುಪಡಿಸಿ ನಾಶಪಡಿಸತಕ್ಕದ್ದಲ್ಲ.

(ಸಿ) ಚುನಾವಣೆಗೆ ಸಂಬಂಧಪಟ್ಟ ಎಲ್ಲಾ ಇತರ ಕಾಗದಪತ್ರಗಳನ್ನು ರಾಜ್ಯ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಅವಧಿಯವರೆಗೆ ಇಟ್ಟುಕೊಂಡಿರತಕ್ಕದ್ದು.

**113. ಅಭ್ಯರ್ಥಿಗಳ ಠೇವಣಿಯ ವಾಪಸಾತಿ ಅಥವಾ ಮುಟ್ಟುಗೋಲು-** (1) 12 ನೇ ನಿಯಮದ ಮೇರೆಗೆ ಮಾಡಿದ ಠೇವಣಿಯನ್ನು ಅದನ್ನು ಮಾಡಿರುವ ವ್ಯಕ್ತಿಗೆ ಅಥವಾ ಆತನ ಕಾನೂನು ಸಮ್ಮತ ಪ್ರತಿನಿಧಿಗೆ ಹಿಂದಿರುಗಿಸತಕ್ಕದ್ದು ಅಥವಾ ನಗರಪಾಲಿಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು
(2) ಈ ನಿಯಮದಲ್ಲಿ ನಮೂದಿಸಿದ ಸಂದರ್ಭಗಳಲ್ಲಿ ಹೊರತುಪಡಿಸಿ, ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ನಂತರ ಠೇವಣಿಯನ್ನು ಕಾರ್ಯ ಸಾಧ್ಯವಾದಷ್ಟು ಬೇಗನೆ ಹಿಂದಿರುಗಿಸತಕ್ಕದ್ದು.

3) ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಅಭ್ಯರ್ಥಿಯನ್ನು ತೋರಿಸಿರದಿದ್ದರೆ ಅಥವಾ ಆತನು ಮತದಾನ ಪ್ರಾರಂಭವಗುವುದಕ್ಕೂ ಮುಂಚೆ ಮೃತಪಟ್ಟರೆ ಪಟ್ಟಿಯನ್ನು ಪ್ರಕಟ್ಟಿಸಿದ ನಂತರ ಅಥವಾ ಸಂದರ್ಭಾನುಸಾರ ಮರಣಾ ನಂತರ ಕಾರ್ಯಸಾಧ್ಯವಾದಷ್ಟು ಬೇಗನೆ ಠೇವಣಿಯನ್ನು ಹಿಂದಿರುಗಿಸತಕ್ಕದ್ದು.

4) ಉಪ-ನಿಯಮ (3) ರ ಉಪಬಂಧಗಳಿಗೊಳಪಟ್ಟು, ಚುನಾವಣೆಯಲ್ಲಿ ಮತದಾನವು ನಡೆದಿದ್ದು ಅಭ್ಯರ್ಥಿಯು ಚುನಾಯಿತನಾಗದಿದ್ದಲ್ಲಿ ಮತ್ತು ಆತನು ಚಲಾಯಿಸಿದ ಸಿಂಧುವಾದ ಮತಗಳು ಚುನಾಯಿತರಾಗಬೇಕಾದ ಸದಸ್ಯರ ಸಂಖ್ಯೆಯಿಂದ ಭಾಗಿಸಿದಾಗ ಎಲ್ಲಾ ಅಭ್ಯರ್ಥಿಗಳು ಚಲಾಯಿಸಿದ ಸಿಂಧುವಾದ ಮತಗಳ ಒಟ್ಟು ಸಂಖ್ಯೆಯು ಆರನೇ ಒಂದರಷ್ಟು ಭಾಗವನ್ನು ಮೀರದಿದ್ದರೆ, ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

ಪರಂತು, ಅಭ್ಯರ್ಥಿಯು ಹಿಂದುಳಿದ ವರ್ಗಗಳು, ಅನುಸೂಚಿತ ಜಾತಿಗಳು, ಅನುಸೂಚಿತ ಪಂಗಡಗಳಿಗೆ ಸೇರಿದವರಾಗಿದ್ದ ಅಥವಾ ಮಹಿಳೆಯಾಗಿದ್ದ ಸಂದರ್ಭದಲ್ಲಿ, ಅವರು ಚಲಾಯಿಸಿದ ಸಿಂಧುವಾದ ಮತಗಳ ಸಂಖ್ಯೆಯು, ಚಲಾಯಿಸಿದ ಸಿಂಧುವಾದ ಮತಗಳ ಒಟ್ಟು ಸಂಖ್ಯೆಯ ಹದಿನಾರನೇ ಒಂದು ಭಾಗಕ್ಕಿಂತ ಕಡಿಮೆಯಿದ್ದ ಹೊರತು ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದಲ್ಲ.

5) (2), (3) ಮತ್ತು (4) ನೇ ಉಪ-ನಿಯಮಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ವಾರ್ಡುಗಳಲ್ಲಿ ಸ್ಪರ್ಧಿಸಿದ್ದರೆ, ಠೇವಣಿಗಳಲ್ಲಿನ ಒಂದಕ್ಕಿಂತ ಹೆಚ್ಚಿನ ಠೇವಣಿಗಳನ್ನು ಹಿಂದಿರುಗಿಸತಕ್ಕದ್ದಲ್ಲ ಮತ್ತು ಉಳಿದವುಗಳನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು

**114, ನಿಯಮಗಳ ಉಲ್ಲಂಘನೆಗಾಗಿ ಶಿಕ್ಷೆ-** ಈ ನಿಯಮಗಳಲ್ಲಿ ಯಾವುದನ್ನಾದರೂ ಉಲ್ಲಂಘಿಸುವ ಯಾರೇ ವ್ಯಕ್ತಿಯನ್ನು, ಅಪರಾಧ ನಿರ್ಣಯವಾದ ಮೇಲೆ, ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯೊಂದಿಗೆ ಶಿಕ್ಷಿಸತಕ್ಕದ್ದು.

**115. ನಗರ ಪಾಲಿಕೆಗಳಲ್ಲಿರುವ ಆಕಸ್ಮಿಕ ಖಾಲಿ ಸ್ಥಾನಗಳ ಬಗ್ಗೆ ವರದಿ ಮಾಡುವುದು.-** ಕೌನ್ಸಿಲರ್ ನ ಪದದಲ್ಲಿ ಆಕಸ್ಮಿಕ ಖಾಲಿ ಸ್ಥಾನವು ಉಂಟಾದಾಗ, ಆಯುಕ್ತರು, ಅದರ ಖಾಲಿ ಸ್ಥಾನ ಉಂಟಾದ ದಿನಾಂಕದಿಂದ ಏಳು ದಿನಗಳೊಳಗಾಗಿ ಅಂಥ ಖಾಲಿ ಸ್ಥಾನದ ಮಾಹಿತಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ನೀಡತಕ್ಕದ್ದು, ಇದಾದ ನಂತರ, ರಾಜ್ಯ ಚುನಾವಣಾ ಆಯೋಗವು ಈ ನಿಯಮಗಳಲ್ಲಿ ಉಪಬಂಧಿಸಿದ ದೀತಿಯಲ್ಲಿ ಅಂಥ ಖಾಲಿಸ್ಥಾನದಲ್ಲಿನ ಕೌನ್ಸಿಲರ್ ನ ಚುನಾವಣೆಗೆ ಕ್ರಮ ಕೈಗೊಳ್ಳತಕ್ಕದ್ದು.

## ಅಧ್ಯಾಯ-VI

**116. ಆವರಣಗಳು, ವಾಹನಗಳು ಮೊದಲಾದವುಗಳ ಕಡ್ಡಾಯ ಕೋರಿಕೆಯ ಬಗ್ಗೆ ಆದೇಶವನ್ನು ಜಾರಿ ಮಾಡುವ ವಿಧಾನ.–** ಅಧಿನಿಯಮದ 69 ನೇ ಪ್ರಕರಣದ ಮೇರೆಗೆ ಕಡ್ಡಾಯ ಕೋರಿಕೆಯ ಆದೇಶವನ್ನು,

(ಎ) ಅಂಥ ಆದೇಶವನ್ನು ಯಾವ ವ್ಯಕ್ತಿಗೆ ಬರೆಯಲಾಗಿದೆಯೋ ಆತನು ಒಂದು ನಗರ ಪಾಲಿಕೆ ಅಥವಾ ಫರ್ಮ್ ಆಗಿರುವಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ ಅಧಿನಿಯಮ V) ರ ಮೊದಲನೇ ಅನುಸೂಚಿಯಲ್ಲಿ ಸಂದರ್ಭಾನುಸಾರ, XXIX ನೇ ಆದೇಶದ 2ನೇ ನಿಯಮದಲ್ಲಿ ಅಥವಾ XXX ನೇ ಆದೇಶದ 3ನೇ ನಿಯಮದಲ್ಲಿ ಸಮನುಗಳನ್ನು ಜಾರಿಮಾಡುವುದಕ್ಕಾಗಿ ಉಪಬಂಧಿಸಲಾದ ರೀತಿಯಲ್ಲಿ ಜಾರಿಗೊಳಿಸತಕ್ಕದ್ದು.

(ಬಿ) ಅಂಥ ಆದೇಶವನ್ನು ಯಾರ ಹೆಸರಿಗೆ ಬರೆಯಲಾಗಿದೆಯೋ ಆತನು ಒಬ್ಬ ವ್ಯಕ್ತಿಯಾಗಿರುವಲ್ಲಿ-
(i) ಆದೇಶವನ್ನು ಖುದ್ದಾಗಿ ವಿತರಿಸುವ ಅಥವಾ ನೀಡುವ ಮೂಲಕ;
(ii) ನೋಂದಾಯಿತ ಅಂಚೆಯ ಮೂಲಕ; ಅಥವಾ

(iii) ಒಂದು ವೇಳೆ ವ್ಯಕ್ತಿಯನ್ನು ಕಂಡುಹಿಡಿಯಲಾಗದಿದ್ದರೆ, ಆತನ ಕುಟುಂಬದ ಯಾರೇ ವಯಸ್ಕ ಸದಸ್ಯನಿಗೆ ಆದೇಶದ ಅಧಿಕೃತ ಪ್ರತಿಯನ್ನು ನೀಡುವ ಮೂಲಕ ಅಥವಾ ಆತನು ಕಡೆಯದಾಗಿ ವಾಸಿಸುತ್ತಿದ್ದನೆಂದು ಅಥವಾ ವ್ಯವಹಾರ ನಡೆಸುತ್ತಿದ್ದನೆಂದು ಅಥವಾ ಗಳಿಕೆಗಾಗಿ ಖುದು ಕೆಲಸ ಮಾಡುತ್ತಿದ್ದನೆಂದು ತಿಳಿದುಬರುವಂಥ ಆವರಣಗಳಲ್ಲಿ ಕೆಲವು ಎದ್ದು ಕಾಣುವಂಥ ಭಾಗದಲ್ಲಿ ಅಂಥ ಆದೇಶದ ಪ್ರತಿಯನ್ನು ಅಂಟಿಸುವ ಮೂಲಕ ಜಾರಿಗೊಳಿಸತಕ್ಕದ್ದು,

**117. ಮೇಯರ್, ಉಪಮೇಯರ್ ಮತ್ತು ಸ್ಥಾಯಿ ಸಮಿತಿಗಳ ಸದಸ್ಯರ ಚುನಾವಣೆಗಾಗಿ ಪ್ರಿಸೈಡಿಂಗ್ ಅಧಿಕಾರಿ.-** ಜಿಬಿಎ (ಗ್ರೇಟರ್ ಬೆಂಗಳೂರು ಆಡಳಿತ) ದ ಮುಖ್ಯ ಆಯುಕ್ತರು, ಸಾರ್ವತ್ರಿಕ ಚುನಾವಣೆಯ ನಂತರ ನಡೆದ ನಗರ ಪಾಲಿಕೆಗಳ ಮೊದಲನೇ ಸಭೆಯಲ್ಲಿ, ಮತ್ತು ಮೇಯರ್, ಉಪ ಮೇಯರ್ ಮತ್ತು ಸ್ಥಾಯಿ ಸಮಿತಿಗಳ ಸದಸ್ಯರ ಚುನಾವಣೆಯ ಉದ್ದೇಶಕ್ಕಾಗಿ ನಡೆದ, ತರುವಾಯದ ಪ್ರತಿಯೊಂದು ಸಭೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯಾಗಿರತಕ್ಕದ್ದು.

**118. ನಾಮಪತ್ರಗಳನ್ನು ಸಲ್ಲಿಸುವುದು.-** ಮೇಯರ್ ನ ಚುನಾವಣೆಗಾಗಿ ಸಭೆಯನ್ನು ನಿಗದಿಪಡಿಸಿದ ಎರಡು ಗಂಟೆಗಳಿಗೆ ಕಡಿಮೆಯಿರದ ಸಮಯಕ್ಕೆ ಮುಂಚೆ, ಯಾರೇ ಕೌನ್ಸಿಲರನು, ಮೇಯರ್ ಆಗಿ ಚುನಾಯಿಸುವುದಕ್ಕೆ, ಇನ್ನೊಬ್ಬ ಕೌನ್ಸಿಲರ್ ಅನ್ನು ನಾಮ ನಿರ್ದೇಶನ ಮಾಡಿ, ನಾಮಪತ್ರವನ್ನು ಪ್ರಿಸೈಡಿಂಗ್ ಅಧಿಕಾರಿಗೆ ತಲುಪಿಸಬಹುದು.

**119. ಕೌನ್ಸಿಲರುಗಳು ಒಬ್ಬರಿಗಿಂತ ಹೆಚ್ಚಾಗಿರದ ಅಭ್ಯರ್ಥಿಗಳನ್ನು ನಾಮನಿರ್ದೇಶನ ಮಾಡುವುದು.-** ಯಾರೇ ಕೌನ್ಸಿಲರನು, 118 ನೇ ನಿಯಮದ ಮೇರೆಗೆ, ಮೇಯರ್ ನ ಹುದ್ದೆಗಾಗಿ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡತಕ್ಕದ್ದಲ್ಲ.

ಪರಂತು, ಒಬ್ಬ ಕೌನ್ಸಿಲರನು ಮೇಯರ್ ಹುದ್ದೆಗಾಗಿ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡಿದರೆ, ಪಿಸೈಡಿಂಗ್ ಅಧಿಕಾರಿಯು ಮೊದಲು ಸ್ವೀಕರಿಸಿದ ನಾಮಪತ್ರವನ್ನು ಪರಿಶೀಲನೆಗಾಗಿ ಪರಿಗಣಿಸತಕ್ಕದ್ದು.

**120. ನಾಮಪತ್ರಗಳ ಪರಿಶೀಲನೆ.-** ಸಭೆಯ ಪ್ರಾರಂಭವಾದ ನಂತರ, ಪ್ರಿಸೈಡಿಂಗ್ ಅಧಿಕಾರಿಯು, ಅಧಿನಿಯಮದ 38ನೇ ಪ್ರಕರಣದ ಮೇರೆಗೆ ತನಗೆ ತಲುಪಿದ ಎಲ್ಲಾ ನಾಮಪತ್ರಗಳನ್ನು ಪರಿಶೀಲಿಸತಕ್ಕದ್ದು ಮತ್ತು ಅವರ ಅಭಿಪ್ರಾಯದಲ್ಲಿ ಸೂಚಕರೊಟ್ಟಿಗೆ ವಿದ್ಯುಕ್ತವಾಗಿ

ನಾಮನಿರ್ದೇಶನಮಾಡಿದಂತಹ ಕೌನ್ಸಿಲರುಗಳ ಹೆಸರುಗಳನ್ನು, ಅಂಥ ಸಭೆಯಲ್ಲಿ ಹಾಜರಿರುವ ಕೌನ್ಸಿಲರುಗಳಿಗೆ ಓದಿ ಹೇಳತಕ್ಕದ್ದು.

**121. ಉಮೇದುವಾರಿಕೆಯನ್ನು ಹಿಂಪಡೆಯುವಿಕೆ:-** (1) ಯಾರೇ ಅಭ್ಯರ್ಥಿಯು, 120 ನೇ ನಿಯಮದ ಮೇರೆಗೆ ನಾಮಪತ್ರಗಳನ್ನು ಪರಿಶೀಲನೆ ಮಾಡಿದ ತರುವಾಯದ, ಕೂಡಲೇ ಅವರು ನೀಡಲು ಒಪ್ಪಿಕೊಂಡು ಲಿಖಿತದಲ್ಲಿ ನೋಟಿಸಿನ ಮೂಲಕ ಮತ್ತು ಅದನ್ನು ಪ್ರಿಸೈಡಿಂಗ್ ಅಧಿಕಾರಿಗೆ ನೀಡುವ ಮೂಲಕ ಆತನ ಉಮೇದುವಾರಿಕೆಯನ್ನು ಹಿಂಪಡೆಯಬಹುದು.

(2) ನೋಟೀಸ್ ಅನ್ನು ಅಭ್ಯರ್ಥಿಯು ಖುದ್ದಾಗಿ ನೀಡಬಹುದು ಅಥವಾ ಅಭ್ಯರ್ಥಿಯು ಲಿಖಿತದಲ್ಲಿ ಆತನ ಪರವಾಗಿ ಅಧಿಕೃತಗೊಳಿಸಿರುವ ತನ್ನ ಸೂಚಕರ ಮೂಲಕ ನೀಡಬಹುದು

(3) ಉಪ-ನಿಯಮ (1) ರ ಮೇರೆಗೆ ಆತನ ಉಮೇದುವಾರಿಕೆಯನ್ನು ಹಿಂಪಡೆದುಕೊಳ್ಳುವಿಕೆಯ ನೋಟೀಸ್
ಅನ್ನು ನೀಡಿರುವಂಥ ಯಾರೇ ವ್ಯಕ್ತಿಯು, ಹಿಂಪಡೆಯುವಿಕೆಯ ನೋಟೀಸ್ ಅನ್ನು ರದ್ದು ಮಾಡಲು ಅನುಮತಿಸತಕ್ಕದ್ದಲ್ಲ.

(4) ಪ್ರಿಸೈಡಿಂಗ್ ಅಧಿಕಾರಿಯು ಹಿಂಪಡೆಯುವ ನೋಟೀಸಿನ ನೈಜತೆ ಮತ್ತು (2) ನೇ ಉಪ-ನಿಯಮದ ಮೇರೆಗೆ ಅದನ್ನು ನೀಡುತ್ತಿರುವ ವ್ಯಕ್ತಿಯ ಗುರುತಿನ ಬಗ್ಗೆ ಮನವರಿಕೆಯಾದ ತರುವಾಯ, ತಮ್ಮ ಉಮೇದುವಾರಿಕೆಯನ್ನು ಹಿಂಪಡೆಯುವ ವ್ಯಕ್ತಿಗಳ ಹೆಸರುಗಳನ್ನು ಅಂಥ ಸಭೆಯಲ್ಲಿ ಹಾಜರಿರುವ ಕೌನ್ಸಿಲರುಗಳಿಗೆ ಓದಿ ಹೇಳತಕ್ಕದ್ದು.

**122. ಸ್ಪರ್ಧಿಸಿದ ಮತ್ತು ಸ್ಪರ್ಧಿಸಿಲ್ಲದ ಚುನಾವಣೆಗಳಲ್ಲಿನ ಪಕ್ರಿಯೆ.** (1) ಹಿಂಪಡೆಯುವಿಕೆಗಾಗಿ ನಿಗದಿಪಡಿಸಿದ್ದ ಸಮಯವು ಮುಕ್ತಾಯವಾದ ನಂತರ, ಸಿಂಧುವಾಗಿ ನಾಮನಿರ್ದೇಶಗೊಂಡಿರುವಂಥ ಮತ್ತು ನಿರ್ದಿಷ್ಟಪಡಿಸಿದ ರೀತಿಯಲ್ಲಿ ಮತ್ತು ಸಮಯದೊಳಗಾಗಿ ಆತನ ಉಮೇದುವಾರಿಕೆಯನ್ನು ಹಿಂಪಡೆಯದಿರುವ ಒಬ್ಬನೇ ಒಬ್ಬ ಅಭ್ಯರ್ಥಿಯಿದ್ದರೆ, ಪ್ರಿಸೈಡಿಂಗ್ ಅಧಿಕಾರಿಯು ಕೂಡಲೇ ಅಂಥ ಮೇಯರ್ ಆಗಿ ವಿದ್ಯುಕ್ತವಾಗಿ ಚುನಾಯಿತನಾಗಿರುವ ಅಭ್ಯರ್ಥಿಯನ್ನು ಘೋಷಿಸತಕ್ಕದ್ದು
(2) ಸಿಂಧುವಾಗಿ ನಾಮನಿರ್ದೇಶನಗೊಂಡಿರುವಂಥ ಮತ್ತು ಅವರ ಅಭ್ಯರ್ಥಿತನವನ್ನು ಹಿಂಪಡೆಯದಿರುವ ಅಭ್ಯರ್ಥಿಗಳ ಸಂಖ್ಯೆಯು ಒಂದಕ್ಕಿಂತ ಹೆಚ್ಚಾಗಿದ್ದರೆ. ಆಗ ಪ್ರಸೈಡಿಂಗ್ 'ಅಧಿಕಾರಿಯು, ಇದರಲ್ಲಿ ಇನ್ನುಮುಂದೆ ಉಪಬಂಧಿಸಲಾದಂತೆ ಚುನಾವಣೆಯನ್ನು ನಡೆಸಲು ಮುಂದಾಗತಕ್ಕದ್ದು.

(3) ಮತಗಳನ್ನು ಕೈ ಎತ್ತುವ ಮೂಲಕ ಪಡೆದುಕೊಳ್ಳತಕ್ಕದ್ದು ಮತ್ತು ಯಾರೇ ಅಭ್ಯರ್ಥಿಯ ಪರವಾಗಿ ಮತ್ತು ವಿರುದ್ಧವಾಗಿ ಮತ ಚಲಾಯಿಸುವ ಕೌನ್ಸಿಲರುಗಳು, ನಡವಳಿ ರಿಜಿಸ್ಟರಿನಲ್ಲಿ ಅದಕ್ಕೆ ಸಹಿ ಮಾಡುವ ಮೂಲಕ ಅಥವಾ ಸಮುಚಿತ ಅಂಕಣದಲ್ಲಿ ಎಡಗೈ ಹೆಬ್ಬೆರಳ ಗುರುತನ್ನು ಹಾಕುವ ಮೂಲಕ, ತಮ್ಮ ಮತಗಳನ್ನು ದಾಖಲಿಸತಕ್ಕದ್ದು

(4) ಸಭೆಯಲ್ಲಿ ಹಾಜರಿರುವ ಯಾರೇ ಸದಸ್ಯನು ಆತನನ್ನು ಹಾಗೆ ಆಯ್ಕೆ ಮಾಡಿದರೆ, ಮತದಾನದಿಂದ ಹಿಂದೆ ಸರಿಯಬಹುದು.

(5) ಹಾಜರಿರುವ ಮತ್ತು ಮತ ಚಲಾಯಿಸಲು ಇಚ್ಛಿಸುವ ಎಲ್ಲಾ, ಕೌನ್ಸಿಲರುಗಳು ಮತದಾನ ಮಾಡಿದ ನಂತರ, ಪ್ರಿಸೈಡಿಂಗ್ ಅಧಿಕಾರಿಯು, ಅತ್ಯಂತ ಹೆಚ್ಚಿನ ಸಂಖ್ಯೆಯ ಸಿಂಧುವಾದ ಮತಗಳನ್ನು ಪಡೆದಿರುವಂಥ ಅಭ್ಯರ್ಥಿಯನ್ನು ವಿದ್ಯುಕ್ತವಾಗಿ ಚುನಾಯಿಸಲಾಗಿದೆಯೆಂದು ಘೋಷಿಸತಕ್ಕದ್ದು

(6) ಯಾರೇ ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳ ನಡುವೆ ಸಿಂಧುವಾದ ಸಮಾನ ಮತಗಳು ಕಂಡುಬಂದರೆ ಮತ್ತು ಒಂದು ಮತದ ಸೇರ್ಪಡೆಯು, ಆ ಅಭ್ಯರ್ಥಿಗಳಲ್ಲಿ ಹಕ್ಕುಳ್ಳ ಯಾರಾದರೊಬ್ಬರನ್ನು ಚುನಾಯಿತರಾಗಿದ್ದಾರೆಂದು ಘೋಷಿಸಲು ಹಕ್ಕುಳ್ಳವರಾಗಿದ್ದಾಗ, ಪ್ರಿಸೈಡಿಂಗ್ ಅಧಿಕಾರಿಯು, ಕೂಡಲೇ ತಾನು ನಿರ್ಧರಿಸಬಹುದಾದಂಥ ರೀತಿಯಲ್ಲಿ ಚೀಟಿ ಎತ್ತುವ ಮೂಲಕ ಆ ಅಭ್ಯರ್ಥಿಗಳ ನಡುವೆ ನಿರ್ಣಯಿಸತಕ್ಕದ್ದು ಮತ್ತು ಯಾರಿಗೆ ಚೀಟಿ ಬಿದ್ದಿರುತ್ತದೆಯೋ ಆ ಅಭ್ಯರ್ಥಿಯು ಒಂದು ಹೆಚ್ಚಿನ ಮತವನ್ನು ಪಡೆದಿದ್ದರೆ ಹೇಗೋ ಹಾಗೆ ಮುಂದುವರೆಯತಕ್ಕದ್ದು. ಆತನು ಆ ತರುವಾಯ ಚೀಟಿಯು ಬಿದ್ದಿರುವಂಥ ಅಭ್ಯರ್ಥಿಯನ್ನು ವಿದ್ಯುಕ್ತವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸತಕ್ಕದ್ದು

(7) ಪ್ರಿಸೈಡಿಂಗ್ ಅಧಿಕಾರಿಯು, ಹಾಜರಿರುವ ಎಲ್ಲಾ ಕೌನ್ಸಿಲರುಗಳ ಹೆಸರುಗಳನ್ನು ಒಳಗೊಂಡಿರುವಂಥ ಮತ್ತು ವಿಭಾಗದ ಸಂದರ್ಭದಲ್ಲಿ ಗೈರುಹಾಜರಿಯನ್ನೂ ಒಳಗೊಂಡಂತೆ ಅವರ ಮತದಾನದ ರೀತಿಯನ್ನು ಒಳಗೊಂಡಿರುವ ಸಭೆಯ ನಡವಳಿಗಳ ದಾಖಲೆ ಇಡುವಂತೆ ಮಾಡತಕ್ಕದ್ದು. ಪ್ರಿಸೈಡಿಂಗ್ ಅಧಿಕಾರಿ ಮತ್ತು ಹಾಜರಿರುವ ಕೌನ್ಸಿಲರುಗಳು ನಡವಳಿಗಳಿಗೆ ಸಹಿ ಮಾಡತಕ್ಕದ್ದು ನಡವಳಿಗಳನ್ನು ಯಾರೇ ಕೌನ್ಸಿಲರನಿಗೆ ಪರಿಶೀಲನೆಗೆ ಲಭ್ಯವಾಗುವಂತೆ ಮಾಡತಕ್ಕದ್ದು.

**ವಿವರಣೆ:** ಈ ನಿಯಮದ ಉದ್ದೇಶಕ್ಕಾಗಿ "ಹಾಜರಿರುವ ಕೌನ್ಸಿಲರ್'' ಎಂದರೆ, ಸಭೆಯಲ್ಲಿ ಹಾಜರಿರುವ ಮತ್ತು ಈ ನಿಯಮದ ಮೇರೆಗೆ ವಿದ್ಯುಕ್ತವಾಗಿ ಚುನಾಯಿತನಾದ ಒಬ್ಬ ಕೌನ್ಸಿಲರನನ್ನು ಘೋಷಿಸುವ ಕೌನ್ಸಿಲರ್ ಮೊದಲು ಅಥವಾ ಸಭೆಯ ಪ್ರಾರಂಭಕ್ಕೂ ಮೊಕಲು, 121 ನೇ ನಿಯಮದ (4) ನೇ ಉಪ-ನಿಯಮದ ಮೇರೆಗೆ ಮೇಯರ್ ಹುದ್ದೆಗಾಗಿ ಉಮೇದುವಾರಿಕೆಯನ್ನು ಹಿಂಪಡೆಯುವಿಕೆಯ ನಂತರ ಯಾರ ಹೆಸರನ್ನು ದಾಖಲಿಸಲಾಗಿದೆಯೋ ಆ ಕೌನ್ಸಿಲರ್,

**123. ಉಪಮೇಯರ್ ನ ಚುನಾವಣೆ-** (1) ಮೇಯರ್ ಚುನಾವಣೆಯ ನಂತರ, ಪ್ರಿಸೈಡಿಂಗ್ ಅಧಿಕಾರಿಯು ಉಪ-ಮೇಯರ್, ಚುನಾವಣೆಯನ್ನು ನಡೆಸಲು ಮುಂದುವರಿಯತಕ್ಕದ್ದು. (2) ಈ ಅಧ್ಯಾಯದಲ್ಲಿ ಮೇಯರ್ ಚುನಾವಣೆಗೆ ಅನ್ವಯಿಸತಕ್ಕದ್ದು ನಿಯಮಗಳ ಉಪಬಂಧಗಳನ್ನು ಉಪಮೇಯರ್ ಚುನಾವಣೆಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**124. ಮೇಯರ್ ಮತ್ತು ಉಪಮೇಯರ್ ಹುದ್ದೆಗಳ ಮೀಸಲಾತಿ.-** (1) ನಗರ ಪಾಲಿಕೆಗಳಲ್ಲಿನ ಮೇಯರ್ ಮತ್ತು ಉಪಮೇಯರ್ ಹುದ್ದೆಗಳ ಮೀಸಲಾತಿಯನ್ನು ಸರ್ಕಾರವು ಕಾಲಕಾಲಕ್ಕೆ ಪ್ರಕಟಿಸತಕ್ಕದ್ದು.
(2) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿರಿಸಿದ ಮೇಯರ್ ಮತ್ತು ಉಪಮೇಯರ್ ಹುದ್ದೆಗಳನ್ನು ಸರ್ಕಾರವು ನಗರದ ಒಟ್ಟು ಜನಸಂಖ್ಯೆಗೆ ಸಂಬಂಧದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅತ್ಯಧಿಕ ಶೇಕಡಾವಾರು ಜನಸಂಖ್ಯೆಯನ್ನು ಹೊಂದಿರುವ ನಗರ ಪಾಲಿಕೆಗೆ ಹಂಚಿಕೆ ಮಾಡತಕ್ಕದ್ದು:

ಪರಂತು, ನಗರ ಪಾಲಿಕೆಯಲ್ಲಿರುವ ಮೇಯರ್ ಮತ್ತು ಉಪಮೇಯರ್ ಎರಡೂ ಹುದ್ದೆಗಳನ್ನು ಪರಿಶಿಷ್ಟ ಜಾತಿಗಳ ಪ್ರವರ್ಗಕ್ಕೆ ಮಾತ್ರ ಹಂಚಿಕೆ ಮಾಡತಕ್ಕದ್ದಲ್ಲ.

(3) ನಗರ ಪಾಲಿಕೆಯ ಮೇಯರ್ ಮತ್ತು ಉಪಮೇಯರ್ ಹುದ್ದೆಗಳನ್ನು ಹಿಂದುಳಿದ ವರ್ಗಗಳಿಗಾಗಿ ಮೀಸಲಿಡತಕ್ಕದ್ದು ಮತ್ತು ಮೀಸಲಿರಿಸದ ಪ್ರವರ್ಗದ ಹುದ್ದೆಗಳನ್ನು, ಸರ್ಕಾರವು ಸೂಕ್ತವಾದುದೆಂದು ಭಾವಿಸಬಹುದಾದಂಥ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಂಡು, ನಗರ ಪಾಲಿಕೆಗೆ ಸರ್ಕಾರವು ಹಂಚಿಕೆ ಮಾಡತಕ್ಕದ್ದು.

(4) ಉಪ-ಪ್ರಕರಣ (1) ರಲ್ಲಿ ಉಲ್ಲೇಖಿಸಿದ ಪ್ರತಿಯೊಂದು ಪ್ರವರ್ಗದಲ್ಲಿ ಮಹಿಳೆಯರಿಗಾಗಿ ಮೀಸಲಿರಿಸಿದ ಮೇಯರ್ ಮತ್ತು ಉಪಮೇಯರ್ ಹುದ್ದೆಗಳನ್ನು, ಅ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂತೆ ಹಂಚಿಕೆ ಮಾಡತಕ್ಕದ್ದು:

ಪರಂತು, ನಗರ ಪಾಲಿಕೆಯ ಮೇಯರ್ ಮತ್ತು ಉಪ-ಮೇಯರ್ ಎರಡೂ ಹುದ್ದೆಗಳೆರಡನ್ನೂ ಮಹಿಳೆಯರಿಗೆ ಮೀಸಲಿಡತಕ್ಕದ್ದಲ್ಲ.

(5) ರಾಜ್ಯದ ನಗರ ಪಾಲಿಕೆಗಳಲ್ಲಿನ ಮೇಯರ್ ಮತ್ತು ಉಪಮೇಯರ್ ಹುದ್ದೆಗಳನ್ನು ತರುವಾಯದ ಅವಧಿಗಳಿಗಾಗಿ ಸರ್ಕಾರವು ಜಾತಿಗಳು ಅಥವಾ ಸರ್ಕಾರವು ಪಂಗಡಗಳು, ಮಹಿಳೆಯರು ಮತ್ತು ಹಿಂದುಳಿದ ವರ್ಗಗಳಿಗೆ, ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂಥ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಂಡು ಕಾಲಕಾಲಕ್ಕೆ ನಿಗದಿಪಡಿಸತಕ್ಕದ್ದು

ಪರಂತು, ಯಾವುದೇ ಪ್ರವರ್ಗಕ್ಕೆ ಮಾಡಲಾದ ಮೀಸಲಾತಿಯು ಶೇಕಡಾ 0.5 ಕ್ಕಿಂತ ಕಡಿಮೆಯಿದ್ದರೆ, ಆಗ ಮೇಯರ್ ಮತ್ತು ಉಪ-ಮೇಯರ್ ಹುದ್ದೆಯನ್ನು ಅಂಥ ಪ್ರವರ್ಗಕ್ಕೆ ಮೀಸಲಿಡತಕ್ಕದ್ದಲ್ಲ.

**125. ಸ್ಥಾಯಿ ಸಮಿತಿಯ ಸದಸ್ಯರ ಚುನಾವಣೆ-** ಉಪ ಮೇಯರ್ ಚುನಾವಣೆಯಾದ ನಂತರ, ಪ್ರಿಸೈಡಿಂಗ್ ಅಧಿಕಾರಿಯು ಅಧಿನಿಯಮದ 98 ಮತ್ತು 118 ನೇ ಪ್ರಕರಣಕ್ಕೆ ಅನುಸಾರವಾಗಿ ಸ್ಥಾಯಿ ಸಮಿತಿಗಳ ಸದಸ್ಯರ ಚುನಾವಣೆಯನ್ನು ನಡೆಸಲು ಮುಂದುವರಿಯತಕ್ಕದ್ದು.

**126. ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರ ಚುನಾವಣೆ.-** (1) ಸ್ಥಾಯಿ ಸಮಿತಿಯ ಸದಸ್ಯರು, ತಮ್ಮ ಮೊದಲ ಸಭೆಯಲ್ಲಿ ಅದರ ಸದಸ್ಯರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡತಕ್ಕದ್ದು,

(2) ಸ್ಥಾಯಿ ಸಮಿತಿಗಳ ಪದ-ನಿಮಿತ್ತ ಸದಸ್ಯನಾಗಿರುವ ಮೇಯರ್ ಅಧ್ಯಕ್ಷರನ್ನು ಆಯ್ಕೆ, ಮಾಡುವ ಉದ್ದೇಶಕ್ಕಾಗಿ ಸ್ಥಾಯಿ ಸಮಿತಿಗಳ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು

**127. ನಡವಳಿಗಳ ದಾಖಲೆ.** ಸಭೆಯ ನಿಕಟ ತರುವಾಯದ ಪ್ರಿಸೈಡಿಂಗ್ ಅಧಿಕಾರಿಯು,

(ಎ) ಸಭೆಯ ನಡವಳಿಗಳ ದಾಖಲೆಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದರಲ್ಲಿ ಮಾಡಲಾದ ಪ್ರತಿಯೊಂದು ಸರಿಪಡಿಕೆಯಲ್ಲಿ ಆತನ ಚಿಕ್ಕ ರುಜುವಿನೊಂದಿಗೆ ಅನುಪ್ರಮಾಣೀಕರಿಸತಕ್ಕದ್ದು. ಅವರು, ಸಭೆಯಲ್ಲಿ ಹಾಜರಿರುವ ಯಾರೇ ಕೌನ್ಸಿಲರನ್ನು, ಆತನು ಹಾಗೆ ಮಾಡಲು ಬಯಸಿದರೆ, ಅಂಥ ದಾಖಲೆಗೆ ಆತನ ಸಹಿಯನ್ನು ಹಾಕಲು ಅನುಮತಿಸಬಹುದು, ಮತ್ತು

(ಬಿ) ನಗರ ಪಾಲಿಕೆಗಳಿಗೆ, ಮೇಯರ್ ಮತ್ತು ಉಪಮೇಯರ್ ಆಗಿ ಚುನಾಯಿತರಾದ ವ್ಯಕ್ತಿಯ ಹೆಸರನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ ಕಳುಹಿಸಿಕೊಡತಕ್ಕದ್ದು

## ಅಧ್ಯಾಯ-VII

**128. ಚುನಾವಣಾ ತಕರಾರು ಅರ್ಜಿ.** (1) ಮೇಯರ್, ಉಪಮೇಯರ್, ಸದಸ್ಯರು ಮತ್ತು ಸ್ಥಾಯಿ ಸಮಿತಿಗಳ ಅಧ್ಯಕ್ಷರ ಚುನಾವಣೆಯನ್ನು ನಗರ ಪಾಲಿಕೆಗಳ 130 ಮತ್ತು 131 ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ಒಂದು ಅಥವಾ ಹೆಚ್ಚು ಆಧಾರಗಳ ಮೇಲೆ, ಅಂಥ ಚುನಾವಣೆಯಲ್ಲಿನ ಯಾರೇ ಅಭ್ಯರ್ಥಿಯು ಸಲ್ಲಿಸಿದ ಚುನಾವಣಾ ತಕರಾರು ಅರ್ಜಿಯು ಸ್ಥಳೀಯ ಪರಿಮಿತಿಗಳ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶರ ಮುಂದಿರುವ ಹೊರತು ಪ್ರಶ್ನಿಸತಕ್ಕದ್ದಲ್ಲ. ಈ ನಿಯಮದ ಮೇರೆಗೆ ಚುನಾವಣಾ ತಕರಾರು ಅರ್ಜಿಯ ಜೊತೆಯಲ್ಲಿ ವೆಚ್ಚಗಳ ಭದ್ರತೆಯಾಗಿ ಎರಡು ನೂರು ರೂಪಾಯಿಗಳ ಠೇವಣಿ ಇಡತಕ್ಕದ್ದು.

(2) ಉಪ-ನಿಯಮ (1) ರ ಮೇರೆಗೆ ಪ್ರತಿಯೊಂದು ತಕರಾರು ಅರ್ಜಿಯನ್ನು, ತಕರಾರು ಅರ್ಜಿಯಲ್ಲಿ ನಮೂದಿಸಿದ ಪ್ರತಿವಾದಿಗಳಾಗಿರುವಂತೆ ಅನೇಕ ಪ್ರತಿಗಳಲ್ಲಿ ಇರತಕ್ಕದ್ದು ಮತ್ತು ಪ್ರತಿಯೊಂದು ಅಂಥ ಪ್ರತಿಯು ತಕರಾರು ಅರ್ಜಿಯ ಯಥಾಪ್ರತಿಯೆಂದು ಆತನ ಸಹಿಯ ಮೇಲೆ ಅರ್ಜಿದಾರನು ದೃಢೀಕರಿಸತಕ್ಕದ್ದು.

(3) ಅರ್ಜಿದಾರನು, ಆತನ ತಕರಾರು ಅರ್ಜಿಗೆ ಪ್ರತಿವಾದಿಗಳಾಗಿ ಸೇರಿಕೊಳ್ಳತಕ್ಕದ್ದು, ಅದರಲ್ಲಿ ಅರ್ಜಿದಾರನು ಚುನಾಯಿತ ಅಭ್ಯರ್ಥಿಯ ಚುನಾವಣೆಯು ಅನೂರ್ಜಿತಗೊಂಡಿದೆ ಎಂದು ಕ್ಲೇಮು ಮಾಡತಕ್ಕದ್ದು ಅವನು ಅಥವಾ ಯಾರೇ ಇತರ ಅಭ್ಯರ್ಥಿಯು ಯುಕ್ತವಾಗಿ ಚುನಾಯಿತವಾಗಿದ್ದಾನೆಂದು ಮುಂದಿನ ಘೋಷಣೆಯನ್ನು ಮಾಡತಕ್ಕದ್ದು, ಅರ್ಜಿದಾರನಲ್ಲದೆ ಇತರ ಎಲ್ಲಾ ಸ್ಪರ್ಧಿಸುವ ಅಭ್ಯರ್ಥಿಗಳು ಮತ್ತು ಚುನಾಯಿತ ಅಭ್ಯರ್ಥಿಯು ಅಂಥ ಯಾವುದೇ ಘೋಷಣೆಯನ್ನು ಮಾಡತಕ್ಕದ್ದಲ್ಲ.

(4) ಉಪ-ನಿಯಮ (1) ರ ಮೇರೆಗೆ ತಕರಾರು ಅರ್ಜಿಯು

(ಎ) ಅರ್ಜಿದಾರನು ಅವಲಂಬಿಸಿರುವ ಸಾಕ್ಷ್ಯಾಧಾರದ ಸಂಕ್ಷಿಪ್ತ ಮುಖ್ಯ ಹೇಳಿಕೆಗಳನ್ನು ಒಳಗೊಂಡಿರತಕ್ಕದ್ದು ಮತ್ತು

(ಬಿ) ವಾದಪತ್ರಗಳ ಪರಿಶೀಲನೆಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತ, 1908(1908 ರ ಕೇಂದ್ರ ಅಧಿನಿಯಮ ಸಂಖ್ಯೆ 5 ರಲ್ಲಿ ಹೇಳಲಾದ ರೀತಿಯಲ್ಲಿ ಸತ್ಯಾಪನೆ ಮಾಡಲಾಗಿದೆಯೆಂದು ಅರ್ಜಿದಾರನು ಸಹಿ ಮಾಡಿರತಕ್ಕದ್ದು.

(ii) ಆ ತಕರಾರು ಅರ್ಜಿಯ ಯಾವುದೇ ಅನುಸೂಚಿ ಅಥವಾ ಅನುಬಂಧಕ್ಕೆ ಅರ್ಜಿದಾರನು ಸಹಿ ಮಾಡತಕ್ಕದ್ದು ಮತ್ತು ಆ ತಕರಾರು ಅರ್ಜಿಯಲ್ಲಿರುವಂಥ ಅದೇ ರೀತಿಯಲ್ಲಿ ಪರಿಶೀಲನೆ ಮಾಡತಕ್ಕದ್ದು.

(5) ಅರ್ಜಿದಾರನು, ಈ ಮುಂದಿನ ಯಾವುದೇ ಘೋಷಣೆಗಳನ್ನು ಕ್ಲೇಮು ಮಾಡಬಹುದು, ಎಂದರೆ:-
(ಎ) ಚುನಾಯಿತ ಅಭ್ಯರ್ಥಿಯ ಆಯ್ಕೆಯು ಅನೂರ್ಜಿತ ಆಗಿರುವುದು; ಅಥವಾ
(ಬಿ) ಚುನಾಯಿತ ಅಭ್ಯರ್ಥಿಯ ಆಯ್ಕೆಯು ಅನೂರ್ಜಿತ ಆಗಿರುವುದು ಮತ್ತು ಆತನು ಸ್ವತಃ ಅಥವಾ ಯಾರೇ ಇತರ ಅಭ್ಯರ್ಥಿಯನ್ನು ವಿದ್ಯುಕ್ತವಾಗಿ ಚುನಾಯಿಸತಕ್ಕದ್ದು.

**129. ಕಾರ್ಯವಿಧಾನ-** ಜಿಲ್ಲಾ ನ್ಯಾಯಾಧೀಶರು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯಾದ ನಂತರ ಮತ್ತು ನಡವಳಿಗಳಿಗೆ ಸಂಬಂಧಿಸಿದಂತೆ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ತರುವಾಯ,

(ಎ) ಮನವಿಯನ್ನು ವಜಾ ಮಾಡುವುದು,
(ಬಿ) ಚುನಾಯಿತ ಅಭ್ಯರ್ಥಿಯ ಆಯ್ಕೆಯು ಅನೂರ್ಜಿತವಾಗಿದೆಯೆಂದು ಘೋಷಿಸುವುದು;
(ಸಿ) ಚುನಾಯಿತ ಅಭ್ಯರ್ಥಿಯ ಆಯ್ಕೆಯು ಅನೂರ್ಜಿತವಾಗಿದೆಯೆಂದು ಘೋಷಿಸುವುದು ಮತ್ತು ಅರ್ಜಿದಾರ ಅಥವಾ ಯಾರೇ ಇತರ ಅಭ್ಯರ್ಥಿಯನ್ನು ವಿದ್ಯುಕ್ತವಾಗಿ ಆಯ್ಕೆ ಮಾಡಲಾಗಿದೆ,
- ಎಂದು ಆದೇಶವನ್ನು ಮಾಡಬಹುದು.

**130. ಚುನಾಯಿತ ಅಭ್ಯರ್ಥಿಯ ಆಯ್ಕೆಯನ್ನು ಅನೂರ್ಜಿತವಾಗಿದೆಯೆಂದು ಘೋಷಿಸುವುದಕ್ಕೆ ಕಾರಣಗಳು.-** ಒಂದು ವೇಳೆ ಜಿಲ್ಲಾ ನ್ಯಾಯಾಧೀಶರು,-

(ಎ) ಚುನಾವಣೆಯ ಫಲಿತಾಂಶವು ಗಣನೀಯವಾಗಿ-
(i) ಮತದ ಅನುಚಿತ ಸ್ವೀಕಾರ ಅಥವಾ ತಿರಸ್ಕಾರದಿಂದ ಅಥವಾ

(ii) ಅಧಿನಿಯಮ ಅಥವಾ ನಿಯಮಗಳ ಉಪಬಂಧಗಳ ಅನನುಪಾಲನೆಯಿಂದ

- ಬಾಧಕವಾಗಿದೆಯೆಂದು

(ಬಿ) ಯಾರೇ ಅಭ್ಯರ್ಥಿಯ ನಾಮನಿರ್ದೇಶನವನ್ನು ತಪ್ಪಾಗಿ ತಿರಸ್ಕರಿಸಲಾಗಿದೆಯೆಂದು ಅಥವಾ ವಿಜೇತ ಅಭ್ಯರ್ಥಿಯ ಅಥವಾ ತನ್ನ ಉಮೇದುವಾರಿಕೆಯನ್ನು ಹಿಂಪಡೆಯದಿರುವ ಯಾರೇ ಇತರ ಅಭ್ಯರ್ಥಿಯನ್ನು ತಪ್ಪಾಗಿ ಅಂಗೀಕರಿಸಲಾಗಿದೆಯೆಂದು;
ಅಭಿಪ್ರಾಯಪಟ್ಟರೆ;
ಆಗ ಜಿಲ್ಲಾ ನ್ಯಾಯಾಧೀಶರು ಚುನಾಯಿತ ಅಭ್ಯರ್ಥಿಯ ಆಯ್ಕೆ (ಚುನಾವಣೆ) ಯು ಅನೂರ್ಜಿತವಾಗಿದೆಯೆಂದು ಘೋಷಿಸತಕ್ಕದ್ದು.

**131. ಚುನಾಯಿತ ಅಭ್ಯರ್ಥಿಯಲ್ಲದೆ ಬೇರೆ ಅಭ್ಯರ್ಥಿಯನ್ನು ಚುನಾಯಿತನಾಗಿದ್ದಾನೆಂದು ಘೋಷಿಸಬಹುದಾದ ಕಾರಣಗಳು,-** ಒಂದು ವೇಳೆ ಚುನಾವಣಾ ತಕರಾರು ಅರ್ಜಿಯನ್ನು ಸಲ್ಲಿಸಿದ ಯಾರೇ ಅಭ್ಯರ್ಥಿಯು ಇದರೊಂದಿಗೆ ಚುನಾಯಿತ ಅಭ್ಯರ್ಥಿಯ ಆಯ್ಕೆ ಬಗ್ಗೆ, ಪ್ರಶ್ನಿಸಿದಾಗ, ಆತನು ಸ್ವತಃ ಅಥವಾ ಯಾರೇ ಇತರ ಅಭ್ಯರ್ಥಿಯು ವಿದ್ಯುಕ್ತವಾಗಿ ಚುನಾಯಿತನಾಗಿದ್ದಾನೆಂದು ಘೋಷಣೆಯನ್ನು ಕ್ಲೇಮು ಮಾಡಿದರೆ, ಜಿಲ್ಲಾ ನ್ಯಾಯಾಧೀಶರು, ಚುನಾಯಿತ ಅಭ್ಯರ್ಥಿಯ ಆಯ್ಕೆಯು ಅನೂರ್ಜಿತವಾಗಿದೆಯೆಂದು ಘೋಷಿಸಿದ ನಂತರ, ಅರ್ಜಿದಾರ ಅಥವಾ ಅಂಥ ಇತರ ಅಭ್ಯರ್ಥಿಯು, ಸಂದರ್ಭಾನುಸಾರವಾಗಿ, ವಿದ್ಯುಕ್ತವಾಗಿ ಚುನಾಯಿತರಾಗಿರುವರೆಂದು ಘೋಷಿಸತಕ್ಕದ್ದು:

ಪರಂತು, ಅರ್ಜಿದಾರ ಅಥವಾ ಅಂಥ ಇತರ ಅಭ್ಯರ್ಥಿಯನ್ನು, ಅಂಥ ಅಭ್ಯರ್ಥಿಯ ಆಯ್ಕೆಯನ್ನು ಅನೂರ್ಜಿತಗೊಳಿಸಲಾಗಿದೆ ಎಂದು ಸಾಬೀತುಪಡಿಸಲಾಗಿದ್ದರೆ. ಒಂದು ವೇಳೆ ಆತನು ಚುನಾಯಿತ ಅಭ್ಯರ್ಥಿಯಾಗಿದ್ದರೆ ಮತ್ತು ಆತನ ಆಯ್ಕೆಯನ್ನು ಪ್ರಶ್ನಿಸಿ ತಕರಾರು ಅರ್ಜಿಯನ್ನು ಸಲ್ಲಿಸಿದ್ದರೆ ವಿದ್ಯುಕ್ತವಾಗಿ ಚುನಾಯಿತನಾಗಿದ್ದಾನೆಂದು ಘೋಷಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ನಂದಕುಮಾರ್ ಬಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ
(ಬಿಬಿಎಂಪಿ-2 ಮತ್ತು ಸಮನ್ವಯ).

# ನಮೂನೆ-I

(10ನೇ ನಿಯಮದ (1)ನೇ ಉಪ-ನಿಯಮವನ್ನು ನೋಡಿ)

## ಅಧಿಸೂಚನೆ

ಸಂಖ್ಯೆ: ದಿನಾಂಕ:

(1) ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಉಪಬಂಧಗಳ ಮೇರೆಗೆ ಸ್ಥಾಪಿತವಾದ ಗ್ರೇಟರ್ ಬೆಂಗಳೂರು ಪ್ರದೇಶದ ------------------ ನಗರ ಪಾಲಿಕೆಯ, ಸದರಿ ಪಾಲಿಕೆಯ ವಿವಿಧ ವಾರ್ಡುಗಳಿಂದ ಈ ಅಧಿಸೂಚನೆಯ ಅನುಬಂಧದಲ್ಲಿ ವಿವರಗಳನ್ನು ನಮೂದಿಸಿರುವಂತೆ ಚುನಾವಣೆಗಳನ್ನು ನಡೆಸಬೇಕಾಗಿರುವುದರಿಂದ ಬೆಂಗಳೂರು ಚುನಾಯಿತ ಕೌನ್ಸಿಲರುಗಳ ಸ್ಥಾನಗಳನ್ನು ಭರ್ತಿಮಾಡಲು;

(2) --------------- ರವರ * ಮರಣ/ರಾಜೀನಾಮೆ/ಚುನಾವಣೆಯಿಂದ ಉಂಟಾದ ಖಾಲಿ ಸ್ಥಾನವನ್ನು ಭರ್ತಿಮಾಡಲು # ------------- ವಾರ್ಡನ್ನು ಖಾಲಿಯಾದ ಸ್ಥಾನವೆಂದು ಘೋಷಿಸಲಾಗಿದೆ/ ಭರ್ತಿಯಾಗಿಲ್ಲವೆಂದು ಘೋಷಿಸಿರುವುದರಿಂದಾಗಿ ಚುನಾವಣೆಗಳನ್ನು ನಡೆಸಬೇಕಾಗಿರುವುದರಿಂದ,

ಪ್ರಸ್ತುತ, ಆದ್ದರಿಂದ, ಗ್ರೇಟರ್ ಬೆಂಗಳೂರು ಆಡಳಿತ (ಚುನಾವಣೆ) ನಿಯಮಗಳು, 2025ರ 10ನೇ ನಿಯಮಕ್ಕೆ ಅನುಸಾರವಾಗಿ, ನಾನು ------------- ಆಯುಕ್ತರು ಬೆಂಗಳೂರು ------------- ನಗರ ಪಾಲಿಕೆ ಈ ಮೂಲಕ ಸದರಿ ಚುನಾವಣೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಚುನಾವಣಾ ವೇಳಾ ಪಟ್ಟಿಗಳನ್ನು ನಿಗದಿಪಡಿಸುತ್ತೇನೆ.

| | | |
|---|---|---|
| ಎ. | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ | .............. ದಿನಾಂಕ ಮತ್ತು ದಿನ |
| ಬಿ. | ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ | .............. ದಿನಾಂಕ ಮತ್ತು ದಿನ |
| ಸಿ. | ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಕೊನಿಯ ದಿನಾಂಕ | .............. ದಿನಾಂಕ ಮತ್ತು ದಿನ |
| ಡಿ. | ಮತದಾನದ ಅಗತ್ಯವಿದ್ದರೆ ಮತದಾನವನ್ನು ನಡೆಸಬೇಕಾದ ದಿನಾಂಕ | .............. ದಿನಾಂಕ ಮತ್ತು ದಿನ |
| ಇ. | ಚುನಾವಣೆಯು ಯಾವ ದಿನಾಂಕಕ್ಕೆ ಮುಂಚೆ ಮುಕ್ತಾಯಗೊಳ್ಳಬೇಕೋ ಆ ದಿನಾಂಕ | .............. ದಿನಾಂಕ ಮತ್ತು ದಿನ |

*ಅನ್ವಯವಾಗದಿರುವುದನ್ನು ಹೊಡೆದು ಹಾಕಿ.

#ಚುನಾವಣೆಯ ಯುಕ್ತ ವಿವರಗಳನ್ನು ಇದರಲ್ಲಿ ಸೇರಿಸಿ.

## ನಮೂನೆ 1ಕ್ಕೆ ಅನುಬಂಧ

| ಕ್ರ.ಸಂ | ವಾರ್ಡಿನ ಹೆಸರು | ಪ್ರವರ್ಗ ಮೀಸಲಾತಿ |
|---|---|---|
| 1 | 2 | 3 |
| 1. | | |
| 2. | | |
| 3. | | |
| 4. | | |
| 5. | | |
| 6. | | |

ಆಯುಕ್ತರು/ಉಪ-ಅಯುಕ್ತರು

## ನಮೂನೆ-Iಎ

(ನಿಯಮ 10ರ ಉಪ-ನಿಯಮ (3) ನ್ನು ನೋಡಿ)

## ಚುನಾವಣೆ ನೋಟೀಸು

1. ಬೆಂಗಳೂರು ------------- ನಗರ ಪಾಲಿಕೆಯ ---------------- * ವಾರ್ಡಿನಿಂದ ಹಿಂದುಳಿದ ವರ್ಗಗಳ ಎ/ಬಿ**/ಅನುಸೂಚಿತ ಜಾತಿ/ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಮೀಸಲಿಟ್ಟ ಕೌನ್ಸಿಲರ್ ಅನ್ನು ಚುನಾಯಿಸಲು ಚುನಾವಣೆಯನ್ನು ನಡೆಸಲಾಗುವುದೆಂದು.

2. --------------- (ದಿನಾಂಕದ ವರೆಗೆ ಸಾರ್ವಜನಿಕ ರಜಾ ದಿನವನ್ನು ಹೊರತುಪಡಿಸಿ ಯಾವುದೇ ದಿನದಂದು ಬೆಳಿಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 3-00 ಗಂಟೆಯ ನಡುವೆ ರಿಟರ್ನಿಂಗ್ ಅಧಿಕಾರಿಯ ಕಛೇರಿಯಿಂದ ನಾಮಪತ್ರದ ನಮೂನೆಗಳನ್ನು ಪಡೆಯಬಹುದೆಂದು;

3. ನಾಮ ಪತ್ರಗಳನ್ನು ಅಭ್ಯರ್ಥಿ ಅಥವಾ ಆತನ ಸೂಚಕನು ---------------- ದಿನಾಂಕವನ್ನು ಮೀರದಂತೆ ಸಾರ್ವಜನಿಕ ರಜಾ ದಿನವನ್ನು ಹೊರತುಪಡಿಸಿ ಯಾವುದೇ ದಿನದಂದು ಬೆಳಿಗ್ಗೆ 11-00 ಗಂಟೆಯಿಂದ ಮಧ್ಯಾಹ್ನ 3-00 ಗಂಟೆಯ ನಡುವೆ ರಿಟರ್ನಿಂಗ್ ಅಧಿಕಾರಿಗೆ ಒಪ್ಪಿಸಬಹುದೆಂದು;

4. ನಾಮ ಪತ್ರಗಳನ್ನು ---------- ನಲ್ಲಿ (ಸ್ಥಳ) ----------- ರಂದು (ದಿನಾಂಕ) -------------- (ವೇಳೆಯಲ್ಲಿ) ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೆಂದು;

5. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ರಿಟರ್ನಿಂಗ್ ಅಧಿಕಾರಿಯ ಮುಂದೆ ಅವರ ಕಛೇರಿಯಲ್ಲಿ ------------- ದಿನಾಂಕದಂದು ಮಧ್ಯಾಹ್ನ 3-00 ಗಂಟೆಯೊಳಗೆ, ಅಭ್ಯರ್ಥಿ/ಅವನ ಸೂಚಕನು ತಮ್ಮ ಚುನಾವಣಾ ಏಜೆಂಟ್‌ನ ಮೂಲಕ ಒಪ್ಪಿಸಬಹುದೆಂದು;

6. ಚುನಾವಣೆಗೆ ಸ್ಪರ್ಧೆ ಇರುವ ಸಂದರ್ಭದಲ್ಲಿ ಮತದಾನವನ್ನು ----------- (ದಿನಾಂಕ) ದಂದು ---------------- - ಗಂಟೆಯಿಂದ ಮತ್ತು ------------------- ಗಂಟೆಯವರೆಗೆ ನಡೆಸಲಾಗುವುದೆಂದು;

ಈ ಮೂಲಕ ನೀಡಲಾಗಿದೆ.

ಸ್ಥಳ: ------------------

ದಿನಾಂಕ: ----------------

ರಿಟರ್ನಿಂಗ್ ಅಧಿಕಾರಿ

**(*ಚುನಾವಣೆಯ ಯುಕ್ತ ವಿವರಗಳನ್ನು ಇಲ್ಲಿ ಸೇರಿಸುವುದು.**

****ಸೂಕ್ತವಲ್ಲದ ಪರ್ಯಾಯ ಪದಗಳನ್ನು ಹೊಡೆದು ಹಾಕಿ.)**

# ನಮೂನೆ-2

## (ನಿಯಮ 12ರ ಉಪ-ನಿಯಮ (1)ನ್ನು ನೋಡಿ)

## ನಾಮಪತ್ರ

----------- ವಾರ್ಡಿನಿಂದ ಬೆಂಗಳೂರು ------------- ನಗರ ಪಾಲಿಕೆಯ ಕೌನ್ಸಿಲರುಗಳು ಚುನಾವಣೆ.

ಹಿಂದುಳಿದ ವರ್ಗ (ಎ) ಅಥವಾ (ಬಿ) ಗಳಿಗೆ/ಅನುಸೂಚಿತ ಜಾತಿಗೆ/ ಅನುಸೂಚಿತ ಪಂಗಡಕ್ಕೆ/ ಮಹಿಳಿಗೆ ಮೀಸಲಿಟ್ಟ ------------- ವಾರ್ಡಿನಿಂದ ಬೆಂಗಳೂರು ನಗರ ಪಾಲಿಕೆಯ ಕೌನ್ಸಿಲರುಗಳ ಚುನಾವಣೆಗೆ ಒಬ್ಬ ಅಭ್ಯರ್ಥಿಯಾಗಿ

ಶ್ರೀ/ಶ್ರೀಮತಿ --------------- ರವರನ್ನು ನಾನು/ನಾವು* ನಾಮನಿರ್ದೇಶನ ಮಾಡುತ್ತೇನೆ/ಮಾಡುತ್ತೇವೆ.

ಅಭ್ಯರ್ಥಿಯ ಹೆಸರು: ಶ್ರೀ/ಶ್ರೀಮತಿ: --------------

ಆತ/ಆಕೆಯಾ ತಂದೆಯ/ಗಂಡನ ಹೆಸರು: ---------------

ಅಂಚೆ ವಿಳಾಸ: --------------

ಅಭ್ಯರ್ಥಿಯ
ಪಾಸ್ ಪೋರ್ಟ್
ಸೈಜಿನ
ಭಾವ ಚಿತ್ರವನ್ನು
ಅಂಟಿಸಿ

ಆತ/ಆಕೆಯ ಹೆಸರನ್ನು --------------- ವಾರ್ಡಿಗೆ ಸಂಬಂದಿಸಿದ ಮತದಾರರ ಪಟ್ಟಿಯ ------------ ಭಾಗದಲ್ಲಿ -------------- ಕ್ರಮ ಸಂಖ್ಯೆಯಲ್ಲಿ ನಮೂದಿಸಲಾಗಿದೆ.

ಕೆಳಗೆ ನಮೂದಿಸಲಾದಂತೆ ಮತದಾರರ ಪಟ್ಟಿಯಲ್ಲಿ ನಮ್ಮ ಹೆಸರುಗಳನ್ನು ನಮೂಜದಿಸಲಾಗಿದೆ;

| ಕ್ರ. ಸಂ. | ಸೂಚಕನ ಹೆಸರು | ವಯಸ್ಸು | ವಾರ್ಡಿನ ಸಂಖ್ಯೆ, ಭಾಗದ ಸಂಖ್ಯೆ (ಮತದಾರರ ಪಟ್ಟಿಯಲ್ಲಿ ನಮೂದಿಸಲಾದಂತೆ) | ಸಹಿ | ಪಾಸ್ಪೋರ್ಟ್ ಅಳತೆಯ ಭಾವಚಿತ್ರ |
|---|---|---|---|---|---|
| 1. | | | | | |
| 2. | | | | | |
| 3. | | | | | |
| 4. | | | | | |
| 5. | | | | | |
| 6. | | | | | |

*ಚುನಾವಣೆಯಲ್ಲಿ ಸ್ಪರ್ಧಿಸುವುದಕ್ಕಾಗಿ ಅಗತ್ಯಪಡಿಸಿರುವ ಸೂಚಕರ ಸಂಖ್ಯೆ:

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆ | ಸ್ಪರ್ಧಿಸಲು ಅಗತ್ಯಪಡಿಸಿರುವ ಸೂಚಕರ ಸಂಖ್ಯೆ | |
|---|---|---|---|
| | | ಮಾನ್ಯತೆ ಪಡೆದ ಪಕ್ಷದ ಅಭ್ಯರ್ಥಿಯಾಗಿ | ಪಕ್ಷೇತರ/ಸ್ವತಂತ್ರ ಅಭ್ಯರ್ಥಿಯಾಗಿ |
| 1. | ನಗರ ಪಾಲಿಕೆ (ಕಾರ್ಪೊರೇಶನ್) | ಒಂದು | ಆರು |

**(ಅಭ್ಯರ್ಥಿಯು ಭರ್ತಿ ಮಾಡಬೇಕಾದುದು)**

ಮೇಲೆ ಹೇಳಿದ ಅಭ್ಯರ್ಥಿಯಾದ ನಾನು ಈ ನಾಮ ನಿರ್ದೇಶನಕ್ಕೆ ಅನುಮತಿಸಿದ್ದೇನೆ ಮತ್ತು ಈ ಮುಂದಿನಂತೆ ಘೋಷಿಸುತ್ತೇನೆ.

(ಎ) ನಾನು -------------- ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದ್ದೇನೆ.

(ಬಿ) ನಾನೊಬ್ಬ ಮಹಿಳೆ.

(ಸಿ) ನಾನು ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ (ಎ) ಅಥವಾ (ಬಿ) ** ಅನುಸೂಚಿತ ಜಾತಿ/ಅನುಸೂಚಿತ ಪಂಗಡವಾಗಿರುವ ----------- ---ವರ್ಗ/ಜಾತಿ/ಪಂಗಡಕ್ಕೆ ಸೇರಿದ ಸದಸ್ಯನಾಗಿದ್ದೇನೆ.

ಸಮಕ್ಷಮ ಪ್ರಾಧಿಕಾರದಿಂದ ನನ್ನ ಹೆಸರಿಗೆ ನೀಡಲಾದ ಹಿಂದುಳಿದ ವರ್ಗದ (ಎ)/ (ಬಿ)/ ಅನುಸೂಚಿತ ಜಾತಿ/ ಅನುಸೂಚಿತ ಪಂಗಡದ ಪ್ರಮಾಣಪತ್ರವನ್ನು ಲಗತ್ತಿಸಲಾಗಿದೆ.

+ (ಇ) ನಾನು ಆಯ್ಕೆ ಮಾಡಿದ ಚಿಹ್ನೆಗಳು ಆದ್ಯತಾ ಕ್ರಮದಲ್ಲಿ ಈ ಮುಂದಿನಂತಿವೆ:

i.--------------- (ii) -----------------  ಮತ್ತು (iii) -----------------

ದಿನಾಂಕ: -----------------

ಅಭ್ಯರ್ಥಿಯ ಸಹಿ

**(ರಿಟರ್ನಿಂಗ್ ಅಧಿಕಾರಿಯವರು ಭರ್ತಿ ಮಾಡಬೇಕಾದುದು)**

ನಾಮಪತ್ರದ ಕ್ರಮ ಸಂಖ್ಯೆ: --------------------

ಈ ನಾಮಪತ್ರವನ್ನು ನನಗೆ ಶ್ರೀ/ಶ್ರೀಮತಿ -------------- (ಹೆಸರು) ರವರ ಅಭ್ಯರ್ಥಿ/ ಸೂಚಕರು ------------- (ದಿನಾಂಕ) ದಂದು ------------- (ವೇಳೆಯಲ್ಲಿ) ನನ್ನ ಕಚೇರಿಯಲ್ಲಿ ಒಪ್ಪಿಸಿದ್ದಾರೆ.

ದಿನಾಂಕ: --------------------

*ಅನ್ವಯವಾಗದಿರುವ ಪರ್ಯಾಯ ಪದಗಳನ್ನು ತೆಗೆದುಹಾಕಿ.

** ಯುಕ್ತವಲ್ಲದ ಪರ್ಯಾಯ ಪದಗಳನ್ನು ಹೊಡೆದುಹಾಕಿ.

*** ಅನ್ವಯವಾಗದಿರುವ ಖಂಡವನ್ನು ತೆಗೆದುಹಾಕಿ.

ನಾಮಪತ್ರವನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಬಗ್ಗೆ ರಿಟರ್ನಿಂಗ್ ಅಧಿಕಾರಿಯವರ ತೀರ್ಮಾನ.

ಗ್ರೇಟರ್ ಬೆಂಗಳೂರು ಆಡಳಿತ (ಚುನಾವಣೆ) ನಿಯಮಗಳು, 2025ರ 12ನೇ ನಿಯಮದ ಅನುಸಾರವಾಗಿ ನಾನು ಈ ನಾಮಪತ್ರವನ್ನು ಪರಿಶೀಲಿಸಿದ್ದೇನೆ ಹಾಗೂ ಈ ಮುಂದಿನಂತೆ ತೀರ್ಮಾನಿಸಿದ್ದೇನೆ.

ದಿನಾಂಕ: -----------

ರಿಟರ್ನಿಂಗ್ ಅಧಿಕಾರಿ

---------------- ಪ್ರತ್ಯೇಕಿಸುವುದು -------------------

**<u>ನಾಮಪತ್ರದ ಸ್ವೀಕೃತಿ ಮತ್ತು ಪರಿಶೀಲನಾ ನೋಟೀಸು</u>**

**(ನಾಮಪತ್ರವನ್ನು ಸಲ್ಲಿಸುವ ವ್ಯಕ್ತಿಗೆ ನೀಡಬೇಕಾದುದು)**

ನಾಮಪತ್ರದ ಕ್ರಮ ಸಂಖ್ಯೆ: -----------

ಅಭ್ಯರ್ಥಿ/ ಸೂಚಕರು ** ಶ್ರೀ/ಶ್ರೀಮತಿ ------------ ನಗರ ಪಾಲಿಕೆಯ ------------ ವಾರ್ಡಿನಿಂದ ------------ ಚುನಾವಣೆಗಾಗಿ ಅಭ್ಯರ್ಥಿಯಾದ ------------- ಇವರ ನಾಮಪತ್ರವನ್ನು -------------- (ದಿನಾಂಕ) ದಂದು --------------- ಗಂಟೆ ನನ್ನ ಕಛೇರಿಯಲ್ಲಿ ನನಗೆ ಒಪ್ಪಿಸಿದ್ದಾರೆ.

ಎಲ್ಲಾ ನಾಮಪತ್ರಗಳನ್ನು ----------- ರಲ್ಲಿ (ಸ್ಥಳ) ----------- ರಂದು (ದಿನಾಂಕ)--------------- (ವೇಳೆ) ಯಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದು.

ದಿನಾಂಕ: --------------

ರಿಟರ್ನಿಂಗ್ ಅಧಿಕಾರಿ

* ಚುನಾವಣೆಯ ಯುಕ್ತ ವಿವರಗಳನ್ನು ಇಲ್ಲಿ ಸೇರಿಸುವುದು.

**ಸೂಕ್ತವಲ್ಲದ ಪರ್ಯಾಯ ಪದಗಳನ್ನು ಹೊಡೆದುಹಾಕಿ.

## ನಮೂನೆ-3

(ನಿಯಮ 14ನ್ನು ನೋಡಿ)

## ನಾಮಪತ್ರದ ನೋಟೀಸು

ಹಿಂದುಳಿದ ವರ್ಗ (ಎ) ಅಥವಾ (ಬಿ)**/ ಅನುಸೂಚಿತ ಜಾತಿಗೆ/ ಅನಸೂಚಿತ ಪಂಗಡಕ್ಕೆ/ ಮಹಿಳೆಗೆ ಮೀಸಲಿಟ್ಟ --------------- ವಾರ್ಡಿನಿಂದ ಬೆಂಗಳೂರಿನ ನಗರ ಪಾಲಿಕೆಗೆ ಕೌನ್ಸಿಲರುಗಳ ಚುನಾವಣೆ.

ಮೇಲ್ಕಂಡ ಚುನಾವಣೆಯ ಸಂಬಂಧದಲ್ಲಿ ಈ ದಿನ ಅಪರಾಹ್ನ 3:00 ಗಂಟೆಯವರೆಗೆ ಈ ಕೆಳಕಂಡ ನಾಮಪತ್ರಗಳನ್ನು ಸ್ವೀಕರಿಸಲಾಗಿದೆ ಎಂದು ಈ ಮೂಲಕ ನೋಟೀಸನ್ನು ನೀಡಲಾಗಿದೆ.

| ಕ್ರಮ ಸಂಖ್ಯೆ | ನಾಮಪತ್ರದ ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ತಂದೆ/ಗಂಡನ ಹೆಸರು | ಅಭ್ಯರ್ಥಿಯ ವಯಸ್ಸು | ವಿಳಾಸ | ಪಕ್ಷ/ಸ್ವತಂತ್ರ | ಹಿಂದುಳಿದ ವರ್ಗ (ಬಿ)** ಅನುಸೂಚಿತ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳ ಸಂಬಂಧದಲ್ಲಿ ಹಿಂದುಳಿದ ವರ್ಗ (ಎ)/(ಬಿ)**/ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ವಿವರಗಳು | ಅಭ್ಯರ್ಥಿಯ ಮತದಾರ ಪಟ್ಟಿಯ ಭಾಗದ ಸಂಖ್ಯೆ ಮತ್ತು ಕ್ರಮ ಸಂಖ್ಯೆ | ಅಭ್ಯರ್ಥಿಯ ಸೂಚಕನ ಹೆಸರು ಮತ್ತು ಮತದಾರ ಪಟ್ಟಿಯಲ್ಲಿ ಭಾಗದ ಸಂಖ್ಯೆ ಮತ್ತು ಕ್ರಮ ಸಂಖ್ಯೆ |
|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |

ದಿನಾಂಕ: ----------

ಸ್ಥಳ: ------------ ರಿಟರ್ನಿಂಗ್ ಅಧಿಕಾರಿ

* ಚುನಾವಣೆಯ ಯುಕ್ತ ವಿವರಗಳನ್ನು ಇಲ್ಲಿ ಸೇರಿಸುವುದು.

**ಸೂಕ್ತವಲ್ಲದ ಪರ್ಯಾಯ ಪದಗಳನ್ನು ಹೊಡೆದುಹಾಕಿ.

## ನಮೂನೆ-4

(ನಿಯಮ 15ರ ಉಪ-ನಿಯಮ (7)ನ್ನು ನೋಡಿ)

### ಕಾನೂನು ಮಾನ್ಯವಾಗಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ ಪಟ್ಟಿ

ಹಿಂದುಳಿದ ವರ್ಗ (ಎ) ಅಥವಾ (ಬಿ)**/ ಅನುಸೂಚಿತ ಜಾತಿಗೆ/ ಅನಸೂಚಿತ ಪಂಗಡಕ್ಕೆ/ ಮಹಿಳೆಗೆ ಮೀಸಲಿಟ್ಟ --------------- ವಾರ್ಡಿನಿಂದ ಬೆಂಗಳೂರು --------------- ನಗರ ಪಾಲಿಕೆಗೆ ಕೌನ್ಸಿಲರುಗಳ ಚುನಾವಣೆ.

| ಕ್ರ. ಸಂ. | ಅಭ್ಯರ್ಥಿಯ ಹೆಸರು | ತಂದೆ/ ಗಂಡನ ಹೆಸರು | ಅಭ್ಯರ್ಥಿಯ ವಿಳಾಸ |
|---|---|---|---|
| | | | |
| | | | |

ದಿನಾಂಕ: --------------

ಸ್ಥಳ: ---------------- ರಿಟರ್ನಿಂಗ್ ಅಧಿಕಾರಿ

*** ಚುನಾವಣೆಯ ಯುಕ್ತ ವಿವರಗಳನ್ನು ಇಲ್ಲಿ ಸೇರಿಸುವುದು.**

****ಸೂಕ್ತವಲ್ಲದ ಪರ್ಯಾಯ ಪದಗಳನ್ನು ಹೊಡೆದುಹಾಕಿ.**

## ನಮೂನೆ-5

(ನಿಯಮ 16ರ ಉಪ-ನಿಯಮ (1)ನ್ನು ನೋಡಿ)

## ಉಮೇದುವಾರಿಕೆ ಹಿಂತೆಗೆದುಕೊಳ್ಳುವ ನೋಟೀಸು

ಹಿಂದುಳಿದ ವರ್ಗ (ಎ) ಅಥವಾ (ಬಿ)**/ ಅನುಸೂಚಿತ ಜಾತಿಗೆ/ ಅನಸೂಚಿತ ಪಂಗಡಕ್ಕೆ/ ಮಹಿಳೆಗೆ ಮೀಸಲಿಟ್ಟ --------------- ವಾರ್ಡಿನಿಂದ ಬೆಂಗಳೂರಿನ ನಗರ ಪಾಲಿಕೆಗೆ ಕೌನ್ಸಿಲರುಗಳ ಚುನಾವಣೆ.

ಗೆ:

ರಿಟರ್ನಿಂಗ್ ಅಧಿಕಾರಿ,

--------------

--------------

--------------

ಮೇಲ್ಕಂಡ ಚುನಾವಣೆಯಲ್ಲಿ ಕ್ರಮಬದ್ಧವಾಗಿ ನಾಮನಿರ್ದೇಶಿತ ಅಭ್ಯರ್ಥಿಯಾದ --------------- ಎಂಬ ನಾನು ನನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುತ್ತಿದ್ದೇನೆಂದು ಈ ಮೂಲಕ ಸಲ್ಲಿಸುತ್ತಿದ್ದೇನೆ.

ದಿನಾಂಕ: ----------

ಸ್ಥಳ: ------------ ಅಭ್ಯರ್ಥಿಯ ಸಹಿ

ಹಿಂತೆಗೆದುಕೊಳ್ಳುವ ನೋಟೀಸಿನ ಸ್ವೀಕೃತಿ

(ನೋಟೀಸನ್ನು ಒಪ್ಪಿಸುವ ವ್ಯಕ್ತಿಗೆ ನೀಡಬೇಕಾದುದು)

------------ ನಗರ ಪಾಲಿಕೆಯ ------------ * ವಾರ್ಡಿಗೆ ನಡೆಯುವ ಚುನಾವಣೆಯಲ್ಲಿ ಕ್ರಮಬದ್ಧವಾಗಿ ನಾಮನಿರ್ದೇಶಿತ ಅಭ್ಯರ್ಥಿಯಾದ ------------ ರವರು ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ------------ (ದಿನಾಂಕ) ದಂದು ----------- ರಲ್ಲಿ ------------ (ವೇಳೆ) ನನ್ನ ಕಛೇರಿಯಲ್ಲಿ ------------ * ಅವರು ತಂದೊಪ್ಪಿಸಿರುತ್ತಾರೆ.

ಸ್ಥಳ: ------------

ದಿನಾಂಕ: ---------- ರಿಟರ್ನಿಂಗ್ ಅಧಿಕಾರಿ

*** ಚುನಾವಣೆಯ ಯುಕ್ತ ವಿವರಗಳನ್ನು ಇಲ್ಲಿ ಸೇರಿಸುವುದು.**

****ಸೂಕ್ತವಲ್ಲದ ಪರ್ಯಾಯ ಪದಗಳನ್ನು ಹೊಡೆದುಹಾಕಿ.**

***ಇಲ್ಲಿ ಈ ಕೆಳಕಂಡ ಪರ್ಯಾಯ ವಿಷಯಗಳಲ್ಲಿ ಯುಕ್ತವಾದದನ್ನು ಸೇರಿಸಿ**.

(1) ಅಭ್ಯರ್ಥಿ.

(2) ಅದನ್ನು ಒಪ್ಪಿಸಲು ಅಭ್ಯರ್ಥಿಯಿಂದ ಲಿಖಿತದಲ್ಲಿ ಅಧಿಕೃತಗೊಳಿಸಲಾಗಿರುವ ಅಭ್ಯರ್ಥಿಗಳ ಸೂಚಕ.

(3) ಅದನ್ನು ಒಪ್ಪಿಸಲು ಅಭ್ಯರ್ಥಿಯಿಂದ ಲಿಖಿತದಲ್ಲಿ ಅಧಿಕೃತಗೊಳಿಸಲಾಗಿರುವ ಅಭ್ಯರ್ಥಿಗಳ ಚುನಾವಣಾ ಏಜೆಂಟ್.

